ಐಕ್ಯರಂಗ

ಒಳಪುಟಗಳಲ್ಲಿ....

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ ಸೆಪ್ಟೆಂಬರ್ 18, 1988 ಸಂಪುಟ-10 ಸಂಚಿಕೆ-38 ರೂ. 1-00

ಮಳೆ, ಮಳೆ, ಮಳೆ....

ಬೆಂಗಳೂರಿನಲ್ಲಿ ಧಾರಾಕಾರ ಮಳೆ

ಮಹಾನಗರಪಾಲಿಕೆ ಆಡಳಿತ ಬಟ್ಟಬಯಲಿಗೆ

ಬೆಂಗಳೂರಿನಲ್ಲಿ ಈಗ ಕೆಲವು ದಿನಗಳಲ್ಲಿ ಧಾರಾಕಾರವಾಗಿ ಸುರಿದ ಮಳೆ 30 ಕ್ಕೂ ಅಧಿಕ ಪ್ರಾಣಗಳನ್ನು ಆಹುತಿ ತೆಗೆದುಕೊಂಡಿದೆ, ಸಾವಿರಾರು ಗುಡಿಸಲುಗಳನ್ನು ನೆಲಸಮ ಮಾಡಿದೆ, ಕೋಟಿಗಟ್ಟಲೆ ರೈತರ ಬೆಳೆಗಳನ್ನು ನಾಶಮಾಡಿದೆ....ಇದಕ್ಕಿಂತಲೂ ಹೆಚ್ಚಾಗಿ ಬೆಂಗಳೂರು ಮಹಾನಗರಪಾಲಿಕೆಯ ಆಡಳಿತೆಯ ಅದಕ್ಷತೆ ಮತ್ತು ಭ್ರಷ್ಟತೆಯನ್ನು ಬಟ್ಟಬಯಲು ಮಾಡಿದೆ.

ಒಂದು ದಿನಪತ್ರಿಕೆಯಲ್ಲಿ ಪ್ರಕಟವಾದ ಸುದ್ದಿ ಬಹಳಷ್ಟು ಅರ್ಥಗರ್ಭಿತ : ಧಾರಾಕಾರವಾಗಿ ಸುರಿದ ನೀರು ಯಾವ ಚರಂಡಿಗಳಲ್ಲಿ ಹೋಗುತ್ತದೆ ? ಚರಂಡಿಗಳ ನೀರು ಎಲ್ಲಿ ಹೋಗಿ ಸೇರುತ್ತದೆ ? ಉತ್ತರ : ಎಲ್ಲಿಗೂ ಇಲ್ಲ. ಅಂದರೆ, ನೀರು ಮಾರ್ಗಗಳ ಮೇಲೆ ನಿಂತು, ಹಲವಾರು ಅಡಿ ಏರಿ, ನೆರೆಹೊರೆಯ ಕಟ್ಟಡಗಳನ್ನು ಸುತ್ತುವರಿದು, ಮಣ್ಣಿನ ಅಥವಾ ಇಟ್ಟಿಗೆ ಗೋಡೆಗಳನ್ನು ತೋಯಿಸಿ ಅವುಗಳನ್ನು ಉರುಳಿಸುತ್ತದೆ ....

ಬಡವರ ಮನೆಗಳಿಗೆಲ್ಲಾ ಕುತ್ತು !

ಮೊದಲೇ ಮನೆಗಳಿಲ್ಲದೆ ಬಡವರ ಕುಟುಂಬಗಳು ಅಲೆದಾಡುತ್ತಿರುವಾಗ, ಈಗ ಇದ್ದ ಸಾವಿರಾರು ಮನೆಗಳೂ ಕುಸಿದು, ಅವರು ಇನ್ನಷ್ಟು ನಿರ್ಗತಿಕರಾಗಿದ್ದಾರೆ.

ಮಹಾನಗರಪಾಲಿಕೆ ಯಾಕೆ ಮಳೆಗಾಲದ ಪೂರ್ವವ್ಯವಸ್ಥೆ ಮಾಡಲಿಲ್ಲ ? ಹಲವಾರು ವರ್ಷಗಳ ಕಾಲ ಇದ್ದ ಅಲ್ಪಸ್ವಲ್ಪ ಚರಂಡಿಗಳೂ ನಾದುರಸ್ತಿಯಾಗಿದ್ದುದು – ಭ್ರಷ್ಟ ಆಡಳಿತೆಯ ವೈಖರಿ – ಈ ಮಳೆಯಿಂದ ಸ್ಪಷ್ಟ ಎದ್ದು ಬಂತು.

ಇದ್ದ ಟ್ಯಾಂಕ್‌ಗಳೆಲ್ಲಾ ತುಂಬಿ ಎಲ್ಲಾ ತಗ್ಗಿನ ಸ್ಥಳಗಳು ಮಹಾಪೂರಕ್ಕೆ ಒಳಗಾಗಿ ಎಲ್ಲಾ ತರದ ಕಷ್ಟ ನಷ್ಟಕ್ಕೆ ಕಾರಣವಾಯಿತು.

ತುರ್ತು ಪರಿಹಾರಕ್ಕೆ ಏನು ಏರ್ಪಾಡು ಇತ್ತು ?

ಏನೂ ಇಲ್ಲ.

ಮೇಯರರು, ಉಪಮೇಯರು, ಹಳೆ ಮೇಯರು, ಕಾರ್ಪೊರೇಟರುಗಳು, ಅಧಿಕಾರಿಗಳು, ಇಂಜಿನಿಯರರು .... ಬಂದದ್ದೇ ಬಂದದ್ದು, ನೋಡಿದ್ದೇ ನೋಡಿದ್ದು, ಓಡಿದ್ದೇ ಓಡಿದ್ದು ... ಹೇಳಿಕೆಗಳನ್ನು ಇತ್ತದ್ದೇ ಇತ್ತದ್ದು ... ಆದರೆ ಪರಿಹಾರ ? ಪರಿಹಾರ ಮಾತ್ರ "ಶೂನ್ಯ".

ಹಾಗಾದರೆ ರಾಜ್ಯ ಸರಕಾರದ ಜವಾಬ್ದಾರಿ ಇಲ್ಲವೆ ?

ಖಂಡಿತ ಇದೆ. ಅವರೂ ಓಡಾಡಿದರು. ಮಂತ್ರಿವರ್ಯ ದೇಶಪಾಂಡೆಯವರೂ ಸಂಚರಿಸಿದರು. ಘೇರಾವೂ ನಡೆಯಿತು. ಸ್ವಾಭಾವಿಕ ... ಮಂತ್ರಿಗಳೂ, ಮುಖ್ಯಮಂತ್ರಿಗಳೂ ಭೆಟ್ಟಿ ಮಾಡಿದರು. ಸಹಾನುಭೂತಿ ವ್ಯಕ್ತಪಡಿಸಿದರು.

ಇನ್ನು ಕೇಂದ್ರ ಸರಕಾರ ಏನು ಮಾಡಿತು ?

ಏನೂ ಮಾಡಲಿಲ್ಲ.

ಬಿಹಾರದ ಭೂಕಂಪದಿಂದ ಬಾಧಿತರಾದ ಲಕ್ಷಾಂತರ ಮಂದಿಗೆ ಏನೂ ಮಾಡದ ಭಾರತದ ಕೇಂದ್ರ ಸರಕಾರ, ಅಸ್ಸಾಂನ ಮಹಾಪೂರದಲ್ಲಿ ಕಷ್ಟನಷ್ಟಕ್ಕೊಳಗಾದ ಲಕ್ಷಾಂತರ ಗ್ರಾಮಾಂತರದ ಜನರಿಗೆ ಏನೂ ಮಾಡದ ಭಾರತದ ಕೇಂದ್ರ ಸರಕಾರ .... ಬೆಂಗಳೂರಿನ ಮಳೆಯಿಂದ ನಷ್ಟ ಹೊಂದಿದ ಜನರ ಸಹಾಯಕ್ಕೆ ಬರುವುದೊ ? ಖಂಡಿತ ಬರುವುದಿಲ್ಲ.

ಆದರೆ ಬೇಗಳೂರಿಗೆ ಬಂದಿದ್ದರು – ಕೇಂದ್ರದ ಗ್ರಾಮಾಭಿವೃದ್ಧಿ ಮಂತ್ರಿ ಹಾಗೂ ಕರ್ನಾಟಕದ ಕಾಂಗ್ರೆ ಅಧ್ಯಕ್ಷರು. ತಿರುಗಾಟ ನಡೆಸಿದರು, ಸಹಾನುಭೂತಿ ಕಣ್ಣೀರು ಸುರಿಸಿದರು .... ತಮ್ಮ ಪಕ್ಷದ ವತಿಯಿಂದ ಸಹಾಯ ಸಾರಿದರು, ರಾಜ್ಯ ಸರಕಾರವನ್ನು ದೂರಿದರು. ಮುಖ್ಯಮಂತ್ರಿ ಬೊಮ್ಮಾಯಿ ಎಲ್ಲಿ ಎಂದು ಪ್ರಶ್ನಿಸಿದರು. ಆದರೆ, ಕೇಂದ್ರ ಸರಕಾರ ಸಹಾಯ ಪರಿಹಾರ ಕೂಡಲೇ ಯುದ್ಧೋಪಾದಿಯಲ್ಲಿ ಬೆಂಗಳೂರಿಗೆ ಕಳುಹಿಸುವ ನಿಟ್ಟಿನಲ್ಲಿ ಅವರು ಮೌನ ! ಯಾಕೆ !? ಇದೇ ಇಂದಿನ ರಾಜಕೀಯ ವೈಖರಿ.

42 ವರ್ಷಗಳ ಸ್ವಾತಂತ್ರ್ಯಾಡಳಿತೆಯ ನಂತರ, ನಿಸರ್ಗದ ಕೋಪಕ್ಕೆ ತುತ್ತಾದ ಬಡ ಜನರ ಹೆಸರಿನಲ್ಲಿ "ಕಪಟ ರಾಜಕೀಯ" ನಡೆಯುತ್ತಿದೆ ವಿನಹ, ನಿಜವಾದ ಪರಿಹಾರ ಒದಗುವುದಿಲ್ಲ.

ಜನತೆ ಈ ಬಗ್ಗೆ ತಮ್ಮ ಕೋಪವನ್ನು ವ್ಯಕ್ತಪಡಿಸಬೇಕು. ಸರಕಾರಗಳ, ಮಹಾನಗರ ಪಾಲಿಕೆಗಳ ಕರ್ತವ್ಯಲೋಪವನ್ನು ಬೊಟ್ಟು ಮಾಡಿ ತೋರಿಸಿ ಖಂಡಿಸಬೇಕು.

ಅದೇ ತಮ್ಮಿಂದ ಸಾಧ್ಯವಿದ್ದಷ್ಟು ಸಹಾಯವನ್ನು ಸಂತ್ರಸ್ತರಿಗೆ 'ಒದಗಿಸುವದಕ್ಕೆ ಮುಂದಾಗಬೇಕು'

—ಪಿ. ರಾಮಚಂದ್ರರಾವ್

ನೃಪೇನ್ ಮೇಲೆ ಪೊಲೀಸರ ಬರ್ಬರ ಹಲ್ಲೆ

ತ್ರಿಪುರದಾದ್ಯಂತ ಜನತೆಯ ಖಂಡನೆ

ತ್ರಿಪುರಾದ ಮಾಜೀ ಮುಖ್ಯಮಂತ್ರಿ ಕಾಂ॥ ನೃಪೇನ್ ಚಕ್ರವರ್ತಿ ಮತ್ತಿತರ ಸಿ.ಪಿ.ಐ.(ಎಂ) ಮುಖಂಡರ ಮೇಲೆ ಪೈಶಾಚಿಕ ಹಲ್ಲೆ ನಡೆಸಿದ ಪೊಲೀಸರ ಬರ್ಬರ ಕೃತ್ಯವನ್ನು ಪ್ರತಿಭಟಿಸಿ ಸೆ. 14ರಂದು ತ್ರಿಪುರ ರಾಜ್ಯಾದ್ಯಂತ ನಡೆದ ಬಂದ್ ಕಾರ್ಯಕ್ರಮ ಅಮೋಘ ಯಶಸ್ಸು ಗಳಿಸಿ ಅಚ್ಚರಿ ಹುಟ್ಟಿಸಿದೆ.

ಭೂಸುಧಾರಣೆ ಜಾರಿಗಾಗಿ ಒತ್ತಾಯಿಸಿ ನಾಡಿನಾದ್ಯಂತ ರೈತರು ಚಳುವಳಿ ನಡೆಸುತ್ತಿದ್ದಾರೆ. ಇದರ ಒಂದು ಭಾಗವಾಗಿ ತ್ರಿಪುರದಲ್ಲಿ 13ರಂದು ಕಾಂ॥ ನೃಪೇನ್‌ರವರ ಮುಂದಾಳತ್ವದಲ್ಲಿ ರೈತರು ಪಿಕೆಟಿಂಗ್ ಕಾರ್ಯಕ್ರಮ ನಡೆಸಿದರು.

ಆದರೆ ತ್ರಿಪುರಾದ ಕಾಂಗ್ರೆ-ಟಿ.ಯು.ಜೆ.ಎಸ್. ಸರ್ಕಾರ ಪೊಲೀಸರನ್ನು ಛೂಬಿಟ್ಟು ಹೋರಾಟ ನಿರತ ರೈತರ ಮೇಲೆ ಬರ್ಬರ ಆಕ್ರಮಣ ನಡೆಸಿತು. ಮಾಜೀ ಮುಖ್ಯಮಂತ್ರಿ ಎಂಬುದನ್ನೂ ಪರಿಗಣಿಸದೆ ವಯೋವೃದ್ಧರಾದ, ತ್ರಿಪುರ ಜನತೆಯ ಪ್ರೀತಿಯ ನಾಯಕರಾದ ಕಾಂ॥ ನೃಪೇನ್ ಚಕ್ರವರ್ತಿಯವರನ್ನು ಸಹ ಪೊಲೀಸರು ಮೂರ್ಛೆ ಹೋಗುವಂತೆ ಹೊಡೆದಿದ್ದು ಎದೆಯ ಮೇಲೆ ಗಾಯಗಳಾಗಿವೆ. ನಂತರ ಅವರನ್ನು ಆಸ್ಪತ್ರೆಗೆ ಸೇರಿಸಲಾಗಿದೆ. ಈ ಅಮಾನುಷ ಹಲ್ಲೆಯನ್ನು ಖಂಡಿಸಿ ತ್ರಿಪುರ ರಾಜ್ಯದಾದ್ಯಂತ ಸಂಪೂರ್ಣ ಬಂದ್ ಆಚರಿಸುವಂತೆ ಸಿ.ಪಿ.ಐ. (ಎಂ) ಕರೆ ನೀಡಿತು.

ಈ ಕರೆಯ ಪ್ರಕಾರ ಮರುದಿನವೇ (14-9-88) ನಡೆದ ಬಂದ್‌ಗೆ ಪ್ರತಿಸ್ಪಂದಿಸಿದ ತ್ರಿಪುರದ ಜನತೆ ಬಂದನ್ನು ಅತ್ಯಂತ ಯಶಸ್ವಿಗೊಳಿಸಿ ತನ್ನ ಪ್ರೀತಿಪಾತ್ರ ನಾಯಕನ ಮೇಲಿನ ಹಲ್ಲೆಯನ್ನು ತೀವ್ರ ಆವೇಶಗಳಿಂದ ಪ್ರತಿಭಟಿಸಿತು. ಅಂಗಡಿಗಳು, ವಾಣಿಜ್ಯ ಕೇಂದ್ರಗಳು ಮುಚ್ಚಲ್ಪಟ್ಟವು. ರಸ್ತೆಗಳು ವಾಹನ ಸಂಚಾರವಿಲ್ಲದೆ ಬಿಕೋ ಎನ್ನುತ್ತಿದ್ದವು.

ಸರ್ಕಾರವು ಪೊಲೀಸರ ಮೂಲಕ ಬೆದರಿಕೆ ಹುಟ್ಟಿಸಿ ಕೆಲವು ವಾಹನಗಳನ್ನು ಓಡಿಸಿದರು. ಪೊಲೀಸರಿಂದ ವ್ಯಾಪಕವಾಗಿ ಭಯೋತ್ಪಾದನೆ ನಡೆಸಲಾಯಿತು. ಆದರೂ ಸಹ ಬಂದ್ ಕರೆಗೆ ಓಗೊಟ್ಟ ತ್ರಿಪುರದ ಜನತೆ ಕಾಂಗ್ರೆಸ್‌ನ ಕರಾಳ ಸರ್ಕಾರಕ್ಕೆ ತನ್ನ ವಿರೋಧವನ್ನು ವ್ಯಕ್ತಪಡಿಸಿದೆ.

ಕಾಂ॥ ನೃಪೇನ್‌ರವರ ಮೇಲೆ ಹಲ್ಲೆಯ ಸುದ್ದಿ ಬಂದ ತಕ್ಷಣ ಕೇರಳದ ಮೂಲೆ ಮೂಲೆಗಳಲ್ಲೂ ಪ್ರತಿಭಟನೆ ವ್ಯಕ್ತಪಟ್ಟಿರುವ ಬಗ್ಗೆ ವರದಿಗಳು ಬಂದಿವೆ.

(ಬೆಂಗಳೂರಿನಲ್ಲಿ ಪ್ರತಿಭಟನೆ ಬಗ್ಗೆ ಪುಟ 4 ನೋಡಿ.)

ಪಶ್ಚಿಮ ಬಂಗಾಳದಲ್ಲಿ ಮತ್ತೊಂದು ಯಶಸ್ವೀ ಬಂದ್

ಕೇಂದ್ರದ ಸರ್ವಾಧಿಕಾರಿ ಪ್ರವೃತ್ತಿಗೆ ಸವಾಲು

ಸೆಪ್ಟೆಂಬರ್ 14 ರಂದು ಎಡರಂಗದ ಕರೆಯ ಮೇರೆಗೆ 'ಬಾಂಗ್ಲಾ ಬಂದ್' ಅತ್ಯಂತ ಯಶಸ್ವಿಯಾದ ಬಗ್ಗೆ ಪತ್ರಿಕೆಗಳು ಮಾತ್ರವಲ್ಲ, ಕೇಂದ್ರದ ತುತ್ತೂರಿ ಮಾಧ್ಯಮಗಳೂ ಪ್ರಸಾರ ಮಾಡಿವೆ. ಇದು ಪಶ್ಚಿಮ ಬಂಗಾಳದ ಜನತೆಯ ಆಶೋತ್ತರಗಳನ್ನು ಬಿಂಬಿಸುವಲ್ಲಿ ಎಡರಂಗದ ಅಸಾಮಾನ್ಯ ಸಫಲತೆಯ ದ್ಯೋತಕವೆನ್ನಬಹುದು.

ಹಿಂದಿನ ಬಂದ್ ರಾಜ್ಯದ ಬೇಡಿಕೆಗಳ ಬಗ್ಗೆ ಗಮನ ಸೆಳೆದರೆ ಈ ಬಂದ್ ಕರೆ ನಿರ್ದಿಷ್ಟವಾಗಿ ಕೇಂದ್ರದ ಸರ್ವಾಧಿಕಾರಿ ಪ್ರವೃತ್ತಿಯನ್ನು ವಿರೋಧಿಸಿ ನಡೆಯಿತೆಂಬುದು ಗಮನಾರ್ಹ. 59ನೇ ತಿದ್ದುಪಡಿ, ಕಾರ್ಮಿಕ ಸಂಘಟನೆ ತಿದ್ದುಪಡಿ ಮಸೂದೆ, ಕೈಗಾರಿಕವಿವಾದ ಮಸೂದೆ, ಆಸ್ಪತ್ರೆ ಮತ್ತಿತರ ಸಂಸ್ಥೆಗಳ ಮಸೂದೆ ಮತ್ತು ಇತ್ತೀಚೆಗೆ ದೇಶಾದ್ಯಂತ ತೀವ್ರ ಪ್ರತಿಭಟನೆ ಕಂಡಿರುವ ಮಾನನಷ್ಟ ಮಸೂದೆ ಇವನೆಲ್ಲಾ ವಾಪಸು ಪಡೆಯಬೇಕು, ಇವುಗಳ ಮೂಲಕ ಸರ್ವಾಧಿಕಾರದತ್ತ ದಾಪುಗಾಲು ಹಾಕುತ್ತಿರುವ, ಇಂತಹ ಕರಾಳ ಕ್ರಮಗಳಿಂದ ಮಾತ್ರವೇ ತಾನು ಅಧಿಕಾರದಲ್ಲಿರಲು ಸಾಧ್ಯ ಎಂದು ತನ್ನ ವಿಫಲತೆ ತೋಡಿಕೊಂಡಿರುವ ರಾಜೀವ ಸರ್ಕಾರ ರಾಜಿನಾಮೆ ನೀಡಿ ಹೊಸ ಚುನಾವಣೆ ನಡೆಸಬೇಕೆಂದು ಈ ಯಶಸ್ವಿ ಬಂದ್ ಮೂಲಕ ಪಶ್ಚಿಮ ಬಂಗಾಳದ ಜನತೆ ಒತ್ತಾಯಿಸಿದ್ದಾರೆ.

ನೂತನ ಶಿಕ್ಷಣ ನೀತಿ ವಿರೋಧಿಸಿ 'ಶಿಕ್ಷಣ ಉಳಿಸಿ' ಯಶಸ್ವಿ ರಾಜ್ಯ ಸಮಾವೇಶ

ಕೇಂದ್ರ ಸರ್ಕಾರದ ನೂತನ ಶಿಕ್ಷಣ ನೀತಿಯ ಜಾರಿಯನ್ನು ವಿರೋಧಿಸಿ 'ಶಿಕ್ಷಣ ಉಳಿಸಿ' ಸಮಾವೇಶವನ್ನು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಕರ್ನಾಟಕ ರಾಜ್ಯ ಸಮಿತಿಯು ಇದೇ ಸೆಪ್ಟಂಬರ್ 9 ರಂದು ಬೆಂಗಳೂರು ನಗರದ ಟೌನ್ ಹಾಲ್‌ನಲ್ಲಿ ಸಂಘಟಿಸಿತ್ತು.

ಈ ಸಮಾವೇಶದ ಉದ್ಘಾಟನೆಯನ್ನು ಪ. ಬಂಗಾಳದ ಎಡರಂಗ ಸರ್ಕಾರದ ಶಿಕ್ಷಣ ಸಚಿವ ಕಾಂತಿಬಿಸ್ವಾಸ್‌ರವರು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು.

ಶಿಕ್ಷಣ ಉಳ್ಳವರು ಖರೀದಿಸುವ ದುಬಾರಿ ವಸ್ತುವಾಗುತ್ತಿದ್ದು ಜನಸಾಮಾನ್ಯರಿಂದ ದೂರವಾಗುತ್ತಲಿದೆ. ಖಾಸಗೀಕರಣ ಹೆಚ್ಚುತ್ತಲಿದೆ. ಸಾರ್ವತ್ರಿಕ ಶಿಕ್ಷಣದ ಸಂವಿಧಾನದ ಭರವಸೆಯ ಮೂಲಕ್ಕೆ ಕೊಡಲಿಯೇಟು ಹಾಕುತ್ತಿರುವ ಈ ನೂತನ ಶಿಕ್ಷಣ ನೀತಿಯ ವಿರುದ್ಧ ಒಕ್ಕೊರಲಿನ ಹೋರಾಟ ನಡೆಸುವುದು ಅಗತ್ಯವೆಂದು ಹೇಳಿದರು. (8ನೇ ಪುಟಕ್ಕೆ)

ಒಲಂಪಿಕ್ಸ್: ಬಹಿಷ್ಕಾರದ ಹಾಡು

—ಜಿ.ಎನ್. ಮೋಹನ್

ಸೆಪ್ಟೆಂಬರ್ 17.

ಇಡೀ ವಿಶ್ವ ಸಿಯೋಲ್ ನತ್ತ ಕಣ್ಣು ನೆಟ್ಟು ಕೂತಿದೆ. ದಕ್ಷಿಣ ಕೊರಿಯಾದ ಸಿಯೋಲ್‌ನಲ್ಲಿ ಪ್ರಾರಂಭವಾಗಲಿರುವ 24ನೆಯ ಒಲಂಪಿಕ್ಸ್ ಈಗಾಗಲೇ ವಿಶ್ವದ ಕ್ರೀಡಾಪ್ರೇಮಿಗಳಲ್ಲಿ ಹೊಸ ಜ್ವರ ಹುಟ್ಟು ಹಾಕಿದೆ. 12 ವರ್ಷಗಳ ನಂತರ ಮೊತ್ತಮೊದಲ ಬಾರಿಗೆ ಸೋವಿಯತ್ ದೇಶ ಹಾಗೂ ಅಮೇರಿಕಾ ಒಲಂಪಿಕ್ಸ್‌ನಲ್ಲಿ ಮುಖಾಮುಖಿಯಾಗುತ್ತಿರುವುದು ಈ ಜ್ವರಕ್ಕೆ ಇನ್ನಷ್ಟು ವೇಗ ತಂದಿದೆ.

ಒಲಂಪಿಕ್ಸ್' ಎಂಬ ಶಬ್ದ ಕೇಳಿ ಬರುತ್ತಿದ್ದಂತೆಯೇ ಅವರ ಜೊತೆ ಜೊತೆಗೇ 'ಬಹಿಷ್ಕಾರದ ಮಾತೂ ಕೇಳಿಬರುತ್ತಿದೆ. ಒಲಂಪಿಕ್ಸ್‌ನಲ್ಲಿ 12 ವರ್ಷಗಳ ಕಾಲ ಸೋವಿಯತ್‌ದೇಶ ಹಾಗೂ ಅಮೇರಿಕಾ ಮುಖಾಮುಖಿಯಾಗದ್ದು ಒಂದು ಇತಿಹಾಸವೇ ಸರಿ. ಒಲಂಪಿಕ್ಸ್‌ನ ಜೊತೆಯಲ್ಲಿಯೇ ವಿಶ್ವದ ರಾಜಕೀಯವೂ ಬಯಲಿಗೆ ಬರುತ್ತದೆ. ಒಲಂಪಿಕ್ಸ್ ವಿಶ್ವದ ರಾಜಕೀಯ ಸ್ಥಿತಿಯ ಒರೆಗಲ್ಲು.

ಒಲಂಪಿಕ್ಸ್ 1896ರಲ್ಲಿ ಪುನರಾರಂಭವಾದಾಗ ಆಧುನಿಕ ಒಲಂಪಿಕ್ಸ್‌ಪ್ರಾರಂಭಿ ಕಾರಣರಾದ ಫ್ರಾನ್ಸಿನ ಪಿಯರೇಟಿ ಬಟ್ಟ ಒಲಂಪಿಕ್ಸ್ ವಿಶ್ವದ ಎಲ್ಲಾ ರಾಷ್ಟ್ರಗಳ ನಡುವಣ ಭ್ರಾತೃತ್ವವನ್ನು ಉತ್ತೇಜಿಸಿ ಶಾಂತಿ ಹಾಗೂ ಪರಸ್ಪರರ ಅರಿವಿನ ಆಳವನ್ನು ವಿಸ್ತರಿಸುತ್ತದೆ ಎಂದು ಕನಸು ಕಂಡಿದ್ದರು. 1895ರಲ್ಲಿ ಮೊದಲ ಒಲಂಪಿಕ್‌ಗಾಗಿ ಮುದ್ರಿಸಲಾದ ಕರಪತ್ರಗಳಲ್ಲಿ 'ಏನೇ ಬರಲಿ ಒಲಂಪಿಕ್ಸ್ ಸ್ಪರ್ಧೆಗಳು ಅಂತರರಾಷ್ಟ್ರೀಯ ರಾಜಕೀಯದಲ್ಲಿ ಸಿಲುಕದೆ ಮುಂದುವರೆಯಲಿ' ಎಂದು ಆಶಿಸಿತು.

'ಶಾಂತಿಗಾಗಿ ಕ್ರೀಡೆ' ಒಲಂಪಿಕ್ಸ್‌ನ ಘೋಷಣೆ. ವಿಶ್ವದ ಎಲ್ಲಾ ರಾಷ್ಟ್ರಗಳ ನಡುವೆ ಸ್ನೇಹ, ಸಹಕಾರ ಹಾಗೂ ಶಾಂತಿಯ ಬೆಸುಗೆಯನ್ನು ಹಾಕಲು ಪ್ರಾರಂಭವಾದ ಈ ಕ್ರೀಡೆಗಳು ಕಂಡ ದುರಂತಗಳೆಷ್ಟೋ 1972ರಲ್ಲಿ ಮ್ಯೂನಿಚ್ ಒಲಂಪಿಕ್ಸ್‌ನ ಸಮಯದಲ್ಲಿ ನಡೆದದ್ದು ಮಾನವೀಯ ಇತಿಹಾಸದಲ್ಲಿನ ಬರ್ಬರ ಕಾಂಡ. ಸೆಪ್ಟೆಂಬರ್ 5ರ ರಾತ್ರಿಯ ಪ್ರಶಾಂತತೆಯಲ್ಲಿ ಒಲಂಪಿಕ್ಸ್ ಕ್ರೀಡಾಳುಗಳ ಸ್ಪರ್ಧೆಗಳ ಗ್ರಾಮ ಪ್ರವೇಶಿಸಿದಪ್ಯಾಲೆಸ್ಟೀನ್‌ನ ಭಯೋತ್ಪಾದಕರು ಮ್ಯೂನಿಚ್‌ನ್ನು ರಕ್ತದಲ್ಲಿ ಮುಳುಗಿಸಿದರು. 11 ಜನ ಕ್ರೀಡಾಳುಗಳು ರಾಜಕೀಯ ಭಯೋತ್ಪಾದಕರ ಗುಂಡೇಟಿಗೆ ಜೀವ ತೆತ್ತದ್ದು ಎಂದೆಂದಿಗೂ ಅಳಿಸಲಾಗದ ಕಪ್ಪು ಅಧ್ಯಾಯ. ಮ್ಯೂನಿಚ್‌ನ ಸ್ಪರ್ಧೆಗಳು ಅಸ್ಥಿರತೆಯಲ್ಲಿ ಮುಳುಗಿದ್ದಾಗ ಅಂತರಾಷ್ಟ್ರೀಯ ಒಲಂಪಿಕ್ಸ್ ಸಂಸ್ಥೆಯ ಅಧ್ಯಕ್ಷ ಆವೆರಿ ಬ್ರುಂಡೇಜ್ ಕ್ರೈಬೆರಣಿಕಯಷ್ಟು ಉಗ್ರಗಾಮಿಗಳು ಇಲ್ಲಿ ನೆರೆದ ಜಾಗತಿಕ ಸಮುದಾಯದ ಸಹಕಾರ ಹಾಗೂ ಅರಿವಿನಚಿಹ್ನೆಯಾದ ಒಲಂಪಿಕ್ಸ್ ಸ್ಪರ್ಧೆಗಳನ್ನು ಸಿಲ್ಲಿಸಲು ಬಿಡುವುದಿಲ್ಲ ಎಂದರು. ಒಲಂಪಿಕ್ಸ್ ಮುಂದುವರಿಯಿತು.

1972ಕ್ಕೂ ಮೊದಲೇ ಒಲಂಪಿಕ್ಸ್ ನಾನಾ ರೀತಿಯ ತಿರುವುಗಳನ್ನು ಕಂಡಿತ್ತು. 1930ರ ಒಲಂಪಿಕ್ಸ್ ಸ್ಪರ್ಧೆಗಳು ಬರ್ಲಿನ್‌ನಲ್ಲಿ ನಡೆದಾಗ, ಸರ್ವಾಧಿಕಾರಿ ಹಿಟ್ಲರನಿಗೆ ಅವನು ಪ್ರತಿಪಾದಿಸುತ್ತಿದ್ದ ನಾಜೀ ತತ್ವಗಳನ್ನು ಪ್ರಸಾರ ಮಾಡಲು ಇದು ಸಾಧನವಾಯಿತು. ಇದೇ ಸ್ಪರ್ಧೆಯ ಉದ್ದಗಲಕ್ಕೂ ಹಿಟ್ಲರ್ ಪ್ರತಿಪಾದಿಸುತ್ತಿದ್ದ ಆರ್ಯ ಉತ್ಕೃಷ್ಟ ಜನಾಂಗದ್ವೇಷಗಳು ಹೆಡೆಯಾಡುತ್ತಿದ್ದವು 'ಬಿಳಿಯರೇ ಶ್ರೇಷ್ಠರು' ಎನ್ನುವ ಹಿಟ್ಲರನ ಕನಸಿಗೆ ಇದೇ ಸ್ಪರ್ಧೆಯಲ್ಲಿಯೇ ಇನ್ನಿಲ್ಲದಂತೆ ಪೆಟ್ಟುಬಿತ್ತು. ಖ್ಯಾತ ಕಪ್ಪು ಕ್ರೀಡಾಳು ಜೆಸ್ಸಿ ಓವನ್ಸ್ ಈ ಸ್ಪರ್ಧೆಯಲ್ಲಿ 4 ಸ್ವರ್ಣಪದಕಗಳನ್ನು ಗೆದ್ದದ್ದು ಹಿಟ್ಲರನಿಗೆ ನುಂಗಲಾರದ ತುತ್ತಾಯಿತು. ತನ್ನ ನಂಬಿಕೆಗೆ, ಸಾಮ್ರಾಜ್ಯಕ್ಕೆ ತನ್ನೆದುರಲ್ಲೇ ಘಾಸಿಯಾದ್ದನ್ನು ಕಂಡ ಹಿಟ್ಲರ್ ಜೆಸ್ಸಿ ಓವನ್ಸ್‌ನ ಕೈಕುಲುಕದೇ ಮರಳಿದ್ದು ಫ್ಯಾಸಿಸ್ಟ್ ಶಕ್ತಿಗಳ ಅಸಹನತೆಯ ಪ್ರತೀಕವಾಗಿತ್ತು. ಹಿಟ್ಲರ್ ಜೆಸ್ಸಿ ಓವನ್ಸರ್ ಕೈ ಕುಲುಕದೆ ನಾಸೆನಾದ ಮತ್ತೊಬ್ಬ ವ್ಯಕ್ತಿ ಆತನ ಭುಜ ತಟ್ಟಿದ. ಆತ ಜೆಸ್ಸಿಓವನ್ಸ್‌ರಿಂದ ಸೋತಿದ್ದ ಪಶ್ಚಿಮಜರ್ಮನಿಯ ಲಚ್‌ಲಾಂಗ್ ಫ್ಯಾಸಿಸ್ಟ್ ಶಕ್ತಿಯ ವಿರುದ್ಧ ಆಟದ ಕಣದಲ್ಲಿ ಇಬ್ಬರು ಕ್ರೀಡಾಳುಗಳು ಸೆಟೆದು ನಿಂತಿದ್ದರು.

ಅದೇ ವರ್ಣದ್ವೇಷ ಇಂದಿಗೂ ಎಡಬಿಡದೆ ಮುಂದುವರೆದಿದೆ. 1968ರ ಮೆಕ್ಸಿಕೋ ಕ್ರೀಡೆಗಳಲ್ಲಿ ಅಮೇರಿಕಾದಲ್ಲಿ ಕರಿಯರನ್ನು ಕೀಳಾಗಿ ಕಾಣುತ್ತಿದ್ದುದನ್ನು ಖಂಡಿಸಲು ಎಲ್ಲಾ ಕಪ್ಪು ಕ್ರೀಡಾಳುಗಳು ಒಲಂಪಿಕ್ಸ್ ನಡೆಯುತ್ತಿದ್ದ ವೇಳೆಯಲ್ಲಿ 'ಬ್ಲಾಕ್ ಸಲ್ಯೂಟ್' ಮಾಡಿದ್ದು ಎಲ್ಲರ ಕಣ್ಣು ಕೆಂಪಗಾಗಿಸಿತ್ತು. ಜಗತ್ತಿನ ಕಹಿವಾಸ್ತವದ ವಿರುದ್ಧ ಕರಿಯರು ಒಂದಾಗಿ ನಿಂತಿದ್ದರು.

1976ರ ಮಾಂಟ್ರಿಯಲ್ ಒಲಂಪಿಕ್ಸ್‌ನಲ್ಲಿ ಕಪ್ಪು ಜನರ ಮೇಲೆ ದಬ್ಬಾಳಿಕೆ ನಡೆಸುತ್ತಿದ್ದ ದಕ್ಷಿಣ ಆಫ್ರಿಕಾದ ಜೊತೆ ನ್ಯೂಜಿಲೆಂಡ್ ಕ್ರೀಡೆಗಳಲ್ಲಿ ಭಾಗವಹಿಸಿತೆಂದು ನಿಲುವನ್ನು ವಿರೋಧಿಸಿ, ನ್ಯೂಜಿಲೆಂಡ್‌ನ ಮೇಲೆ ನಿಷೇಧ ಹೇರಬೇಕೆಂದು ಬೇಡಿಕೆಯನ್ನು ಮುಂದುಮಾಡಿ 22 ಆಫ್ರಿಕನ್ ರಾಷ್ಟ್ರಗಳು ಮಾಂಟ್ರಿಯಲ್ ಒಲಂಪಿಕ್ಸ್‌ನ್ನು ಬಹಿಷ್ಕರಿಸಿತು. 1980ರ ಒಲಂಪಿಕ್ಸ್ ಮಾಸ್ಕೋದಲ್ಲಿ. ಅಮೇರಿಕನ್ನರ ಪಾಲಿಗೆ ಇದು ನುಂಗಲಾರದ ತುಪ್ಪವಾಯಿತು. ಅಮೇರಿಕಾ ಸೋವಿಯತ್ ದೇಶಕ್ಕೆ ಮುಖಭಂಗ ಮಾಡಲು ನಿರ್ಧರಿಸಿ ಮಾಸ್ಕೋ ಒಲಂಪಿಕ್ಸ್‌ಗೆ ಬಹಿಷ್ಕಾರ ಹಾಕಿತು. ಅಫಘಾನಿಸ್ತಾನದಲ್ಲಿ ಸೋವಿಯತ್ ದೇಶ ಹಸ್ತಕ್ಷೇಪ ಮಾಡಿತು ಎಂಬ ಕಾರಣ ಮುಂದುಮಾಡಿತು ಅಮೇರಿಕಾ. ಈ ಬಹಿಷ್ಕಾರಕ್ಕೆ ಮುಂಚೆಜಿಮ್ಮಿಕಾರ್ಟರ್ ಅಮೇರಿಕಾದ ರಾಯಭಾರಿಯನ್ನು ಕರೆದು ಸೋವಿಯತ್ ದೇಶದೊಂದಿಗೆ ಇರುವ ವ್ಯಾಪಾರ ಸಂಬಂಧಗಳನ್ನು ರದ್ದು ಮಾಡುವ ಇಲ್ಲವೇ ದವಸಧಾನ್ಯಗಳ ಸರಬರಾಜಿನಲ್ಲಿ ಕಡಿತ ಮಾಡುವ ಉಪಾಯಗಳನ್ನು ಮುಂದಿಟ್ಟಿರುವ ಅಮೇರಿಕಾ ರಾಯಭಾರಿ ಒಲಂಪಿಕ್ಸ್‌ನತ್ತ ಬೊಟ್ಟು ಮಾಡಿದಾಗ ಜಿಮ್ಮಿ ಕಾರ್ಟರ್ ಹೊಸ ಉತ್ಸಾಹದ ಸಾಗರದಲ್ಲಿ ಮುಳುಗಿದರು.

1984ರಲ್ಲಿ ಅಮೇರಿಕಾದ ಲಾಸ್‌ಏಂಜಲಿಸ್‌ನಲ್ಲಿ ಒಲಂಪಿಕ್ಸ್ ನಡೆದಾಗ ಸೋವಿಯತ್‌ದೇಶದ ನೇತೃತ್ವದಲ್ಲಿ ಅಮೇರಿಕಾದ ಸಾಮ್ರಾಜ್ಯಶಾಹಿ ಧೋರಣೆಗಳನ್ನು ಹಾಗೂ ಕಮ್ಯುನಿಸ್ಟ್ ಸರ್ಕಾರವನ್ನು ಉರುಳಿಸುವ ಅಮೇರಿಕಾದ ಸಂಚನ್ನು ವಿರೋಧಿಸಿ ವಿಶ್ವದ ಎಲ್ಲಾ ಕಮ್ಯುನಿಸ್ಟ್ ರಾಷ್ಟ್ರಗಳು ಬಹಿಷ್ಕಾರ ಹಾಕಿದವು.

ಇದೀಗ 1988ರ ಒಲಂಪಿಕ್ಸ್ ಉತ್ತರ ಕೊರಿಯಾ ದಕ್ಷಿಣ ಕೊರಿಯಾದ ನೀತಿಯನ್ನು ಖಂಡಿಸಿ ಬಹಿಷ್ಕಾರ ಹಾಕಿದೆ. ಕ್ಯೂಬಾ ಉತ್ತರ ಕೊರಿಯಾವನ್ನು ಬೆಂಬಲಿಸಿ ತಾನೂ ಕ್ರೀಡೆಗಳಲ್ಲಿ ಭಾಗವಹಿಸುವುದಿಲ್ಲವೆಂದು ಹೇಳಿದೆ. ಉತ್ತರ ಕೊರಿಯಾದ ಕಮ್ಯುನಿಸ್ಟ್ ಸರ್ಕಾರದ ವಿರುದ್ಧದ ಕಿರುಕುಳ ಈ ಬಹಿಷ್ಕಾರಕ್ಕೆ ಕಾರಣ.

ಫಿಡೆಲ್ ಕ್ಯಾಸ್ಟ್ರೋ ಇತ್ತೀಚೆಗೆ ತಾನೆ ಎನ್.ಬಿ.ಸಿ.ಗೆ ಸಂದರ್ಶನ ನೀಡುತ್ತಾ 'ಕ್ಯೂಬ ಸ್ವಾತಂತ್ರ್ಯ ಗಳಿಸಲು ಪಟ್ಟ ಶ್ರಮ ನಮಗೆ ಅರಿವಿದೆ. ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳಲು ನಾವು ಈ ಸ್ವರ್ಣಪದಕಗಳಿಂದಲೂ ದೂರವಿರಲು ಸಿದ್ಧ' ಎಂದಿದ್ದಾರೆ.

ವಿಶ್ವಶಾಂತಿಗಾಗಿ ಒಲಂಪಿಕ್ಸ್ ಎಂದು ಒಲಂಪಿಕ್ಸ್ ಈ ಮೊದಲಿನಿಂದಲೂ ಘೋಷಿಸಿಕೊಂಡರೂ ಒಲಂಪಿಕ್ಸ್ ಮುಂದೆ ಬಂದು ಹೋಗುತ್ತಲೇ ಇದೆ. ಫಿಡೆಲ್ ಕ್ಯಾಸ್ಟ್ರೋ ಹೇಳುವಂತೆ ಒಲಂಪಿಕ್ಸ್ ಇಂದು ಸ್ವಾತಂತ್ರ್ಯಕ್ಕಾಗಿ, ಸ್ವಾತಂತ್ರ್ಯದ ರಕ್ಷಣೆಗಾಗಿ ನಡೆಯುತ್ತಿರುವ ಹೋರಾಟವಾಗಿದೆ.

ವಿದಾಯ

ನದಿಯಾ ಕಮಾನ್ನೆ
ಮನದಾಳದಿ ಇಳಿದು ಕನಸುಗಳ ಕೆದಕಿದವಳೆ,
ಕಂಬಿ ಎಳೆಗೆ ಆತುಕೊಂಡು ಅತ್ತ ಇತ್ತ ತೂಗಿದವಳೆ
ನೆಲಕೆ ಕಾಲು ಸೋಕಿದಾಗ ಬಿಕ್ಕಿ ಬಿಕ್ಕಿ ಅತ್ತವಳೆ
ಎದೆಯ ಝಲ್ಲರಿಯೊಳಗೆ ನೆನಪುಗಳನು ಕುಕ್ಕಿದವಳೆ
ಎದೆಯಲ್ಲಿ ಕಾವಾಗಿ, ಚಿಗುರೊಡೆದು ಮೊಗ್ಗಾಗಿ
ಒಮ್ಮೆ ನೋಡುವ ಮುನ್ನ ಮರೆಯಾಗಿ ಹೋದವಳೆ
ಎದೆಯ ಕಂಬಿಯ ಮೇಲೆ ವಾಲುತ್ತಾ ನಡೆಯುತ್ತಾ
ಎಷ್ಟೊಂದು ಕನಸುಗಳ ಅಳಿಸಿ ಮರೆಯಾದವಳೆ
ಎದೆಯಾಳ ಗೋರಿಯಲಿ ಕಮಾನ್ನೆ ಅನುರಣನ
ಕನಸುಗಳ ಕುಡಿಯೊಡೆದು ನಿಶಬ್ದ ನಿರ್ಗಮನ
ನಿನ್ನ ನೆನಪನು ಹೆಕ್ಕಿ ಹಲವು ರೆಕ್ಕೆಯ ಹಕ್ಕಿ
ಪುನಃ ತಂತಿಯ ಮೇಲೆ ಬಾಗಿ ಬಳುಕಿ
ಇಳೆಗೆ ತಾಕುವ ಮುನ್ನ, ಶಬ್ದ ಜೀಕುವ ಮುನ್ನ
ಮತ್ತದೇ ಕ್ಷಣಗಳಲಿ, ನಿಶಬ್ದ ಮೌನದಲಿ
ತಣ್ಣನೆಯ ನಗೆ ಮಧ್ಯೆ ನನ್ನೆದೆಯ ಪಲುಕುಗಳು ಬಿಕ್ಕಿ ಬಿಕ್ಕಿ.

—ಜಿ. ಎನ್. ಮೋಹನ್

(ನದಿಯಾ ಕಮಾನ್ನೆ, ರುಮೇನಿಯಾದ ಜಿಮ್ನಾಸ್ಟ್ 'ಗಾಳಿಯ ಸಾಗರದಲ್ಲಿ ತೇಲುವ ಅದ್ಭುತ'! ಎಂದೇ ಹೆಸರಾದ ನದಿಯಾ ಸ್ಪರ್ಧೆಗಿಳಿದರೆ ಜಗತ್ತೇ ನಿಬ್ಬೆರಗಾಗುತ್ತಿತ್ತು. ಈಕೆಯ ವೇಗವನ್ನು ಮೀರಿಸಲಾಗದೆ ಅಂಕಿಗಳನ್ನು ನೀಡುತ್ತಿದ್ದ ಕಂಪ್ಯೂಟರ್ ಕೂಡ ಸುಮ್ಮನಾಗಿತ್ತು. ಈಕೆ ಕ್ರೀಡೆಗೆ ವಿದಾಯ ಹೇಳಿದಾಗ ಈ ಕಾವ್ಯ —)

ಅಮೇರಿಕಾ ಎಂಬ ಅಡ್ಡಗಾಲು

ಸೋವಿಯತ್ ದೇಶ–ಅಮೇರಿಕಾ

ಪ್ರತೀ ಒಲಂಪಿಕ್ಸ್‌ನಲ್ಲೂ ಅನುಸರಿಸುವ ಎರಡೇ ಪದಗಳು. ಎಲ್ಲರ ಕಣ್ಣೂ ಈ ಎರಡು ದೇಶಗಳ ಮೇಲೇ. ರಾಜಕೀಯದಲ್ಲಿ ಹೇಗೆಯೋ ಹಾಗೆಯೇ ಆಟೋಟದಲ್ಲೂ ಸೆಣಸಾಟ. ಎರಡು ದಶಕಗಳ ಕಾಲ ಇನ್ನಿಲ್ಲದಂತೆ ಮೆರೆದ ಅಮೇರಿಕಾದ ಏಕಾಧಿಪತ್ಯಕ್ಕೆ ಸೋವಿಯತ್ ದೇಶದ ಲಗ್ಗೆ. ಕ್ರಾಂತಿಯ ತರುವಾಯ ಎರಡು ದಶಕದಲ್ಲಿ ಎಡಬಿಡದೆ ಎಲ್ಲಾ ವಲಯಗಳಲ್ಲೂ ಹೊಸ ಹುಮ್ಮಸ್ಸನ್ನು ಹುಟ್ಟು ಹಾಕಿದ ಸೋವಿಯತ್ ದೇಶ ಅಮೇರಿಕಾವನ್ನು ಹಿಂದೂಗೆಯಿತು.

ನಂತರ ಪ್ರಾರಂಭವಾದದ್ದು ಸೋವಿಯತ್ ದೇಶದ ಯುಗ. ಸೋವಿಯತ್ ದೇಶಕ್ಕೆ ಕವಿಬೇರೆ ಅಲ್ಲ ಕಲಿ ಬೇರೆ ಅಲ್ಲ. ಲೇಖನಿ ಬೇರೆ ಅಲ್ಲ, ಖಡ್ಗ ಬೇರೆ ಅಲ್ಲ. ಅಂತೆಯೇ ಕ್ರೀಡಾಳು ಕಲಿಯೂ ಹೌದು ಯುದ್ಧ ಮನೆಬಾಗಿಲಿಗೆ ಬಂದಾಗ ವೀರಯೋಧ ಕ್ರೀಡೆಗಳು ಕೈಬೀಸಿ ಕರೆದಾಗ ಕ್ರೀಡಾಳು.

ಅಕ್ಟೋಬರ್ ಕ್ರಾಂತಿಯ ನಂತರದ ಮೊದಲ ಒಲಂಪಿಕ್ಸ್‌ಗೆ 1920 ರಲ್ಲಿ ಸೋವಿಯತ್ ದೇಶವನ್ನು ಆಹ್ವಾನಿಸಲಿಲ್ಲ. ಸೋವಿಯತ್ ದೇಶದಲ್ಲಿ ಆಗಿದ್ದ ಕ್ರಾಂತಿಯ ಬಿಸಿ ಇತರೆ ದೇಶಗಳಲ್ಲೂ ಹರಡಿತ್ತು. ಎಲ್ಲಾ ಬಂಡವಾಳಶಾಹಿ ರಾಷ್ಟ್ರಗಳ ಕಣ್ಣಲ್ಲಿ ಸೋವಿಯತ್ ದೇಶ ಮುಳ್ಳಾಗಿ ಕಂಡಿತ್ತು. ಅಂತೆಯೇ ಅದಕ್ಕೆ ಆಹ್ವಾನವೇ ಇಲ್ಲ. ಸೋವಿಯತ್ ದೇಶ ಸುಮ್ಮನಿರಲಿಲ್ಲ. 1920, ಮೇ 20 ರಂದು ಸೋವಿಯತ್ ಕ್ರೀಡೆಗಳ ಕೂಟವನ್ನು ಏರ್ಪಡಿಸಿತ್ತು. ನಂತರ 1921 ರಲ್ಲಿ ಇತರೆ ದೇಶಗಳ ಮೇಲೆ ಪಂದ್ಯ.

ಕ್ರಾಂತಿಯ ನಂತರ 1919ರಲ್ಲಿ ವಿಶ್ವಾದ್ಯಂತ ಜಿರುಸಾಗಿ ನಡೆಯುತ್ತಿದ್ದ ವಿಮೋಚನಾ ಚಳುವಳಿಗೆ ಮಾರ್ಗದರ್ಶನ ನೀಡಲು ಲೆನಿನ್ ಕಮ್ಯುನಿಸ್ಟ್ ಅಂತರರಾಷ್ಟ್ರೀಯವನ್ನು ಸ್ಥಾಪಿಸಿದರು. 1920ರ ಒಲಂಪಿಕ್ಸ್‌ಗೆ ಬೂರ್ಷ್ವಾ ಪ್ರೇಮಿ ಪಾಶ್ಚಾತ್ಯ ದೇಶಗಳು ಸೋವಿಯತ್ ದೇಶವನ್ನು ಆಹ್ವಾನಿಸದಿದ್ದಾಗ ಅದಕ್ಕೆ ಕಾರ್ಮಿಕವರ್ಗದ ಪ್ರತ್ಯುತ್ತರ ಸಿದ್ಧವಾಗಿತ್ತು. 1921 ರಲ್ಲಿ ಕಮ್ಯುನಿಸ್ಟ್ ಇಂಟರ್‌ನ್ಯಾಷನಲ್ ಒಂದು ವಿಭಾಗವಾಗಿ ರೆಡ್ ಸ್ಪೋರ್ಟಿಂಗ್ ಇಂಟರ್‌ನ್ಯಾಷನಲ್ ಆರಂಭವಾಯಿತು. ಇದು ಕಾರ್ಮಿಕ ದೇಶಕ್ಕೆ ಹಾಕಿದ ಒಲಂಪಿಕ್ಸ್ ಬಹಿಷ್ಕಾರವನ್ನು ಮುರಿಯಲು ನೆರವಾಯಿತು. ಅನೇಕ ಅಂತರರಾಷ್ಟ್ರೀಯ ಒಲಂಪಿಯಾಡ್‌ಗಳನ್ನು ಏರ್ಪಡಿಸಿತು.

1928ರಲ್ಲಿ ತನ್ನ ಮೊದಲ ಪಂಚವಾರ್ಷಿಕ ಯೋಜನೆಯ ಹೆಗ್ಗುರುತನ್ನು ನೀಡಲು ಏರ್ಪಡಿಸಿದ ಕ್ರೀಡೆಗೆ ಬಂಡವಾಳಶಾಹಿ ರಾಷ್ಟ್ರಗಳು ಪುನಃ ಬಹಿಷ್ಕಾರ ಹಾಕಿದರು. ಆದರೂ 17 ದೇಶಗಳ 600 ಆಟಗಾರರು ಇದರಲ್ಲಿ ಭಾಗವಹಿಸಿದ್ದರು. ಒಲಂಪಿಕ್ಸ್ ಮೀರಿದ ದಾಖಲೆಗಳು ಸೋವಿಯತ್ ದೇಶದಲ್ಲಿ ದಾಖಲಾಯಿತು. ಸೋವಿಯತ್ ದೇಶದ ಕ್ರೀಡೆ ಇಡೀ ಪ್ರಪಂಚದಲ್ಲಿ ಸದ್ದು ಮಾಡಲು ಪ್ರಾರಂಭಿಸಿತು.

1932 ಸೋವಿಯತ್ ದೇಶ ಯುದ್ಧವನ್ನು ವಿರೋಧಿಸಿ ಸಮ್ಮೇಳನ ನಡೆಸಿತು. ಕ್ರೀಡಾಳುಗಳು ಹಲವು ಸಂಖ್ಯೆಯಲ್ಲಿ ಭಾಗವಹಿಸಿದ್ದರು: 'ಸೋವಿಯತ್ ದೇಶ ಶಾಂತಿಯ ಪರ, ಹಾಗೆಯೇ ಕ್ರೀಡೆಗಳೂ ಸಹ' ಎಂದು ಸಾರಲಾಯಿತು. 1934 ರಲ್ಲಿ ಅಂತರರಾಷ್ಟ್ರೀಯ ಫ್ಯಾಸಿಸ್ಟ್ ವಿರೋಧಿ ಮೆರವಣಿಗೆ ನಡೆಸಲಾಯಿತು. 4,600 ಕ್ರೀಡಾಳುಗಳು 19 ದೇಶವನ್ನು ಪ್ರತಿನಿಧಿಸಿದ್ದರು. ಸಾಮ್ರಾಜ್ಯಶಾಹಿ, ಜನಾಂಗೀಯ ಫ್ಯಾಸಿಸ್ಟ್ ಶಕ್ತಿಗಳ ವಿರುದ್ಧ ಕ್ರೀಡಾಳುಗಳು ಪ್ರತಿಜ್ಞೆ ಸ್ವೀಕರಿಸಿದರು. 1937 ರಲ್ಲಿ ಕಾರ್ಮಿಕರ ಒಲಂಪಿಕ್ಸ್ ನಡೆಸಲಾಯಿತು.

1941-1945 ಕ್ರೀಡಾಳುಗಳು ಆಯುಧವನ್ನು ಕೈಗೆತ್ತಿಕೊಂಡರು ಗ್ರೇಟ್ ಪೇಟ್ರಿಯಾಟಿಕ್ ವಾರ್' ನಲ್ಲಿ ದೇಶವನ್ನು ರಕ್ಷಿಸಲು ಕ್ರೀಡಾಳುಗಳು ಹಿಂದೆ ನಿಲ್ಲಲಿಲ್ಲ. ಕುಸ್ತಿಪಟುಗಳ ಕೈಯಲ್ಲಿ ಕೋವಿಯ ಗುರಿಕಾರರು ಮುಂಚೂಣಿಯಲ್ಲಿ ನಿಂತರು. ಸೋವಿಯತ್ ದೇಶ ಕ್ರೀಡೆಯ ಭೂಪಟದಲ್ಲಿ ಅಳಿಸಲಾಗದ ದೇಶವಾಯಿತು. ಎರಡನೇ ಮಹಾಯುದ್ಧದ ಸಮಯದಲ್ಲಿ ಹಿಟ್ಲರನ ಯುದ್ಧಯಂತ್ರವನ್ನು ಬಲಿ ಹಾಕಿದ ಸೋವಿಯತ್ ದೇಶದ ಗೌರವ ಅತಿ ಎತ್ತರಕ್ಕೇರಿದಾಗ 1952ರ ಒಲಂಪಿಕ್ಸ್‌ನಲ್ಲಿ ಸೋವಿಯತ್ ದೇಶವನ್ನು ಆಹ್ವಾನಿಸದೆ ಬೇರೆದಾರಿಯೇ ಇರಲಿಲ್ಲ. ಅಂದಿನಿಂದ ಇಂದಿನವರೆಗೂ ಸೋವಿಯತ್ ದೇಶದ್ದು ಅದೇ ಗೆಲುವಿನ ಗಾಥೆ. ಅಮೇರಿಕಾದ ಕಣ್ಣು ಕೆಂಪಾಯಿತು. ಕ್ರೀಡೆಯ ಕಣದಲ್ಲಿ ಸೌಹಾರ್ದತೆಯನ್ನು ಅಮೇರಿಕಾ ಪ್ರತಿನಿಧಿಸಲಿಲ್ಲ. ರಾಜಕೀಯದ ಇರಿಸುಮುರಿಸುಗಳು ಕ್ರೀಡೆಗೂ ಕಾಲಿಟ್ಟವು. ಸೋವಿಯತ್ ದೇಶದ ಗೆಲುವು, ಪದಕಗಳು ಅಮೇರಿಕಾ ಮತ್ತೊಮ್ಮೆ ಹಿಂದೆಗೆಯಲು ಕಾರಣವಾಯಿತು.

1980ರಲ್ಲಿ ಸೋವಿಯತ್ ದೇಶದಲ್ಲಿ ಒಲಂಪಿಕ್ಸ್ ಕ್ರೀಡೆಗಳನ್ನು ನಡೆಸಲು ಆಹ್ವಾನಿಸಲಾಯಿತು. ಇದು ಮತ್ತಷ್ಟು ದಳ್ಳುರಿಗೆ ಕಾರಣವಾಯಿತು. ಜಿಮ್ಮಿ ಕಾರ್ಟರ್‌ರವರ ಅಣತಿಯಂತೆ ಮಾಸ್ಕೋ ಒಲಂಪಿಕ್ಸ್‌ಗೆ ಬಹಿಷ್ಕಾರ. ಬಹಿಷ್ಕಾರಕ್ಕೊಂದು ಕುಂಟು ನೆಪ. ಮಾಸ್ಕೋ ಬಹಿಷ್ಕಾರಕ್ಕೆ ಕಿವಿಗೊಡಲಿಲ್ಲ. ಸೋವಿಯತ್ ದೇಶದ ಪುಟಾಣಿ ಕರಡಿ 'ಮಿಶಾ' ಎಲ್ಲರ ಮನತಣಿಸಿತು. ಇಡೀ ಒಲಂಪಿಕ್ಸ್ ಉತ್ಸವಗಳಲ್ಲೇ ಸೋವಿಯತ್ ದೇಶದ್ದು ಅತ್ಯಂತ ಅಚ್ಚುಕಟ್ಟಾಗಿತ್ತು ಎಂಬ ಪ್ರಶಂಸೆ. 'ಮಿಶಾ' ಕ್ರೀಡಾಳುಗಳಿಗೆ ವಿದಾಯ ಹೇಳಿ ಗಗನಕ್ಕೇರಿದಾಗ ಹಲವರ ಕಣ್ಣಲ್ಲಿ ನೀರು ತೊಟ್ಟಿಕ್ಕಿತು. ಇದು ವಿಶ್ವದ ಕ್ರೀಡಾಳುಗಳನ್ನು ಬೆಸೆದ ಒಲಂಪಿಕ್ಸ್.

1984ರಲ್ಲಿ ಅಮೇರಿಕಾ ಒಲಂಪಿಕ್ಸ್‌ಗೆ ಸಜ್ಜಾದಾಗ ಸೋವಿಯತ್ ದೇಶದ ನೇತೃತ್ವದಲ್ಲಿ ಎಲ್ಲಾ ಕಮ್ಯುನಿಸ್ಟ್ ರಾಷ್ಟ್ರಗಳು ಬಹಿಷ್ಕಾರ ಹಾಕಿದವು. ಸೋವಿಯತ್ ದೇಶದಲ್ಲಿ ಒಲಂಪಿಕ್ಸ್‌ಗೆ ಪರ್ಯಾಯವಾಗಿ ಸ್ನೇಹಕ್ರೀಡೆಗಳನ್ನು ನಡೆಸಲಾಯಿತು. ಒಲಂಪಿಕ್ಸ್‌ನಲ್ಲಿ ಅಮೇರಿಕಾ ಪದಕಗಳನ್ನು ಬಾಚಿಕೊಂಡು ಬೀಗುತ್ತಿದ್ದಾಗ ಈ ಕ್ರೀಡೆಗಳಲ್ಲಿ ಅಮೇರಿಕಾದ ದಾಖಲೆಗಳೆಲ್ಲವನ್ನೂ ಮೀರಿ ಸೋವಿಯತ್ ಕ್ರೀಡಾಳುಗಳು ಮುನ್ನಡೆದರು. ಇಡೀ ವಿಶ್ವ 1984ರ ಒಲಂಪಿಕ್ಸ್‌ಗೆ ಸಜ್ಜಾದಾಗ ಅಮೇರಿಕಾದಲ್ಲಿ ಸೋವಿಯತ್ ದೇಶದ ಕ್ರೀಡಾಳುಗಳನ್ನು ಅಪಹರಿಸಲು ಎಲ್ಲಾ ರೀತಿಯ ತಯಾರಿ ನಡೆದಿತ್ತು. ಕ್ರೀಡಾಳುಗಳನ್ನು ಒತ್ತೆಯಾಳಾಗಿಸಿಕೊಳ್ಳಲು ಹಲವು ಅಮೇರಿಕಾ ನೆರವಿನ ಭಯೋತ್ಪಾದಕ ಗುಂಪುಗಳು ಉದ್ಭವವಾದವು. ಸೋವಿಯತ್ ದೇಶ ತನ್ನ ಕ್ರೀಡಾಳುಗಳಿಗೆ ವಿಶೇಷ ರಕ್ಷಣೆ ನೀಡಲು ಅಮೇರಿಕಾವನ್ನು ಕೇಳಿತು. ಅಮೇರಿಕಾ ಈ ನೆರವನ್ನು ತಿರಸ್ಕರಿಸಿದ ಕಾರಣ ಸೋವಿಯತ್ ದೇಶ ಕ್ರೀಡಾಳುಗಳನ್ನು ದಾಳವಾಗಿಸಲು ಇಚ್ಛೆಪಡದೆ ಒಲಂಪಿಕ್ಸ್‌ನಿಂದ ಹಿಂದೆ ಸರಿಯಿತು. (ಮುಂದಿನ ಪುಟಕ್ಕೆ)

ವಿಶ್ವಶಾಂತಿಗಾಗಿ ಒಲಂಪಿಕ್ಸ್

ಇನ್ನೂ ವೇಗವಾಗಿ, ಇನ್ನೂ ಎತ್ತರಕ್ಕೆ, ಇನ್ನೂ ಬಲವಾಗಿ. ಒಲಂಪಿಕ್ಸ್‌ನ ಈ ಘೋಷಣೆ ಪ್ರತೀ ನಾಲ್ಕು ವರ್ಷಕ್ಕೊಮ್ಮೆ ಮುಗಿಲು ಮುಟ್ಟುತ್ತದೆ. ವಿಶ್ವದ ಎಲ್ಲಾ ರಾಷ್ಟ್ರಗಳ ಮಧ್ಯೆ, ಇನ್ನೂ ವೇಗವಾಗಿ, ಇನ್ನೂ ಎತ್ತರಕ್ಕೆ, ಇನ್ನೂ ಬಲವಾಗಿ ಸ್ನೇಹ ತಂತುಗಳನ್ನು ಹರಡುವುದು ಒಲಂಪಿಕ್ಸ್ ವಿಶ್ವಶಾಂತಿಗೆ ಅರ್ಪಿಸಿದ ಕಿರುಕಾಣಿಕೆ.

ಗ್ರೀಕರು ಪ್ರಾರಂಭಿಸಿದ ಒಲಂಪಿಕ್ಸ್ ಕ್ರೀಡೆ ಇಂದು ಇಡೀ ಪ್ರಪಂಚಕ್ಕೇ ಮುಡುಪಾಗಿದೆ. ಹಿಂದೆ ದೇವತಾರಾಧನೆಗೆ, ಯುದ್ಧಕ್ಕೆ ಮುನ್ನುಡಿಯಾಗಿ ತಯಾರಿಗಾಗಿ ಈ ದೇಹ ದಾರ್ಢ್ಯವನ್ನು ಪರೀಕ್ಷಿಸುವ ಆಟೋಟಗಳನ್ನು ಹಮ್ಮಿಕೊಳ್ಳಲಾಯಿತು. ಗ್ರೀಸ್‌ನ ಸಮುದ್ರ ತೀರದಿಂದ 20 ಕಿ.ಮೀ. ದೂರದಲ್ಲಿ ಅಲ್ಫಿಯಸ್ ಹಾಗೂ ಕ್ಲೇಡಿಯಸ್ ನದಿಗಳ ಸಂಗಮ ಸ್ಥಾನದಲ್ಲಿ ಪರ್ವತಾವಳಿಯ ತಪ್ಪಲಿನ ಕಣಿವೆಯಲ್ಲಿ ಅಡಗಿದ್ದ 'ಒಲಂಪಿಯ' ಒಲಂಪಿಕ್ಸ್ ಕ್ರೀಡೆಗಳ ಮೂಲಸ್ಥಾನ ಎಂದು ಗುರುತಿಸಲಾಗಿದೆ.

ಪರ್ವತಾವಳಿಗಳ ಅಡಿಯ ಜ್ಯೂಸ್ ದೇವಮಂದಿರದಲ್ಲಿ ಮೊದಲ ಕ್ರೀಡೆ ಕ್ರಿ.ಪೂ. 776 ರಲ್ಲಿ ನಡೆಯಿತೆಂಬುದು ಬೆಳಕಿಗೆ ಬಂದಿದೆ. ಸತ್ತವರ ಸ್ಮಾರಕಾರ್ಥ ಮತ್ತೊಂದು ಯುದ್ಧಕ್ಕೆ ಅಣಿಯಾಗಲು ಈ ಕ್ರೀಡೆ ಪ್ರಾರಂಭವಾಯಿತೆಂದು ಭಾವಿಸಲಾಗಿದೆ. ಪೆಟ್ರೋಕ್ಲಿಸ್ ಎಂಬ ವೀರನ ಗೌರವಾರ್ಥ ಈ ಕ್ರೀಡಾಕೂಟ ನಡೆದಿರಬಹುದೆಂಬ ಅಂಶ ಹೋಮರನ 'ಇಲಿಯಡ್' ನಾಟಕದಲ್ಲಿ ಸಿಗುತ್ತದೆ.

ಹೆಲನಿಕ್ ಉತ್ಸವದ ಅಂಗವಾಗಿಯೂ ಈ ಕ್ರೀಡೆಗಳು ನಡೆಯುತ್ತಿದ್ದವು. ಈಜಿಯಸ್ ದೊರೆಯನ್ನು ಕೊಂದು ಈಲಿಸ್ ರಾಜ್ಯವನ್ನು ಗೆದ್ದ ನೆನಪಿಗೆ ಹರ್ಕ್ಯುಲಿಸ್ ಒಲಂಪಿಕ್ಸ್ ಕ್ರೀಡೆಗಳನ್ನು ಪ್ರಾರಂಭಿಸಲಾಯಿತು. ಒಲಂಪಿಕ್ಸ್ ಕ್ರೀಡೆಗಳು ಎಷ್ಟು ಜನಪ್ರಿಯವೆಂದರೆ ನಾಲ್ಕು ವರ್ಷಗಳಿಗೊಮ್ಮೆ ನಡೆಯುವ ಈ ಕ್ರೀಡೆಗಳ ನಡುವಣ ಅಂತರವನ್ನು ಒಲಂಪಿಯಾಡ್ ಎಂದೇ ಗುರುತಿಸಲಾಗುತ್ತದೆ.

ಗ್ರೀಸ್‌ನ ಶ್ರೀಮಂತರಿಗಷ್ಟೇ ಮೀಸಲಾಗಿದ್ದ ಸ್ಪರ್ಧೆಗಳು ಜನಸಾಮಾನ್ಯರಿಗೂ ತಲುಪಲು ಪ್ರಾರಂಭವಾಯಿತು. ಕ್ರಿ.ಪೂ. ಆರನೇ ಶತಮಾನ ಜನಸಾಮಾನ್ಯರ ಬಳಿಗೆ ಕ್ರೀಡೆಗಳನ್ನು ಕೊಂಡೊಯ್ದಿತು. ಕ್ರಿ.ಶ. 393 ರಲ್ಲಿ ಒಲಂಪಿಕ್ಸ್ ಸ್ಥಗಿತಗೊಂಡಿತು.

ಗ್ರೀಕರ ಮೇಲೆ ಯುದ್ಧ ಸಾರಿ ಗೆದ್ದ ಮೆಸೊಡೋನಿಯನ್ ಹಾಗೂ ರೋಮನ್ ಚಕ್ರಾಧಿಪತಿಗಳು ಒಲಂಪಿಕ್ ಮುಂದುವರಿಸಿದರೂ ರೋಮನ್ ದೊರೆ ಥಿಯೋಡೋಸಿಯಸ್ ಈ ಕ್ರೀಡೆಗಳನ್ನು ನಿಲ್ಲಿಸಿದ. ಈತನ ಆಜ್ಞೆಯಂತೆ ಒಲಂಪಿಯ ಜ್ಯೂಸ್ ದೇವಾಲಯವನ್ನು ನಾಶಪಡಿಸಲಾಯಿತು.

ಫ್ರಾನ್ಸ್‌ನ ಪಿಯರೆ.ಡಿ. ಕೂಬರ್ತಿ ಮತ್ತೆ ಒಲಂಪಿಕ್ಸ್‌ಗೆ ನಾಂದಿ ಹಾಡಿದರು. 1887 ರಲ್ಲಿ ಒಲಂಪಿಕ್ಸ್‌ನ ಬಗ್ಗೆ ಹಿಂದೆ ಕೇಳಿದ್ದ ಕಥೆಗಳ ಮೂಲಕವೇ ಖುಷಿಪಟ್ಟ ಕೂಬರ್ತಿ ಇಂಗ್ಲೆಂಡಿಗೆ ತೆರಳಿ ಮತ್ತೆ ಮಾಹಿತಿ ಸಂಗ್ರಹಿಸಿದರು. ಇದರಿಂದಾಗಿ 1896 ರಲ್ಲಿ ಅಥೆನ್ಸ್‌ನಲ್ಲಿ ಮತ್ತೆ ಒಲಂಪಿಕ್ಸ್ ಜ್ಯೋತಿ ಬೆಳಗಿತು. ನಗಾರಿ ಬಾರಿಸಿತು.

ಮೊದಲ ಒಲಂಪಿಕ್ಸ್‌ನಲ್ಲಿ ಆತಿಥೇಯ ಗ್ರೀಸ್ ಯಾವುದೇ ಪತಾಕೆ ಗೆಲ್ಲುವ ಸೂಚನೆಯೇ ಕಾಣದಾದಾಗ ಜನ ಕಂಗಾಲಾದರು. ರಾಜ ಮಗಳನ್ನು ಧಾರೆಯೆರೆಯುವುದಾಗಿ ಘೋಷಿಸಿದ. ವಿಜಯಿಗಳಿಗೆ ಜೀವನ ಪರ್ಯಂತ ಉಚಿತ ಕ್ಷೌರ ಒದಗಿಸುವುದಾಗಿ ಕ್ಷೌರಿಕರು ಸಾರಿದರು. ಆ ಸಮಯದಲ್ಲಿಯೇ ದಿನವೂ ನೀರು ಹೊತ್ತು ತರಲು ಊರಿಂದ ಊರಿಗೆ ವೇಗವಾಗಿ ಓಡುತ್ತಿದ್ದ ಬಡ ಕಾರ್ಮಿಕನೊಬ್ಬ ಓಟದ ಸ್ಪರ್ಧೆಗಿಳಿದ. ಕೆಲವೇ ಕ್ಷಣಗಳಲ್ಲಿ ಪದಕ ಅವನಿಗೆ ದಕ್ಕಿತು. ದಿನದ ಹೊಟ್ಟೆಯ ಹಸಿವಿಗಾಗಿ ಓಡುವ ಓಟ ಇಂದು ಆತನಿಗೆ ಪದಕ ತಂದಿತ್ತು. ರಾಜ ಈ ಕಾರ್ಮಿಕನ ಕೆಲಸವನ್ನು ಶ್ಲಾಘಿಸಲು ಕ್ರೀಡಾಂಗಣಕ್ಕೆ ಧುಮುಕಿ ತಾನೂ ಒಂದಿಷ್ಟು ದೂರ ಆತನ ಹಿಂದೆ ಓಡಿದ್ದು ಶ್ರಮಿಕವರ್ಗದ ವಿಜಯವನ್ನು ಮೇಲಕ್ಕೆತ್ತಿ ಹಿಡಿಯಿತು.

ಪ್ರಾಚೀನ ಒಲಂಪಿಕ್ಸ್‌ಗಳಲ್ಲಿ ಮಹಿಳೆಯರು ಕ್ರೀಡೆಗಳಲ್ಲಿ ಭಾಗವಹಿಸುವುದಿರಲಿ ನೋಡುವುದಕ್ಕೂ ದೇವಮಂದಿರಗಳ ಪೂಜಾರಿಣಿಯರು ಮಾತ್ರ ಸ್ಪರ್ಧೆಗಳನ್ನು ವೀಕ್ಷಿಸಬಹುದಿತ್ತು. ವೇಷ ಬದಲಾಯಿಸಿ ಬಂದ ಮಹಿಳೆಯರೇನಾದರೂ ಸಿಕ್ಕಿಬಿದ್ದಲ್ಲಿ ಪರ್ವತದಿಂದ ಕಣಿವೆಗೆ ಉರುಳಿಸಿ ಕೊಲ್ಲಲಾಗುತ್ತಿತ್ತು.

ಕ್ಯಾಲಿಪೆಟೀಲಾ, ಪತಿ ತೀರಿದ ಬಳಿಕ ತನ್ನ ಮಗ ಪಿಸಿಡೋರಿಸ್ ಎಂಬಾತನನ್ನು ಒಲಂಪಿಕ್ಸ್ ಕ್ರೀಡೆಗಾಗಿ ತರಬೇತಿ ನೀಡಿದಳು. ತನ್ನ ಮಗ ಸ್ಪರ್ಧೆಯಲ್ಲಿ ಭಾಗವಹಿಸಿದಾಗ ತಾನೂ ಪುರುಷವೇಷ ತೊಟ್ಟು ಕಣದಲ್ಲಿ ನಿಂತಳು. ಮಗ ಗೆದ್ದ. ಹರ್ಷ ತಡೆಯಲಾಗದ ಆಕೆ ಬೇಲಿ ಹಾರಿ ಮಗನನ್ನು ತಬ್ಬಿಕೊಂಡಳು. ನಿಜ ಗೊತ್ತಾಯಿತು. ಕ್ರೀಡೆಗಳ ವ್ಯವಸ್ಥಾಪಕರು ಕ್ರುದ್ಧರಾದರು. ಅಂದಿನಿಂದ ಕ್ರೀಡೆಗಳಲ್ಲಿ ಭಾಗವಹಿಸುವವರು, ತರಬೇತುದಾರರೂ ನಗ್ನವಾಗಿ ಬರಬೇಕೆಂದು ಆಜ್ಞೆ ನೀಡಲಾಯಿತು. ಹಾಗೆಯೇ ಹಲವು ವರ್ಷಗಳು ಒಲಂಪಿಕ್ಸ್ ಕ್ರೀಡಾಂಗಣ ನಗ್ನದಿಂದಲೇ ತುಂಬಿತ್ತು.

ಅಮೇರಿಕಾದ ಅಡ್ಡಗಾಲು

(ಎರಡನೇ ಪುಟದಿಂದ)

ಇದೀಗ 1988 ರ ಒಲಂಪಿಕ್ಸ್.

ಇಡೀ ಪ್ರಪಂಚ ಕಣ್ಣು ನೆಟ್ಟು ಕೂತಿರುವ ಕೊರಿಯಾ ಒಲಂಪಿಕ್ಸ್‌ನಲ್ಲಿ ನೇರವಾಗಿ ಒಡೆದು ತೋರುವ ನೀತಿ. ಉತ್ತರ ಕೊರಿಯಾ ದಕ್ಷಿಣ ಕೊರಿಯಾದ ನಡುವೆ ಕ್ರೀಡೆಯ ಮೂಲಕ ಅಡ್ಡಗೋಡೆ. ಒಲಂಪಿಕ್ಸ್ ದಕ್ಷಿಣಕ್ಕೆ ಉತ್ತರಕ್ಕಿಲ್ಲ ಎಂಬ ನೀತಿ. ಏಕೆಂದರೆ ಉತ್ತರ ಕೊರಿಯಾ ಕಮ್ಯುನಿಸ್ಟ್ ಆಳ್ವಿಕೆಯದ್ದು. ಆದ್ದರಿಂದ ಅವರ ವಿರುದ್ಧ ದಕ್ಷಿಣ ಕೊರಿಯಾವನ್ನು ಎತ್ತಿಕಟ್ಟಲು ಒಲಂಪಿಕ್ಸ್ ಒಂದು ಸಾಧನ. ಉತ್ತರ ಕೊರಿಯಾ ದಕ್ಷಿಣ ಕೊರಿಯಾದ ಮೇಲೆ ಆಕ್ರಮಣ ಮಾಡುತ್ತದೆ ಎಂದು ತಾನೇ ಅಪಪ್ರಚಾರ ಮಾಡುತ್ತಾ, ಅಮೇರಿಕಾದ ಏಳನೇ ಯುದ್ಧ ಪಡೆ ದಕ್ಷಿಣ ಕೊರಿಯಾವನ್ನು ತನ್ನ ಕಾರಸ್ಥಾನವಾಗಿ ಮಾಡಿಕೊಂಡಿದೆ. ದಕ್ಷಿಣ ಕೊರಿಯಾದ ಮೂಲಕ ಉತ್ತರ ಕೊರಿಯಾದ ಮೇಲೆ ದಾಳಿ. ಅದಕ್ಕಾಗಿಯೇ ಯುದ್ಧ ನೌಕೆಗಳು ಅಮೇರಿಕಾದ ಒಡಲಿನ ದಳ್ಳುರಿಯ ಮತ್ತೊಂದು ರೂಪ.

ಈ ಕ್ರೀಡೆಯೇ ಬೇಡ ಎಂದು ಉತ್ತರ ಕೊರಿಯಾದ ಬಹಿಷ್ಕಾರ. ಇದಕ್ಕೆ ಕ್ಯೂಬಾದ ಬೆಂಬಲ. ಫಿಡೆಲ್ ಕ್ಯಾಸ್ಟ್ರೋ ಹೇಳುತ್ತಾರೆ, 'ಒಲಂಪಿಕ್ಸ್ ಸೌಹಾರ್ದತೆ ಹುಟ್ಟಿಹಾಕಬೇಕು, ಒಡಕನ್ನಲ್ಲ. ಅಂತೇ ಒಡಕಿನ ನೀತಿಗೆ ಬಹಿಷ್ಕಾರ'.

ಡೆಕ್ಕನ್ ಹೆರಾಲ್ಡ್‌ನಲ್ಲೊಂದು ಪತ್ರ

ಶಸ್ತ್ರಾಸ್ತ್ರಗಳ ಆರ್ಥಿಕತೆ ಅಥವಾ ಯುದ್ಧ ಯಾರಿಗೆ ಬೇಕು ?

....ಈ ಲೇಖಕರು ಶಸ್ತ್ರಾಸ್ತ್ರ ತಯಾರಕರ ಮತ್ತು ಅದನ್ನು ಖರೀದಿ ಮಾಡುವವರ ಹಿಂದಿನ ಆರ್ಥಿಕತೆ ಮಾಡಿಕೊಂಡಿಲ್ಲ. ಒಂದು ಕಡೆ ಶಸ್ತ್ರಾಸ್ತ್ರ ತಯಾರಕ ಸಮೃದ್ಧಿಯಾಗಿದ್ದರೆ, ಇನ್ನೊಂದು ಕಡೆ ಶಸ್ತ್ರಾಸ್ತ್ರ ಕೊಳ್ಳುವಲ್ಲಿ ಕಮೀಷನ್ ಮತ್ತು ಲಂಚಕ್ಕಾಗಿ ದೇಶಕ್ಕೆ 'ಬೆದರಿಕೆ'ಯನ್ನು ಕಾಣುವುದು ಇದೆ.... ಶಸ್ತ್ರಾಸ್ತ್ರ ತಯಾರಕ ತಮ್ಮ ಶಸ್ತ್ರಾಸ್ತ್ರಗಳನ್ನು ಮಾರುವುದರಲ್ಲಿ ಸ್ಥಾಪಿತ ಹಿತಾಸಕ್ತಿ ಇದೆ....

...ಒಂದೆರಡು ಘಟನೆಗಳ ಉದಾಹರಣೆಯಿಂದ ಇದನ್ನು ನಾನು ಹೇಳಬಯಸುತ್ತೇನೆ. ಕೆಲವು ವರ್ಷಗಳ ಹಿಂದೆ ನಾನು ನ್ಯೂ ಜೆರ್ಸಿಯಲ್ಲಿ ಒಬ್ಬ ಅಮೇರಿಕನನ್ನು ಭೇಟಿಯಾದೆ. ವಿಯೆಟ್ನಾಂ ಯುದ್ಧದ ಸಮಯದಲ್ಲಿ ಆತನ ಭಾವನಾ ಬಾಲ್-ಬೇರಿಂಗ್ ಕಾರ್ಖಾನೆ ಚೆನ್ನಾಗಿ ಬೆಳೆಯಿತಂತೆ. ಯುದ್ಧ ಮುಗಿದಾಗಿನ ಸಂತೋಷ ಈ ಕಾರ್ಖಾನೆಯ ಮಾಲೀಕನಿಗೆ ಮತ್ತು ಕಾರ್ಮಿಕರಿಗಿರಲಿಲ್ಲವಂತೆ. ಮಾಲೀಕನಿಗೆ ಉತ್ಪಾದನೆ ಮತ್ತು ಲಾಭ ಕಡಿಮೆಯಾದರೆ, ಕಾರ್ಮಿಕರು ಕೆಲಸ ಕಳೆದುಕೊಂಡರು. ನಿರುಪದ್ರವಿ ಉತ್ಪಾದನೆ ಸಹ ಈ ರೀತಿ ರಕ್ಷಣಾ ಉತ್ಪಾದನೆಗೆ ಹೊಸೆದುಕೊಂಡಿದೆ.

ಇದಕ್ಕಿಂತ ಹಲವು ವರ್ಷಗಳ ಮೊದಲು ನಾನು ಬ್ರಿಟನ್‌ನಲ್ಲಿದ್ದೆ. ಬ್ರಿಟಿಷ್ ಆರ್ಥಿಕತೆಯ ಆರೋಗ್ಯದ ಮೇಲೆ ಬ್ರಿಟಿಷರಿಗೆ ಬಹಳ ಆತಂಕವಿತ್ತು. 'ನಮಗೆ ಈಗ ಬೇಕಾಗಿರುವುದು ಯುದ್ಧ (ನಮ್ಮ ಆರ್ಥಿಕ ತೊಂದರೆಗಳನ್ನು ಪರಿಹರಿಸಲು)' ಎಂದು ಕೆಲವರು ಹೇಳಿದಾಗ ನನಗೆ ಗಾಬರಿಯಾಗಿತ್ತು. ಗಾಬರಿಗೊಂಡ ನಾನು, ಬ್ರಿಟನ್ ಯುದ್ಧದಲ್ಲಿ ಗೆಲ್ಲಬೇಕೆಂದು ಅವರ ಬಯಕೆಯೇ ಎಂದು ಕೇಳಿದೆ. 'ಯುದ್ಧ ಎಲ್ಲಿಯಾದರೂ ನಡೆದೀತು' ನನಗೆ ದೊರೆತ ಉತ್ತರ. ಬೇರೆ ಕಡೆ ಎಲ್ಲಾದರೂ ಯುದ್ಧವಾದರೆ, ಶಸ್ತ್ರಾಸ್ತ್ರ ಉತ್ಪಾದನೆಗೆ ಬೇಡಿಕೆ ಜೋರಾಗುತ್ತದೆ. ಈ ದೇಶಗಳೊಡನೆಬೇಕಾದರೆ ಲಂಚಕೊಟ್ಟು ಶಸ್ತ್ರಾಸ್ತ್ರ ಕಂಟ್ರಾಕ್ಟ್ ತೆಗೆದುಕೊಳ್ಳಲು ಬರುತ್ತದೆ. ಬ್ರಿಟನ್‌ನಲ್ಲಿ ಉದ್ಯೋಗ ಮತ್ತು ಸಮೃದ್ಧಿ, ವ್ಯಾಪಾರದಲ್ಲಿ ಸಮತೋಲನ ಹೆಚ್ಚುತ್ತದೆ ಎಂಬುದು ಅವರ ವಾದ.

'ಎರಡೂ ಪಕ್ಷದವರಿಗೆ ಗೊತ್ತಿಲ್ಲದವರಿಗೆ ಎರಡೂ ಕಡೆ ಪಕ್ಷಪಾತ ವಹಿಸಿದರೆ ಇನ್ನೂ ಚೆನ್ನ' ಇನ್ನೊಬ್ಬನ ಸಲಹೆ. ಈ ಎಲ್ಲಾ ಬ್ರಿಟಿಷ್ ಸಾಮಾನ್ಯ ನಾಗರಿಕರು ಯುದ್ಧಕೋರರಲ್ಲ. ಜಗತ್ತು ಹೀಗಿರಬಾರದು. ಇಲ್ಲಿ ನ್ಯಾಯ ಮತ್ತು ಸಮಾನತೆ ಇರಬೇಕೆಂದು ಅವರಿಗೂ ಆಸೆಗಳಿವೆ.

ಶಸ್ತ್ರಾಸ್ತ್ರ ಉತ್ಪಾದನೆಯಲ್ಲಿ ಭಾರಿ ಮೊತ್ತ ತೊಡಗಿಸಿದವರಿಗೆ ಯುದ್ಧ ಹುಟ್ಟಿಸುವಲ್ಲಿ ಸ್ಥಾಪಿತ ಹಿತಾಸಕ್ತಿ ಇರುತ್ತದೆ ಎಂಬುದು ಸ್ವಯಂವೇದ್ಯ. ನಿಜವಾಗಲೂ ಯುದ್ಧ ಹುಟ್ಟಿಸುತ್ತಾರೋ ಇಲ್ಲವೋ ಎನ್ನುವುದು ಬೇರೆ ಮಾತು. ಇದರಿಂದಾಗಿ ಶಸ್ತ್ರಾಸ್ತ್ರ ಉತ್ಪಾದನೆಯಲ್ಲಿ ಭಾರಿ ಪ್ರಮಾಣದಲ್ಲಿ ತೊಡಗಿಸಿದ ದೇಶಗಳಲ್ಲಿ ಈ ಕೈಗಾರಿಕೆಗೆ ಪ್ರೋತ್ಸಾಹಕೊಡುವುದು ರಾಜಕೀಯವಾಗಿ, ಆರ್ಥಿಕವಾಗಿ ಲಾಭದಾಯಕವಾಗಿರುತ್ತದೆ ಎಂಬುದು ಸ್ಪಷ್ಟ.

ಶಸ್ತ್ರಾಸ್ತ್ರಗಳ ಮೇಲೆ ಹೆಚ್ಚು ಖರ್ಚು ಮಾಡದೆ, ಬಳಕೆ ವಸ್ತುಗಳ ದೊಡ್ಡ ಪ್ರಮಾಣದ ಉತ್ಪಾದನೆಯಲ್ಲಿ ತೊಡಗಿದ ಜಪಾನ್ ಇಂದು ಜಗತ್ತಿನ ಆರ್ಥಿಕತೆಯ ಮೇಲೆ ಅಧಿಪತ್ಯ ಸ್ಥಾಪಿಸಿದೆ ಎಂಬುದು ಗಮನಾರ್ಹ. ಎಲ್ಲಾ ದೇಶಗಳ ಯುದ್ಧಕೋರರು ಇದರಿಂದ ಪಾಠ ಕಲಿತುಕೊಳ್ಳಬೇಕು.

—ಜಸವಂತ್ ಪಾಲೊಲಿಲ್

ಮಹಿಳಾ ಘಟಕದಿಂದ ಚಳುವಳಿ

ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ ರಾಜಗೋಪಾಲನಗರ ಘಟಕವು ಹಲವಾರು ದಿವಸಗಳಿಂದ ಸುರಿಯುತ್ತಿರುವ ಸತತವಾದ ಮಳೆಯಿಂದಾಗಿ ರಾಜಗೋಪಾಲನಗರದ ಬಸಪ್ಪನಕಟ್ಟೆ ಕೆರೆಗೆ ಸಮೀಪವಾಗಿದ್ದು ಹಲವಾರು ಗುಡಿಸಲುಗಳು ನೀರಲ್ಲಿ ಮುಳುಗಿರುವುದಾಗಿ, ಕೆರೆಯ ಕೋಡಿಯನ್ನು ನಿಲ್ಲಿಸಿರುವುದರಿಂದ ಈ ಅನಾಹುತಕ್ಕೆ ಕಾರಣವೆಂದು ಈ ಮನವಿ ತಿಳಿಸಲಾಗಿದೆ. ಕೆರೆಯ ಕೋಡಿಯನ್ನು ಹರಿದು ಹೋಗುವಂತೆ ಮಾಡಿ, ಬಿದ್ದಿರುವ ಗುಡಿಸಲುಗಳಿಗೆ ಪರಿಹಾರ ಒದಗಿಸಬೇಕಾಗಿ ಕೆರೆಯ ಸಮೀಪದಲ್ಲಿರುವ ಗುಡಿಸಲುಗಳಿಗೆ ಬೇರೆ ಕಡೆ ಸ್ಥಳ ಒದಗಿಸಬೇಕೆಂದು ಮಂಡಲ ಪಂಚಾಯಿತಿ, ಶಾಸಕರಿಗೆ, ಪೊಲೀಸರಿಗೆ, ಮೇಲಧಿಕಾರಿಗಳಿಗೆ ದಿ. 14-9-88 ರಂದು ಮನವಿ ಕೊಡಲಾಗಿದೆ.

ಮಹಿಳಾ ಘಟಕ ಆರಂಭ

ಶ್ರೀರಾಮಪುರದಲ್ಲಿ ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ ಸಭೆ 16-8-88ರಂದು ಸೇರಲಾಗಿತ್ತು. ಸಭೆಯಲ್ಲಿ ಕಾ॥ ಶಾಂತಕುಮಾರಿಯವರು ಹಾಜರಿದ್ದು ಮಹಿಳಾ ಸಂಘಟನೆಯ ಧ್ಯೇಯ, ಧೋರಣೆ, ಗುರಿಗಳ ಕುರಿತು ಮಾತನಾಡಿದರು. ನೂತನ ಸಮಿತಿ ರಚಿಸಲಾಗಿದ್ದು ಕಾ॥ ಜಯಲಕ್ಷ್ಮಿಯವರು ಸಂಚಾಲಕರಾಗಿ, ಕಾ॥ ಶಾರದಮ್ಮ, ಶ್ರೀಮತಿ ಸುವರ್ಣಮ್ಮ ಸಹ ಸಂಚಾಲಕರಾಗಿ ಆಯ್ಕೆಗೊಂಡರು.

ಕೊರಿಯಾ ಜನತಾ ಗಣತಂತ್ರಕ್ಕೆ ಶುಭಾಶಯ

ಕೊರಿಯಾ ಪ್ರಜಾಸತ್ತಾತ್ಮಕ ಜನತಾ ಗಣತಂತ್ರ ತನ್ನ ಸ್ಥಾಪನೆಯ 40ನೇ ವಾರ್ಷಿಕೋತ್ಸವವನ್ನು ಸೆಪ್ಟಂಬರ್ 9ರಂದು ಆಚರಿಸಿತು. ಸಿ.ಪಿ.ಐ.(ಎಂ) ಪರವಾಗಿ ಪಾಲಿಟ್ ಬ್ಯೂರೋ ಸದಸ್ಯ ಇ. ಬಾಲನಂದನ್ ಹಾಗೂ ಕೇಂದ್ರ ಸಮಿತಿ ಸದಸ್ಯ ಪಿ. ಆರ್. ಪರಮೇಶ್ವರನ್ ಈ ಸಮಾರಂಭದಲ್ಲಿ ಭಾಗವಹಿಸಿದರು. ಈ ಸಮಾರಂಭದಲ್ಲಿ ಸಿ.ಪಿ.ಐ. (ಎಂ) ನೀಡಿದ ಶುಭಾಶಯದಲ್ಲಿ ಶಾಂತಿಯುತ ಪುದರ್ಯೈಕ್ಯದ ಕೊರಿಯಾ ಜನತೆಯ ಹೋರಾಟಕ್ಕೆ, ಅಮೇರಿಕನ್ ಮಿಲಿಟರಿ ಕುತಂತ್ರಗಳ ವಿರುದ್ಧ ಹೋರಾಟಕ್ಕೆ ಹಾಗೂ ಉತ್ತರ ಕೊರಿಯಾದೊಳಗೆ ಸಮಾಜವಾದವನ್ನು ಬಲಗೊಳಿಸುವ, ಆಳಗೊಳಿಸುವ ಸೃಜನಾತ್ಮಕ ಪ್ರಯತ್ನಗಳಿಗೆ ಸೌಹಾರ್ದತೆ ಹಾಗೂ ಬೆಂಬಲ ವ್ಯಕ್ತಪಡಿಸಲಾಯಿತು.

ಬಲ್ಗೇರಿಯಾಕ್ಕೆ ಶುಭಾಶಯ

ಇದೇ ಸೆಪ್ಟಂಬರ್ 9ರಂದು ತನ್ನ ಸಮಾಜವಾದೀ ಕ್ರಾಂತಿಯ ವಿಜಯದ 44ನೇ ವಾರ್ಷಿಕೋತ್ಸವ ಆಚರಿಸಿದ ಬಲ್ಗೇರಿಯಾದ ಜನತೆ ಹಾಗೂ ಕಮ್ಯುನಿಸ್ಟ್ ಪಕ್ಷಕ್ಕೆ ಸಿ.ಪಿ.ಐ. (ಎಂ) ಕೇಂದ್ರ ಸಮಿತಿ ಹಾರ್ದಿಕ ಶುಭಾಶಯ ಕೋರಿದೆ.

1942ರಲ್ಲಿ ಕಾಮ್ರೇಡ್ ಜಿಯೋರ್ಜಿ ದಿಮಿತ್ರೋವ್ ಸ್ಥಾಪಿಸಿದ ಪಿತೃಭೂಮಿ ರಂಗದ ನೇತೃತ್ವದಲ್ಲಿ ಬಲ್ಗೇರಿಯಾ ಜನತೆಯ ಧೀರ ಫ್ಯಾಸಿಸ್ಟ್-ವಿರೋಧಿ ಹೋರಾಟದ ಸ್ಫೂರ್ತಿಯನ್ನು ನೆನೆಸಿಕೊಂಡಿರುವ ಸಿ.ಪಿ.ಐ. (ಎಂ) ಕೇಂದ್ರ ಸಮಿತಿ ಈಗ ಎಲ್ಲಾ ಹಂತಗಳಲ್ಲಿ ಚುನಾವಣೆಗಳ ಮೂಲಕ ಸ್ವಯಂ-ನಿರ್ವಹಣೆ ಮತ್ತು ಸ್ವಯಂ-ಆಡಳಿತದತ್ತ ಬದಲಾವಣೆ ತರುವ ಪ್ರಭುತ್ವಗಳಲ್ಲಿ ಯಶಸ್ಸು ದೊರೆಯಲೆಂದು ಹಾರೈಸಿದೆ.

ಸೆಪ್ಟೆಂಬರ್ ಚಳುವಳಿ : ರಾಜ್ಯದೆಲ್ಲೆಡೆ ರಸ್ತಾರೋಖೊ, ಜೈಲ್‌ಭರೋ ಯಶಸ್ವಿ

ಬಿಜಾಪುರ ಸಮಾವೇಶ

ಎಡ ಪಕ್ಷಗಳ ಕರೆಯ ಮೇರೆಗೆ ರಾಷ್ಟ್ರವ್ಯಾಪಿ ಸೆ. 1 ರಿಂದ 15 ರವರೆಗೆ ರೈತರ ಬೇಡಿಕೆಗೋಸ್ಕರ ಪಿಕೆಟಿಂಗ್, ಜೈಲ್ ಭರೊ-ಚಳುವಳಿಯ ಕರೆಯ ಹಿನ್ನೆಲೆಯಲ್ಲಿ ದಿ. 8-8-88 ರಂದು ಬಿಜಾಪುರದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ, ಪ್ರಾಂತ ಕೃಷಿ ಕಾರ್ಮಿಕರ ಜಿಲ್ಲಾ ಸಮಾವೇಶಗಳು ನಡೆದವು. ಈ ಸಮಾವೇಶದಲ್ಲಿ ಕಾ॥ ಭೀಮಸಿ ಕಲಾದಗಿ ಕಾ॥ ಕಲ್ಲಪ್ಪ ತಿರಣಗಿ, ಕಾ॥ನಿತ್ಯಾನಂದ ಸ್ವಾಮಿಯವರು ಹಾಜರಾಗಿದ್ದರು. ಈ ಸಮಾವೇಶದಲ್ಲಿ ಯುವಜನ ಸಂಘಟನೆ, ವಿದ್ಯಾರ್ಥಿ ಸಂಘಟನೆಗಳ ಪ್ರತಿನಿಧಿಗಳು ಮಾತನಾಡಿ ರೈತರ ಚಳುವಳಿಗಳಿಗೆ ಬೆಂಬಲ ಸೂಚಿಸಿದರು. ಸಮ್ಮೇಳನವು ಈ ತೀರ್ಮಾನಗಳನ್ನು ತೆಗೆದುಕೊಳ್ಳಲಾಯಿತು. ರೈತರು ಬೆಳೆದ ಬೆಳೆಗೆ ನ್ಯಾಯ ಬೆಲೆ, ಬಗರಹುಕುಂ ಸಾಗುವಳಿ ಜಮೀನು ಸಕ್ರಮಗೊಳಿಸುವುದು. ನೀರಾವರಿ ಯೋಜನೆ ತೀವ್ರ ಮುಗಿಸುವುದು, ಕೃಷಿ ಕೂಲಿಕಾರರ ವೇತನ ಹೆಚ್ಚಿಸುವುದು, ವಸತಿ ಹೀನರಿಗೆ ಮನೆ, ಉಚ್ಚಮಟ್ಟದ ಭ್ರಷ್ಟಾಚಾರ ತಡೆಗಟ್ಟುವುದು, ಸೆ. 1 ರಿಂದ 15 ರವರೆಗೆ ನಡೆಯುವ ಜೈಲ್‌ಭರೋ ಚಳುವಳಿಯನ್ನು ಯಶಸ್ವಿಗೊಳಿಸುವುದು.

ಧಾರವಾಡ

ಕಮ್ಯುನಿಸ್ಟ್ ಪಕ್ಷಗಳ ನಾಯಕತ್ವದಲ್ಲಿರುವ ರೈತ-ಕೃಷಿ ಕೂಲಿಕಾರರ ಅಖಿಲ ಭಾರತ ಸಂಘಟನೆಗಳು ನೀಡಿದ ಕರೆಯ ಮೇರೆಗೆ 12-9-88 ರಂದು ಧಾರವಾಡದಲ್ಲಿ ಪೂನಾ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ತಡೆಯೊಡ್ಡಿ 'ರಾಸ್ತಾ ರೋಖೊ' ಕಾರ್ಯಕ್ರಮ ಜರುಗಿಸಲಾಯ್ತು.

ಸಿಪಿಐ(ಎಂ) ನಾಯಕತ್ವದ ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಸಿಐಟಿಯುಗೆ ಸಂಬಂಧಪಟ್ಟ ಕಾರ್ಮಿಕ ಸಂಘಗಳು, ಭಾರತ ವಿದ್ಯಾರ್ಥಿ ಫೆಡರೇಷನ್, ಬೀಡಿ ಕಾರ್ಮಿಕರ ಸಂಘ, ನಗರ ವಸತಿ ರಹಿತ ಮತ್ತು ಇತರ ಸಂಘಗಳ ಸಹಾಯದಿಂದ ಸುಮಾರು 300 ಜನ ಊರಲ್ಲಿ ಮೆರವಣಿಗೆ ನಡೆಸಿ ಪೂನಾ ಬೆಂಗಳೂರು ರಸ್ತೆತಡೆ ಚಳುವಳಿ ನಡೆಸಲಾಯ್ತು. ನೂರಕ್ಕೂ ಹೆಚ್ಚು ಮಹಿಳೆಯರು ಪಾಲ್ಗೊಂಡಿದ್ದರು. ರೈತರಿಗೆ ಕೃಷಿ ಕೂಲಿಗಾರರ ಸಮಸ್ಯೆಗಳ ಪರಿಹಾರಕ್ಕಾಗಿ ಒತ್ತಾಯಿಸಿ ಸ್ಥಳೀಯ ಬೇಡಿಕೆಗಳನ್ನು ಸಹ ಹೊಂದಿ ಚಳುವಳಿ ರೂಪಿಸಲಾಗಿತ್ತು.

ಕರ್ನಾಟಕ ಪ್ರಾಂತ ರೈತ ಸಂಘದ ಸತ್ತೂರು ಶಾಖೆಯು ಸೆ. 9 ರಿಂದ 11ರ ವರೆಗೆ ಪ್ರಚಾರ ಕಾರ್ಯಕ್ರಮ ನಡೆಸಿ ಕರಪತ್ರ ಹೊರಡಿಸಿ ರೈತರಿಗೆ ಹಂಚಲಾಗಿದೆ.

ಹಾವೇರಿ

ಅಖಿಲ ಭಾರತ ಕಿಸಾನ್ ಸಭಾ ಹಾಗೂ ಕೃಷಿ ಕೂಲಿಕಾರರ ಸಂಘಟನೆಗಳ ಸೆಪ್ಟೆಂಬರ್ ಹೋರಾಟದ ಅಂಗವಾಗಿ 7-9-88 ರಂದು ಹಾವೇರಿಯಲ್ಲಿ 300 ಜನರ ಭಾರಿ ಮೆರವಣಿಗೆಯೊಂದಿಗೆ ತಹಶೀಲ್ದಾರರ ಕಛೇರಿ ಧಾವಿಸಿ ಮನವಿಯೊಂದನ್ನು ಅರ್ಪಿಸಲಾಯಿತು. ಅದಕ್ಕಿಂತಲೂ ಮೊದಲಾಗಿ ನಡೆದ ಬಹಿರಂಗ ಸಭೆಯಲ್ಲಿ ಕಾ॥ ವ್ಹಿ. ಪಂಚಾಕ್ಷರಿಯವರು ಕೇಂದ್ರ-ರಾಜ್ಯಗಳೆರಡು ರೈತರಿಗೆ ವಂಚನೆ ಮಾಡುತ್ತಾ, ಗ್ರಾಮಾಂತರ ಪ್ರದೇಶದಲ್ಲಿ ಕೃಷಿ ಕೂಲಿಕಾರರು ಸರಕಾರಿ ಜಮೀನಿನಲ್ಲಿ ಉತ್ತುವರಿ ಮಾಡಿ ತಮ್ಮ ಜೀವನ ಸಾಗಿಸುತ್ತಿರುವ ಜಮೀನಿಗೆ ಪಟ್ಟಾ ಕೊಡದಿರುವುದನ್ನು ಖಂಡಿಸಿದರು. ಈ ಮೆರವಣಿಗೆಯ ಮುಂಖುಂಡತ್ವವನ್ನು ಕಾ॥ ರುದ್ರಪ್ಪ ಜಾಬಿನ ವಹಿಸಿದ್ದರು.

ನಂತರ ರಾಜ್ಯದ ಮುಖ್ಯಮಂತ್ರಿಯವರಿಗೆ ರೈತರ ಸಮಸ್ಯೆಗಳ ಕುರಿತು ತಿಳಿಸಿ ಪರಿಹಾರ ಒದಗಿಸುವ ಒಂದು ಮನವಿಪತ್ರ ಕಳುಹಿಸಲಾಯಿತು.

ದ. ಕನ್ನಡ

ಬಂಟ್ವಾಳ

ಬಂಟ್ವಾಳ ತಾಲ್ಲೂಕಿನ ಕನ್ಯಾನ ಗ್ರಾಮದಲ್ಲಿ ರೈತ ಕೃಷಿ ಕೂಲಿಗಾರರ ಸಭೆಯನ್ನು 8-9-88 ರಂದು ನಡೆಸಲಾಯಿತು. ಈ ಸಭೆಯಲ್ಲಿ ತಾ॥ 12 ರಂದು ವಿಟ್ಲ ನಾಡ ಕಛೇರಿಯ ಮುಂದೆ ನಡೆಯುವ ಧರಣೆಯಲ್ಲಿ ಭಾಗವಹಿಸಲು ಹಾಗೂ ತಾ. 13 ರಂದು ಬಂಟ್ವಾಳ ತಾಲ್ಲೂಕು ಕಛೇರಿಯ ಮುಂದೆ ನಡೆಯುತ್ತಿರುವ ಸಾಮೂಹಿಕ ಪಿಕೆಟಿಂಗ್‌ನಲ್ಲಿ ಭಾಗವಹಿಸಿ ಬಂಧನಕೊಳ್ಳಗಾಗಲು ತೀರ್ಮಾನಿಸಲಾಯಿತು. 20 ಜನರಿರುವ ಗ್ರಾಮ ರೈತ ಸಂಘದ ಸಮಿತಿ ರಚಿಸಲಾಯಿತು.

ಜೈಲ್ ಭರೋ ಕಾರ್ಯಕ್ರಮವನ್ನು ಪ್ರಚಾರ ಪಡಿಸಲು ಕಾಲ್ನಡಿಗೆ ಜಾಥಾವನ್ನು ರೈತ ಸಂಘದ ಕಾರ್ಯದರ್ಶಿ ಶ್ರೀ ಬಿ. ನಾರಾಯಣ ಮತ್ತು ಶ್ರೀ ಎಂ. ಮಾರಪ್ಪರವರ ನಾಯಕತ್ವದಲ್ಲಿ ಕರಿಯಂಗಳ ಕಲ್ಲುಗುಡ್ಡೆಯಲ್ಲಿ ಶ್ರೀ ಬಿ. ವಾಸು ಗಟ್ಟಿಯವರಿಂದ ಉದ್ಘಾಟಿಸಲ್ಪಟ್ಟಿತು.

ಅದೇ ರೀತಿ ಬಂಟ್ವಾಳ ಕಸಬಾ ಗ್ರಾಮದ ಪೊನ್ನಂಗಿಲ ಎಂಬಲ್ಲಿ ಶ್ರೀ ಬಿ. ರುಕ್ಮಯ ಪೂಜಾರಿ, ಪೂವಯ್ಯ ಬಂಗೇರ ಚಂದಪ್ಪನಾಯ್ಕ ನೇತೃತ್ವದಲ್ಲಿ ಉದ್ಘಾಟಿಸಲ್ಪಟ್ಟಿತು ಈ ಎರಡು ಜಾಥಾಗಳು ತಾ. 13ರ ಜೈಲ್‌ಭರೋ ಚಳುವಳಿಯ ಯಶಸ್ವಿಗೆ ಸಿದ್ಧತೆ ನಡೆಸುವುದು.

ಕರ್ನಾಟಕ ಪ್ರಾಂತ ರೈತಸಂಘ ಹಾಗೂ ಕೃಷಿಕೂಲಿಗಾರರ ಸಂಘದ ರಾಜ್ಯ ಸಮಿತಿ ಕರೆಯ ಮೇರೆಗೆ ತೀರ್ಥಹಳ್ಳಿ ಶಾಖೆ 8-9-88ರಂದು ತೀರ್ಥಹಳ್ಳಿ ತಾಲ್ಲೂಕು ಕಛೇರಿ ಕಾರ್ಯ ತಡೆ ಆಚರಿಸಿತು. 17 ಜನ ಕಾರ್ಯಕರ್ತರನ್ನು ಬಂಧಿಸಿ ಅಂದೇ ಬಿಡುಗಡೆ ಮಾಡಲಾಯ್ತು.

ವಿಟ್ಲ

ಎಡ ಪಕ್ಷಗಳ ರೈತ-ಕೃಷಿ ಕೂಲಿಗಾರರ ಚಳುವಳಿ ಅಂಗವಾಗಿ 13 ಬೇಡಿಕೆಗಳನ್ನು ಮುಂದಿಸಿ ಸೆ. 1 ರಿಂದ 15 ರವರೆಗೆ ನಡೆಸುತ್ತಿರುವ 'ಜೈಲ್ ಭರೋ' ಚಳುವಳಿಯು ವಿಟ್ಲ ನಾಡಕಛೇರಿಯ ಮುಂದೆ ಸುಮಾರು 500 ಮಂದಿ ರೈತರು, ಕೃಷಿ ಕೂಲಿಗಾರರು ತಾ॥ 12 ರಂದು ಧರಣಿ ಮುಷ್ಕರ ನಡೆಸಿದರು.

ಈ ಧರಣಿ ಮುಷ್ಕರದ ನೇತೃತ್ವವನ್ನು ಸಿ.ಪಿ.ಐ.(ಎಂ)ನ ಕಾರ್ಯದರ್ಶಿ ಶ್ರೀ ಬಿ. ವಾಸುಗಟ್ಟಿ, ಸಿ.ಪಿ.ಐ.ನ ಕಾರ್ಯದರ್ಶಿ ವಿಶ್ವನಾಥನಾಯ್ಕ. ರೈತಸಂಘದ ಮುಖಂಡರಾದ ಶ್ರೀ ಬಿ. ಹೂವಯ್ಯ ಬಂಗೇರ, ಎ. ರಾಮಣ್ಣ, ಹಮೀದ್, ಭೋಜ ಕರಂಬೇರ ವಹಿಸಿದ್ದರು.

ಉಡುಪಿ

ರೈತ ಕೃಷಿ ಕೂಲಿಗಾರರು ಸೆ. 1 ರಿಂದ 15ರವರೆಗೆ ನಡೆಯುವ ಎಡ ಪಕ್ಷಗಳ ನೇತೃತ್ವದ ಚಳುವಳಿಯು ದಿನಂಪ್ರತಿ ಉಡುಪಿ ತಾಲ್ಲೂಕು ತಹಶೀಲ್ದಾರ್‌ರವರ ಕಛೇರಿ ಎದುರು ಸತ್ಯಾಗ್ರಹ ನಡೆಸಲಾಗಿದೆ. ದಿ. 12-9-88ರಂದು ರೈತ, ಕೃಷಿ ಕೂಲಿಗಾರರು ದೊಡ್ಡ ಸಂಖ್ಯೆಯಲ್ಲಿ ಸೇರಿ ಸಾಮೂಹಿಕ ಸತ್ಯಾಗ್ರಹ ನಡೆಸಲಾಯಿತು. ಸಂಜೆ ನಡೆದ ಬಹಿರಂಗ ಸಭೆಯಲ್ಲಿ ಕಾ॥ ಶಂಕರ್ ಎನ್. ಶೆಟ್ಟಿಗಾರ್, ಕಾ॥ ಡೇವಿಡ್ ಎ. ಕರ್ಕಡರು ಮಾತನಾಡಿ ಎಡ ಪಕ್ಷಗಳ ನೇತೃತ್ವದಲ್ಲಿ ನಡೆಯುವ ರೈತ, ಕೃಷಿ ಕೂಲಿಗಾರರ ಚಳುವಳಿಯನ್ನು ವಿಶಾಲ ಪ್ರಮಾಣದಲ್ಲಿ ಪ್ರಚಾರಗೊಳಿಸಿ ಸಂಘಟನೆ ಬೆಳೆಸಿ ಹೋರಾಟ ಮುಂದುವರಿಸಬೇಕಾದ ಅಗತ್ಯತೆ ಕುರಿತು ವಿವರಿಸಿದರು.

ಉಡುಪಿ ತಾಲ್ಲೂಕಿನಾದ್ಯಂತ 3 ದಿನಗಳ ಮೆಟಡಾರ್ ವ್ಯಾನಿನಲ್ಲಿ ವಿಸ್ತೃತವಾದ ಪ್ರಚಾರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಸುಮಾರು 55 ಹಳ್ಳಿಗಳಲ್ಲಿ ಪ್ರಚಾರ ಮಾಡಲಾಗಿದೆ. 8,000 ಕರಪತ್ರ ಮುದ್ರಿಸಿ ಹಂಚಲಾಗಿದೆ.

ಚಿಕ್ಕಮಗಳೂರು

ಮೂಡಿಗೆರೆ ಶಾಖಾ ಸಮ್ಮೇಳನ

ದಿ. 29-8-88ರಂದು ಮೂಡಿಗೆರೆ ಸಿ.ಪಿ.ಐ.(ಎಂ) ಪಕ್ಷದ ಶಾಖೆಯು ಮುತ್ತಿಗಟ್ಟೆಯಲ್ಲಿ ಸೇರಿ, ಹೋರಾಟದಲ್ಲಿ ಮಡಿದವರಿಗೆ ಶ್ರದ್ಧಾಂಜಲಿ ಅರ್ಪಿಸಿತು. ಕಾ॥ ವಿ. ಸುಕುಮಾರ್‌ರವರು ಉದ್ಘಾಟನೆ ಮಾಡಿದರು. ಕಾರ್ಯದರ್ಶಿ ಎಸ್. ವಿ. ಪ್ರಕಾಶರವರು ವರದಿ ಮಂಡಿಸಿದರು. ವರದಿ ಮೇಲಿನ ಚರ್ಚೆಯ ನಂತರ ಕಾ॥ ಎಸ್.ವಿ. ಪ್ರಕಾಶರವರನ್ನು ಸರ್ವಾನುಮತದಿಂದ ಕಾರ್ಯದರ್ಶಿಯನ್ನಾಗಿ ಮಾಡಲಾಯಿತು. ಸೆಪ್ಟೆಂಬರ್ ರೈತರ ಚಳುವಳಿಗೆ ಸಂಪೂರ್ಣ ಬೆಂಬಲ ಕೊಡುವುದಾಗಿ ನಿರ್ಣಯ ಕೈಗೊಳ್ಳಲಾಯಿತು.

ಜೈಲ್‌ಭರೊ ಚಳುವಳಿ : ಎನ್.ಕೆ. ಉಪಾಧ್ಯಾಯ, ಭೀಮಸಿ ಕಲಾದಗಿ ಬಂಧನ

ರೈತಸಂಘ-ಕೃಷಿಕಾರ್ಮಿಕರ ಸಂಘಗಳ ಜೈಲ್ ಭರೋ ಕಾರ್ಯಕ್ರಮದ ಕೊನೆ ಹಂತವಾದ 10-9-88 ರಂದು ಬಿಜಾಪುರ ನಗರದ ಗಾಂಧಿ ಚೌಕದಲ್ಲಿ ನಡೆದ ಬೃಹತ್ ರಸ್ತಾರೋಖೋ ಚಳುವಳಿ ನಡೆದಾಗ ಪೋಲೀಸರು 400 ಜನರನ್ನು ಬಂಧಿಸಿ 81 ಜನರನ್ನು ಮ್ಯಾಜಿಸ್ಟ್ರೇಟರ ಮುಂದೆ ಹಾಜರುಪಡಿಸಿ ಬಿಜಾಪುರ ಸೆಂಟ್ರಲ್ ಜೈಲಿಗೆ ಕಳುಹಿಸಿದರು. ಅದರಲ್ಲಿ 35 ಹೆಂಗಸರಿದ್ದರು, ಒಟ್ಟು 715 ಜನರನ್ನು ಬಂಧಿಸಿ ಖಟ್ಲೆ ಹಾಕಲಾಗಿದೆ. ಬಂಧನದ ಮುಂಚೆ ರೈತ ಸಂಘದ ಕಛೇರಿಯಿಂದ ಬೃಹತ್ ಮೆರವಣಿಗೆ ಹೊರಟು ಬಸ್‌ಸ್ಟ್ಯಾಂಡಿನಲ್ಲಿ 15 ನಿಮಿಷ ಬಸ್-ರಸ್ತಾರೋಖೋ ಕಾರ್ಯಕ್ರಮ ನಡೆಸಿತು. ಸಿ.ಪಿ.ಐ.(ಎಂ) ಸೆಕ್ರೆಟರಿಯೇಟ್ ಸದಸ್ಯರಾದ ಎನ್.ಕೆ. ಉಪಾಧ್ಯಾಯ, ಭೀಮಸಿ ಕಲಾದಗಿ, ಎಲ್.ಕೆ. ಚಂಚಲಕರ್, ಸದಾನಂದ ಮೋದಿ ಮೊದಲಾದವರನ್ನೆಲ್ಲಾ ಜೈಲಿನಲ್ಲಿ ಬಂಧನದಲ್ಲಿಡಲಾಗಿದೆ.

ಬೆಳಗಾವಿ ರಸ್ತಾರೋಖೊ : ಬಂಧನ, ಬಿಡುಗಡೆ

ಸೆಪ್ಟೆಂಬರ್ 1 ರಿಂದ 15 ರವರೆಗೆ ನಡೆಯಲಿರುವ ಚಳುವಳಿ ಅಂಗವಾಗಿ ರೈತರನ್ನು ಬಂಧಿಸಿ ಬಿಡುಗಡೆಗೊಳಿಸಿದ್ದಾರೆ. 3. 9. 88 ರಂದು ಮುದ್ನೂರು, ಮುಬನೂರು, ಜಾಲಿಕಟ್ಟೆ ರೈತರು ತಹಸೀಲ್ದಾರರ ಕಛೇರಿ ಎದುರು ಧರಣಿ ನಡೆಸಿದ್ದಾರೆ. 5. 9. 88 ರಂದು ಸವದತ್ತಿ ಐ. ಬಿ. ಹತ್ತಿರ ರಸ್ತೆ ಬಂದ್ ಮಾಡಿ 43 ಜನ ರೈತರು ಬಂಧನಕ್ಕೊಳಗಾಗಿ ಬಿಡುಗಡೆಯಾಗಿದ್ದಾರೆ. 6. 9. 88 ರಂದು ಮುನಬಳ್ಳಿ ಐ.ಬಿ. ಹತ್ತಿರ ರಸ್ತೆ ಬಂದ್ ಮಾಡಿ 73 ಜನ ರೈತರು ಬಂಧಿಸಿ ಬಿಡುಗಡೆಯಾಗಿದ್ದಾರೆ.

7.9.88 ರಂದು ಹೂಲಿಕಟ್ಟೆ ಹತ್ತರ ರಾಮದುರ್ಗ, ಹುಬ್ಬಳ್ಳಿ ರಸ್ತೆ ಬಂದ್ ಮಾಡಿ 38 ಜನ ಬಂಧನಕ್ಕೊಳಗಾಗಿ ಬಿಡುಗಡೆಯಾಗಿದ್ದಾರೆ.

8.9.88 ರಂದು ಬೆಳಗಾಂ ರಸ್ತಾ ರೋಕೋ ಚಳುವಳಿಯಲ್ಲಿ 200 ಜನರು ಬಂಧನಕ್ಕೊಳಗಾಗಿ, ಬಿಡುಗಡೆಯಾಗಿದ್ದಾರೆ.

ನೃಪೇನ್ ಮೇಲೆ ಪೋಲೀಸ್ ದೌರ್ಜನ್ಯ : ಬೆಂಗಳೂರಿನಲ್ಲಿ ಉಗ್ರ ಖಂಡನೆ

ರೈತ-ಕೃಷಿ ಕೂಲಿಕಾರರ ಚಳುವಳಿಗೆ ನೇತೃತ್ವ ನೀಡುತ್ತಿದ್ದ ತ್ರಿಪುರಾದ ಮಾಜಿ ಮುಖ್ಯಮಂತ್ರಿ ಹಾಗೂ ಸಿಪಿಐ(ಎಂ) ಪೊಲಿಟ್ ಬ್ಯೂರೊ ಸದಸ್ಯರಾದ ಕಾ॥ ನೃಪೇನ್ ಚಕ್ರವರ್ತಿಯವರ ಮೇಲೆ ತ್ರಿಪುರ ರಾಜ್ಯದ ಸರ್ವಾಧಿಕಾರಿ ಕಾಂಗ್ರೆಸ ಗೂಂಡಾ ಸರ್ಕಾರ ನಡೆಸಿದ ಹಲ್ಲೆಯನ್ನು ಖಂಡಿಸಿ ಬೆಂಗಳೂರಿನಲ್ಲಿ ಸಿಪಿಐ(ಎಂ)ನ ಕಾರ್ಯಕರ್ತರು ಪಕ್ಷದ ರಾಜ್ಯ ಸಮಿತಿ ಕಛೇರಿಯಿಂದ ಮೆರವಣಿಗೆ ಹೊರಟು ಮೈಸೂರು ಬ್ಯಾಂಕ್ ವೃತ್ತದ ಬಳಿ ಪ್ರತಿಭಟನಾ ಸಭೆಯನ್ನು ನಡೆಸಿದರು.

ಈ ಮೆರವಣಿಗೆಯ ನೇತೃತ್ವವನ್ನು ಹೋಟೆಲ್ ಕಾರ್ಮಿಕ ಸಂಘದ ಮುಖಂಡರಾದ ಇ.ಕೆ.ಎನ್. ರಾಜನ್, ಸಿಐಟಿಯು ಮುಖಂಡರಾದ ನಾರಾಯಣರಾವ್ ಬಾನು, ಡಿ.ವೈ.ಎಫ್.ನ ಆರ್. ಜಯಕುಮಾರ್ ಮತ್ತು ಎಸ್‌ಎಫ್‌ಐನ ಗುರುಶಾಂತ್, ಬಯ್ಯಾರೆಡ್ಡಿ ವಹಿಸಿದ್ದರು. ಈ ಮೆರವಣಿಗೆಯಲ್ಲಿ ಪಕ್ಷದ ನೂರಾರು ಕಾರ್ಯಕರ್ತರು ಭಾಗವಹಿಸಿದ್ದರು.

ಸಭೆಯನ್ನುದ್ದೇಶಿಸಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಯವರಾದ ಪಿ. ರಾಮಚಂದ್ರ ರಾವ್‌ರವರು ಮಾತನಾಡಿ, ತ್ರಿಪುರಾ ರಾಜ್ಯದಲ್ಲಿ 10 ವರ್ಷಗಳ ಕಾಲ ನಿಷ್ಪಕ್ಷಪಾತಿಯಾಗಿ, ಜನತೆಗೆ ಸೇವೆ ಸಲ್ಲಿಸಿ, ಭ್ರಷ್ಟಾಚಾರವಿಲ್ಲದೇ ಗುಡ್ಡಗಾಡು ಜನತೆಯ ರಕ್ಷಣೆ ಕಾಪಾಡಿ ಅಧಿಕಾರನಡೆಸಿದಂಥ ತ್ರಿಪುರಾದ ಮಾಜೀ ಮುಖ್ಯಮಂತ್ರಿ ಕಾ॥ ನೃಪೇನ್ ಚಕ್ರವರ್ತಿಯವರ ಮೇಲೆ ನಡೆದ ಹಲ್ಲೆಯನ್ನು ಖಂಡಿಸಿದರು. ಆಳುವ ಕೇಂದ್ರ ಸರ್ಕಾರ ತನಗೆ ಆಪತ್ತು ಬಂದಲ್ಲಿ ಎಂತಹ ದಮನಕಾರಿ ನೀತಿಯನ್ನು ಅನುಸರಿಸುತ್ತಿದೆ ಎಂಬುದನ್ನು ಇತ್ತೀಚೆಗೆ ಕೇಂದ್ರ ಸರ್ಕಾರ ಕಾರ್ಮಿಕ ವಿವಾದ ಕಾಯ್ದೆ, ಆಸ್ಪತ್ರೆ ಮತ್ತು ಇತರೆ ಸಂಘಸಂಸ್ಥೆಗಳ ಮಸೂದೆ ಮತ್ತು ಪತ್ರಿಕೆಗಳ ಬಾಯಿಗೆ ಬೀಗ ಹಾಕುವಂಥ ಮಾನಹಾನಿ ಮಸೂದೆಗಳು ಪ್ರಭಾಪ್ರಭುತ್ವದ ಹಕ್ಕುಗಳನ್ನು ಮುರಿಯುತ್ತಿರುವುದು ಉದಾಹರಣೆಯಾಗಿವೆ. ಇಂತಹ ಜನ ವಿರೋಧಿ ನೀತಿ ಅನುಸರಿಸುವ ಕೇಂದ್ರದ ರಾಜೀವ್ ಸರಕಾರ ರಾಜಿನಾಮೆ ನೀಡಿ ಮಧ್ಯಂತರ ಚುನಾವಣೆ ನಡೆಸಬೇಕೆಂದು ಒತ್ತಾಯಿಸಿದರು. ಪ್ರಭಾಪ್ರಭುತ್ವದಲ್ಲಿ ನಂಬಿಕೆಯನ್ನಿಟ್ಟಿರುವ ಎಲ್ಲಾ ಜನತೆಯು ಇಂತಹ ಕೃತ್ಯಗಳ ವಿರುದ್ಧ ಹೋರಾಡಲು ಕರೆ ನೀಡಿದರು.

ಸಭೆಯನ್ನುದ್ದೇಶಿಸಿ ಕೆ.ವಿ. ಶ್ರೀನಿವಾಸ್‌ರವರು ಮಾತನಾಡಿ, ನಂತರ ಸಭೆಯು ನೃಪೇನ್ ಚಕ್ರವರ್ತಿಯವರ ಮೇಲೆ ನಡೆದ ಹಲ್ಲೆಯನ್ನು ಖಂಡಿಸಿ, ಪ್ರಧಾನಿ ರಾಜೀವ್‌ಗಾಂಧಿಯವರಿಗೆ ತಂತಿ ಸಂದೇಶವನ್ನು ಎಲ್ಲಾ ಕಾರ್ಮಿಕ ಸಂಘಟನೆಗಳು, ಸಾಮೂಹಿಕ ಸಂಘಟನೆಗಳು ಕಳುಹಿಸುವಂತೆ ತೀರ್ಮಾನಿಸಿತು.

ಉಚಿತ ವೈದ್ಯಕೀಯ ಶಿಬಿರ

ಟಿ. ದಾಸರಹಳ್ಳಿ ಮತ್ತು ರಾಜಗೋಪಾಲನಗರದ ಡಿ.ವೈ.ಎಫ್.ಐ. ಜಂಟಿಯಾಗಿ ಗುಡಿಸಲು ನಿವಾಸಿಗಳಿಗೆ ಉಚಿತ ವೈದ್ಯಕೀಯ ಶಿಬಿರನಡೆಸಿದರು. ರಾಜಗೋಪಾಲನಗರದಲ್ಲಿ ವೈದ್ಯಕೀಯ ಶಿಬಿರ ತಾ॥ 4-9-88ರಂದು ನಡೆಯಿತು. ಈ ಶಿಬಿರದಲ್ಲಿ 200 ಗುಡಿಸಲು ನಿವಾಸಿಗಳು ಉಚಿತವಾಗಿ ಮಾತ್ರೆ, ಔಷಧಿ, ಇಂಜೆಕ್ಷನ್ ಪಡೆದರು. ಈ ಶಿಬಿರದಲ್ಲಿ ಯಶವಂತಪುರದ ಡಾ॥ ಪ್ರಕಾಶ್ ಸಿ. ರಾವ್ ಹಾಗೂ ದಾಸರಹಳ್ಳಿ ರಾಘವೇಂದ್ರ ನರ್ಸಿಂಗ್ ಹೋಂನ ಡಾ॥ ಉಮೇಶ್‌ರವರು ಚಿಕಿತ್ಸೆ ನಡೆಸಿದರು. ರಘು ಮೆಡಿಕಲ್ ಅಂಗಡಿಯಿಂದ ಉಚಿತ ಔಷಧಿಗಳನ್ನು ಒದಗಿಸಿದರು.

ಶಿಬಿರದ ನಂತರ ಡಾ॥ ಪ್ರಕಾಶ್ ಸಿ. ರಾವ್ ಮಾತನಾಡಿ, ಬಡಜನತೆ ಅಜ್ಞಾನದಿಂದ ವೈಜ್ಞಾನಿಕದೆಡೆಗೆ ಬರಬೇಕೆಂದು, ಜನತೆಗೆ ವೈಜ್ಞಾನಿಕ ಅರಿವು ಇಲ್ಲದಿದ್ದರೆ ಒಬ್ಬ ಒಳ್ಳೆಯ ನಾಗರೀಕನಾಗಲು ಸಾಧ್ಯವಿಲ್ಲವೆಂದು ತಿಳಿಸಿದರು. ಕೊನೆಯಲ್ಲಿ ದಾಸರಹಳ್ಳಿ ಡಿ.ವೈ.ಎಫ್.ಐ. ಘಟಕದ ಕಾರ್ಯದರ್ಶಿಯವರು ವಂದಿಸಿದರು.

ಬೆಂಗಳೂರು

ಯಶವಂತಪುರ

ಬೆಂಗಳೂರಿನ ಯಶವಂತಪುರದ ಪಕ್ಷದ ಶಾಖಾ ಸಮ್ಮೇಳನ 3-9-88ರಂದು ನಡೆಸಲಾಯಿತು. ಕಾ॥ ಮೋಹನ್ ಅಧ್ಯಕ್ಷತೆ ವಹಿಸಿದರು. ಕಾರ್ಯದರ್ಶಿಯವರ ವರದಿ ಮಂಡನೆ ನಂತರ ಚರ್ಚೆ ನಡೆಸಲಾಯಿತು. ಕಾ॥ ವೆಂಕಟಸುಬ್ಬಯ್ಯನವರನ್ನು ಕಾರ್ಯದರ್ಶಿಗಳನ್ನಾಗಿ ಆರಿಸಲಾಯಿತು. ಜಿಲ್ಲಾ ಸಮಿತಿ ಸದಸ್ಯರಾದ ಕಾ॥ ಎಸ್. ಆರ್. ಆರಾಧ್ಯ, ಅನಂತರಾಮರವರು ಭಾಗವಹಿಸಿ ಮಾರ್ಗದರ್ಶನ ನೀಡಿದರು. ಪಕ್ಷದ ಜಿಲ್ಲಾ ಸಮ್ಮೇಳನಕ್ಕೆ 4 ಜನ ಪ್ರತಿನಿಧಿಗಳನ್ನು ಆರಿಸಲಾಯಿತು.

ಕಲ್ಕತ್ತಾದಿಂದ ತಿರುವನಂತಪುರದವರೆಗೆ : ಇ. ಎಂ. ಎಸ್.-2

ಭಾರತದ ರಾಜಕೀಯ - ಮೂರು ವರ್ಷಗಳ ನಂತರ

(ಕಳೆದ ಸಂಚಿಕೆಯಿಂದ)

1984ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಭಾರೀ ಬಹುಮತ ದೊರೆಯಿತಲ್ಲವೇ. ನಂತರ ಮಾರ್ಚ್ ತಿಂಗಳಲ್ಲಿ ನಡೆದ ವಿಧಾನಸಭಾ ಚುನಾವಣೆಗಳಲ್ಲೂ ಕಾಂಗ್ರೆಸ್ ಪೂರ್ತಿ ಗೆಲುವು ಸಾಧಿಸಿತ್ತು. ಈ ನಿರಾಶಾದಾಯಕ ವಾತಾವರಣದಲ್ಲಿ ಪಕ್ಷದ 12ನೇ ಅಧಿವೇಶನ ಕಲ್ಕತ್ತಾದಲ್ಲಿ ಸೇರಿತ್ತು.

ಆದರೆ, ಭೂರ್ಜ್ವಾ ಬಂಡವಾಳಶಾಹಿ ವಿರೋಧ ಪಕ್ಷಗಳಿಗಿಂತ ಭಿನ್ನವಾಗಿ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಶುಭ ನಿರೀಕ್ಷೆಯೊಂದಿಗೆ ಭಾರತದ ರಾಜಕೀಯವನ್ನು ವಿಮರ್ಶಿಸಿತು. ಚುನಾವಣೆಗಳಲ್ಲಿ ಕಾಂಗ್ರೆಸ್ ಗೆದ್ದರೂ ಕೂಡ ಜನರ ನಡುವೆ ಆ ಪಕ್ಷಕ್ಕಿರುವ ಸ್ಥಾನ ಸ್ವಲ್ಪವೂ ಪ್ರಗತಿಗೊಂಡಿಲ್ಲವೆಂದು ಪಕ್ಷದ ಅಧಿವೇಶನ ವಿಮರ್ಶೆ ಮಾಡಿತು.

ಸರ್ಕಾರ ಮುಂದುವರಿಸುತ್ತಿರುವ ಬಂಡವಾಳಶಾಹಿ ಪರ ಧೋರಣೆ ಸಾಮಾಜಿಕ ಜೀವನದ ಎಲ್ಲಾ ರಂಗಗಳಲ್ಲೂ ತನ್ನ ಕೆಟ್ಟ ಪ್ರಭಾವವನ್ನು ಬೀರುತ್ತಿದೆ. ಎಲ್ಲಾ ಜನವರ್ಗಗಳಲ್ಲೂ ಅಸಮಾಧಾನ ಉಲ್ಬಣಗೊಳ್ಳುತ್ತಿದೆ. ಭಿನ್ನಾಭಿಪ್ರಾಯಗಳನ್ನೊಳಗೊಂಡಿದ್ದಾಗ್ಯೂ ಕೂಡ ಆಡಳಿತ ಪಕ್ಷಕ್ಕೆ ದೂರಾಗಿ ಜನತೆ ನಡೆಸುತ್ತಿರುವ ಹೋರಾಟ ಬಲಗೊಳ್ಳುತ್ತಿದೆ. ಆಡಳಿತ ವರ್ಗ ಮತ್ತು ಜನರ ನಡುವಿನ ಸಂಘರ್ಷ ಶಕ್ತಿಗೊಳ್ಳುತ್ತಿದೆ ಎನ್ನುವುದೇ ಇದರ ಅರ್ಥ.

ಈ ಅಂದಾಜು ಸರಿಯೆನ್ನುವಂತೆ-ಒಂದು ಕಾಲು ವರ್ಷದ ನಂತರ-1987 ಮಾರ್ಚ್-ಕೇರಳ ಸೇರಿದಂತೆ 4 ರಾಜ್ಯಗಳಲ್ಲಿ ನಡೆದ ಚುನಾವಣೆಗಳಲ್ಲಿ ಕಾಂಗ್ರೆಸ್ ಹೀನಾಯವಾಗಿ ಸೋಲಲ್ಪಟ್ಟಿತು, ಈ ಬೆಳವಣಿಗೆ ಭೂರ್ಜ್ವಾ ವಿರೋಧ ಪಕ್ಷಗಳ ಭ್ರಮೆಗಳನ್ನು ಕಡಿಮೆ ಮಾಡಲು ಸಹಕಾರಿಯಾಯಿತು. ಆದರೆ, ಇದರಿಂದಾಗಿ ಮತ್ತು ಅವರು ಭ್ರಮೆಗೆ ದೂಡಲ್ಪಟ್ಟರು. ಕಾಂಗ್ರೆಸ್ಸಿನ ಅಜೇಯ ಶಕ್ತಿಯ ಬಗ್ಗೆ ಹಿಂದೆ ಅವರಿಗೆ ಭಯ ಬೆಳೆದು ಬಂದಿದ್ದಲ್ಲಿ. ಕಾಂಗ್ರೆಸ್ಸನ್ನು ಸುಲಭದಲ್ಲಿ ಸೋಲಿಸಬಹುದೆಂಬ ಭ್ರಮೆಯನ್ನು ಈ ಚುನಾವಣೆ ಅವರಲ್ಲಿ ತುಂಬಿತು.

ಇದಾದ ಕೆಲವು ತಿಂಗಳಲ್ಲಿ ನಡೆದ ಹರ್ಯಾಣ ಚುನಾವಣೆಯ ನಂತರ ಕಾಂಗ್ರೆಸ್ಸಿಗೆ ಒದಗಿಬಂದ ದಯನೀಯ ಸೋಲು ಈ ವಿರೋಧ ಪಕ್ಷಗಳ ಭ್ರಮೆಯನ್ನು ಮತ್ತಷ್ಟು ಹೆಚ್ಚಿಸಿತು. ಪ್ರತಿಪಕ್ಷಗಳು ಒಂದಾದರೆ ಸಾಕು ಕಾಂಗ್ರೆಸ್ಸನ್ನು ಚಿಂದಿಗೊಳಿಸಬಹುದೆಂದು ಅವರು ಲೆಕ್ಕ ಹಾಕಿದರು.

ಈ ಕಣ್ಣೋಟವನ್ನಿರಿಸಿ ಭೂರ್ಜ್ವಾ ವಿರೋಧ ಪಕ್ಷಗಳು ಕೈಗೊಂಡ ಹೋರಾಟ ತಂತ್ರಗಳು ಎಡ ಪಕ್ಷಗಳ ಹೋರಾಟ ತಂತ್ರಕ್ಕಿಂತ ಪೂರ್ಣವಾಗಿ ಭಿನ್ನವಾಗಿತ್ತು. ಮಾತ್ರವಲ್ಲ ತದ್ವಿರುದ್ಧವಾದದ್ದಾಗಿತ್ತು. ಜೀವನದ ಪ್ರಮುಖ ಪ್ರಶ್ನೆಗಳನ್ನು ಮುಂದಿರಿಸಿಕೊಂಡು ವಿವಿಧ ಜನಸಮುದಾಯಗಳು ನಡೆಸುತ್ತಿರುವ ಹೋರಾಟ ಪ್ರಕ್ಷೋಭೆಗಳನ್ನು ಒಂದುಗೂಡಿಸಿ ಅವುಗಳನ್ನೊಂದು ರಾಜಕೀಯ ಶಕ್ತಿಯಾಗಿ ಬೆಳೆಸುವ ತಂತ್ರವೇ ಎಡ ಪಕ್ಷಗಳಿಗಿರುವುದು.

ಈ ತಂತ್ರದಲ್ಲಿ ಖಂಡಿತವಾಗಿಯೂ ಚುನಾವಣೆಗೆ ಒಂದು ಪ್ರಮುಖ ಸ್ಥಾನ ಇದೆ. ಆದರೆ, ಜನ ಸಮೂಹದ ಹೋರಾಟಕ್ಕೆ ಪ್ರಾಮುಖ್ಯತೆ ನೀಡಿ ನಂತರವಷ್ಟೇ ಚುನಾವಣೆಯ ಹೋರಾಟವನ್ನು ಎಡ ಪಕ್ಷಗಳು ಪರಿಗಣಿಸುತ್ತವೆ. ಭೂರ್ಜ್ವಾ ವಿರೋಧ ಪಕ್ಷಗಳು ಚುನಾವಣಾ ಹೋರಾಟ-ಆದರಲ್ಲಿ ಗೆಲ್ಲಲು ಅಗತ್ಯವಾದ ಚುನಾವಣಾ ಹೊಂದಾಣಿಕೆ ಮಾಡಿಕೊಳ್ಳುವುದು-ಇದಕ್ಕೆ ಪ್ರಾಧಾನ್ಯತೆ ಕೊಡುತ್ತವೆ. ಬಹುಪಾಲು ಜನವರ್ಗದ ಹೋರಾಟ-ಪ್ರಕ್ಷೋಭೆಗಳಿಗೆ ಚುನಾವಣೆಯ ಹೊಂದಾಣಿಕೆಯ ನಂತರದ ಪ್ರಾಮುಖ್ಯತೆಯನ್ನು ನೀಡುವ ನೀತಿ ಅವರದ್ದಾಗಿದೆ. 1977ರಲ್ಲಿ ವಿರೋಧ ಪಕ್ಷಗಳು ಒಂದಾಗಿ ಇಂದಿರಾ ಗಾಂಧಿಯನ್ನು ಸೋಲಿಸಲು ಸಾಧ್ಯವಾದ ರೀತಿಯಲ್ಲಿ ಈಗಲೂ ಪ್ರತಿಪಕ್ಷಗಳು ಒಂದಾದಲ್ಲಿ ರಾಜೀವ್ ಗಾಂಧಿಯನ್ನು ಕೆಳಗಿಳಿಸಲು ಸಾಧ್ಯವೆನ್ನುವುದು ಅವರ ಕಣ್ಣೋಟವಾಗಿದೆ. ಇವುಗಳಲ್ಲಿ ಹಲವಾರು ರೂಪಗಳೂ ಮೊಳಕೆಯೊಡೆದವು. ಇದರಲ್ಲಿ ಪ್ರಧಾನವಾದದ್ದು-ಎಲ್ಲಾ ವಿರೋಧ ಪಕ್ಷಗಳೂ ಸೇರಿ ಒಂದು ಪಕ್ಷವಾಗಿ ಪರಿವರ್ತನೆಯಾಗುವುದು. ಇಲ್ಲವಾದಲ್ಲಿ-ಪ್ರತಿಯೊಂದೂ ಪಕ್ಷಗಳು ತಮ್ಮ ಅಸ್ತಿತ್ವ ಉಳಿಸಿಕೊಂಡೇ ಚುನಾವಣೆಯನ್ನು ಎದುರಿಸಲು ಹಾಗೂ ಗೆದ್ದಲ್ಲಿ ಸರಕಾರ ರೂಪಿಸಲು ಅಖಿಲ ಭಾರತ ಮಟ್ಟದಲ್ಲಿ ಒಂದು ಫೆಡರಲ್(ಸಂಯುಕ್ತ) ಸಂವಿಧಾನ ರಚಿಸುವುದು ಎಂಬಿತ್ಯಾದಿಯಾಗಿವೆ.

ಇವುಗಳನ್ನೇ ಯಾವುದನ್ನೇ ಅಂಗೀಕರಿಸಿದರೂ, ಅದರಲ್ಲಿ ಬಿ.ಜೆ.ಪಿ ಮಾದರಿಯ್ಯ ಬಲಪಂಥೀಯ ಪಕ್ಷಗಳೂ-ಕಮ್ಯುನಿಸ್ಟ್ ಮೊದಲಾದ ಎಡಪಂಥೀಯ ಪಕ್ಷಗಳೂ ಒಂದೇ ಸಮಯದಲ್ಲಿ ಇರುತ್ತವೆ. ಇದಕ್ಕಾಗಿ ಬಲಿಷ್ಟ ಭೂರ್ಜ್ವಾ ವಿರೋಧ ಪಕ್ಷಗಳು ಎಡಪಕ್ಷಗಳ ಮೇಲೆ ಒತ್ತಾಯ ಹೇರಲೂ ಪ್ರಯತ್ನಿಸಿದವು. ಆದರೆ ಎಡ ಪಕ್ಷಗಳು ಅದಕ್ಕೆ ಒಪ್ಪಲಿಲ್ಲ. ಇದಕ್ಕೆ ಸಂಬಂಧಿಸಿದಂತೆ ಎರಡು ವಾಸ್ತವಾಂಶಗಳಿವೆ.

ಒಂದನೆಯದಾಗಿ, ಒಂದುಗೂಡುವುದಾಗಿ ಪರಿಗಣಿಸಲ್ಪಡುವ ಎಡಪಕ್ಷಗಳು ಮತ್ತು ಬಲಪಂಥೀಯ ಪಕ್ಷಗಳೊಳಗೆ ಸಾಮಾಜಿಕ ಆರ್ಥಿಕ ಧೋರಣೆಗಳ ಪ್ರಶ್ನೆಯಲ್ಲಿ ಪರಿಹರಿಸಲಾಗದ ವೈರುಧ್ಯಗಳಿವೆ.

ಎರಡನೆಯದಾಗಿ, ಒರದಾಗಬೇಕಾಗಿರುವ ಪಕ್ಷಗಳಲ್ಲಿ ಕೆಲವು ಜಾತಿ-ಮತ-ಪ್ರದೇಶ ಇಲ್ಲವೇ ಭಾಷೆಗಳನನ್ನೂ ಪ್ರಮುಖವಾಗಿ ಮುಂದಿರಿಸಿಕೊಂಡು ಛಿದ್ರಕಾರಿ ಕೆಲಸ ಮಾಡುವಂತಹದ್ದಾಗಿವೆ.

ಈ ಎರಡೂ ವಿಭಾಗಗಳು ಒಳಗೊಂಡಂತಹ ಒಂದು ಕಾಂಗ್ರೆಸ್ ವಿರೋಧಿ ಸಂವಿಧಾನ ಉಂಟಾದಲ್ಲಿ ದೇಶದ ಐಕ್ಯತೆ ಬುಡಮೇಲು ಮಾಡುವುದರಲ್ಲೇ ಅದು ಪರ್ಯಾವಸಾನಗೊಳ್ಳಲಿದೆ. ಈ ವಾಸ್ತವವನ್ನು ಎತ್ತಿತೋರಿಸಿ ವಿರೋಧ ಪಕ್ಷಗಳಿಗೆ ದೂರಾಗಿ ಜನರನ್ನು ಸಾಮೂಹಿಕವಾಗಿ ಅಣಿನೆರೆಸಲು ಕಾಂಗ್ರೆಸ್ಸಿಗೆ ಸಾಧ್ಯವಿದೆ.

ಎಡಪಂಥೀಯ ಪಕ್ಷಗಳ ಈ ಅಂದಾಜಿಗೆ ಪ್ರಾಯೋಗಿಕ ಅನುಭವದ ಹಿನ್ನೆಲೆ ಕೂಡ ಇದೆ. 1977 ರಲ್ಲಿ ವಿವಿಧ ವಿರೋಧ ಪಕ್ಷಗಳು ಒಂದಾಗಿ ಸೇರಿ ಜನತಾ ಸರಕಾರವೂ ನಂತರ ಪಕ್ಷವೂ ರಚಿಸಲ್ಪಟ್ಟಾಗ ಆ ಪ್ರಯೋಗ ವಿಫಲಗೊಳಿಸಲ್ಪಟ್ಟಿತು. ಪಕ್ಷ ರಚಿಸಿ ಎರಡೂವರೆ ವರ್ಷ ಕಳೆಯುವುದರೊಳಗೆ ಜನತಾ ಒಡೆದು ಚೂರಾಯಿತು. ಇದಕ್ಕೆ ಕಾರಣ-ಈ ಸೂಚನೆ ಪ್ರತಿಪಾದಿಸುವವರು ಮುಂದಿಡುವಂತೆ ಮೇಲ್ಪಟ್ಟದ ಮುಖಂಡರುಗಳು ಅಧಿಕಾರಕ್ಕಾಗಿ ಕಿತ್ತಾಟ ನಡೆಸಿದ್ದರಿಂದ ಮಾತ್ರವೇ ಆಗಲಿಲ್ಲವಷ್ಟೇ.

ಸಾಮಾಜಿಕ, ಆರ್ಥಿಕ, ರಾಜಕೀಯ ಧೋರಣೆಗಳ ಪ್ರಶ್ನೆಯಲ್ಲಿ ವಿವಿಧ ಪಕ್ಷಗಳು ತಮ್ಮ ತಮ್ಮಲ್ಲೇ ಗೌರವಯುತವಾದ ಅಭಿಪ್ರಾಯ ಭಿನ್ನತೆಗಳನ್ನು ಹೊಂದಿರುವಂಥದ್ದು ಮೇಲ್ಪಟ್ಟದ ಮುಖಂಡರುಗಳ ನಡುವೆ ಇದ್ದಂತಹ ಅಧಿಕಾರದ ಕಚ್ಚಾಟದ ರೀತಿಯಲ್ಲೇ ಪ್ರಧಾನ ಅಂಶವಾಗಿತ್ತು. ಈ ಸತ್ಯವನ್ನು ಅರಿಯದೆ ಅಂದಿನ ಪ್ರಯೋಗವನ್ನೇ ಪುನರಾವರ್ತಿಸಲು ಹೊರಟರೆ ಅಂದಿನ ಸೋಲು ಮರುಕಳಿಸಲಿದೆ.

ಮುಂದಿನ ಚುನಾವಣೆಯಲ್ಲಿ-ಅದು 1989 ರ ಡಿಸೆಂಬರ್‌ನಲ್ಲಿ ನಡೆದರೂ, ಅದಕ್ಕಿಂತ ಮೊದಲೇ ನಡೆಸಲ್ಪಟ್ಟರೂ ಕಾಂಗ್ರೆಸ್ ಸೋಲಲಿದೆಯೆಂದೂ, ವಿರೋಧ ಪಕ್ಷಗಳು ಗೆಲುವು ಸಾಧಿಸಲಿವೆಯೆಂದು ಪರಿಗಣಿಸಿದಾಗ್ಯೂ ಅದು ಅಸಾಧ್ಯದ ಮಾತಲ್ಲ. ಮೇಲ್ಪಟ್ಟದ ಮುಖಂಡರುಗಳು ತಮ್ಮ ತಮ್ಮಲ್ಲೇ ಅಧಿಕಾರಕ್ಕೆ ಕಚ್ಚಾಡುತ್ತಾ ವಿಜಯಕ್ಕೆ ಅಡ್ಡಿಯನ್ನುಂಟು ಮಾಡುತ್ತಿದ್ದಾರೆ ಎಂಬ ಅಂಶಕ್ಕಿಂತ ಪ್ರಧಾನವಾದ ಇನ್ನೊಂದು ಅಂಶವಿದೆ. ವಿವಿಧ ವಿರೋಧ ಪಕ್ಷಗಳು ತಮ್ಮ ತಮ್ಮಲ್ಲೇ ಧೋರಣೆಗಳಿಗೆ ಸಂಬಂಧಿಸಿ ಹೊಂದಿರುವ ಅಭಿಪ್ರಾಯ ಭೇದಗಳು ಹಾಗು ಇದನ್ನು ಅರಿಯದೆಯೇ ವಿರೋಧ ಪಕ್ಷಗಳು ಒಂದಾದಲ್ಲಿ ಕಾಂಗ್ರೆಸ್ಸನ್ನು ಸುಲಭದಲ್ಲಿ ಸೋಲಿಸಬಹುದೆಂಬ ಒಂದು ಬದಲೀ ಸರ್ಕಾರವನ್ನು ರಚಿಸಬಹುದೆಂಬ ಕಣ್ಣೋಟ.

ವಿರೋಧ ಪಕ್ಷಗಳ ಗೆಲುವಿನ ನಂತರದ ಒಂದು ಕಾಂಗ್ರೆಸ್ಸೇತರ ಸರಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬಂತೆಂದು ಲೆಕ್ಕ ಹಾಕೋಣ. ಅದು ಎದುರಿಸುವ ಪ್ರಮುಖ ಪ್ರಶ್ನೆಗಳಲ್ಲಿ ಒಂದು ವಿದೇಶಿ ಧೋರಣೆಗೆ ಸಂಬಂಧಿಸಿದ್ದೇ ಆಗಿರುತ್ತದೆ.

3ನೇ ಜಾಗತಿಕ ಸಮರವನ್ನು ತೊರೆದು ಶಾಂತಿ ಸ್ಥಾಪನೆ ಮಾಡುವ ಕಣ್ಣೋಟ ಭಾರತ ಸೇರಿದಂತೆ ಹಿಂದುಳಿದ ರಾಷ್ಟ್ರಗಳ ಆರ್ಥಿಕ ಅಭಿವೃದ್ಧಿಗೆ ಅಡ್ಡಿಯಾಗಿ ನಿಲ್ಲುವ ಸಾಮ್ರಾಜ್ಯಶಾಹಿಗಳ ಧೋರಣೆಗಳಿಗೆದುರಾಗಿ ದೃಢವಾಗಿ ನಿಲ್ಲುವಂತಾಗಬೇಕು. ಭಾರತವನ್ನು ಅಮೇರಿಕಾ ಪ್ರಭಾವೀ ವಲಯದೊಳಗೆ ಸೆಳೆಯಲು ಅಮೇರಿಕಾ ಸಾಮ್ರಾಜ್ಯಶಾಹಿಗಳ ಕುತಂತ್ರವಿದ್ದು ಅದಕ್ಕೆದುರಾಗಿ ಕೂಡ ಹೋರಾಟ ಅಗತ್ಯವಾಗಿದೆ. ಕಪ್ಪು ಜನರನ್ನು ಕೀಳಾಗಿ ಪರಿಗಣಿಸುವ ವರ್ಣ ಪಕ್ಷಪಾತಿ ಧೋರಣೆ ಒಂದೆಡೆ ಇದ್ದರೆ, ಅವರೆದುರು ಎಲ್ಲಾ ಬಲವನ್ನು ಉಪಯೋಗಿಸಿ ಎದುರಿಸುವ ಸಮಾಜವಾದಿ ರಾಷ್ಟ್ರಗಳೂ-3ನೇ ಜಗತ್ತಿನ ರಾಷ್ಟ್ರಗಳೂ ಇವೆ. ಅವುಗಳನ್ನು ಒಂದು ಘಟ್ಟದವರೆಗೆ ಬೆಂಬಲಿಸುವ ಧೋರಣೆಯನ್ನೂ ಜವಹರಲಾಲ್ ನೆಹರೂ ಸೇರಿದಂತೆ ರಾಜೀವ್ ಗಾಂಧಿವರೆಗಿನ ಪ್ರಧಾನ ಮಂತ್ರಿಗಳು ಮುಂದುವರಿಸಿರುವುದು.

ಇದು ಪೂರ್ಣ ತಪ್ಪೆಂದು ವಾದಿಸುವ ಕೆಲವು (ಬಿಜೆಪಿ ಮಾದರಿಯ) ವಿರೋಧ ಪಕ್ಷಗಳೂ ಇವೆ. ಇದರಲ್ಲಿ ಯಾವ ತಪ್ಪೂ ಇಲ್ಲ. ಅದೇ ನೀತಿ ಮುಂದುವರಿಸಬೇಕೆಂದು ವಾದಿಸುವ ಕಾಂಗ್ರೆಸ್ಸಿನವರೂ ಇದ್ದಾರೆ. ಈ ಎರಡನ್ನೂ ಎದುರಿಸಿಕೊಂಡು ರಾಜೀವ್ ಸರಕಾರ ಇಂದು ಮುಂದುವರಿಸುತ್ತಿರುವ ವಿದೇಶೀ ನೀತಿಯನ್ನು ಸಾಮ್ರಾಜ್ಯಶಾಹಿ ವಿರೋಧಿ ನೆಲೆಗೆ ಬೆಳೆಸಲು ಪ್ರಯತ್ನಿಸುವ ವಿರೋಧ ಪಕ್ಷಗಳೂ ಇವೆ. ಇದರಲ್ಲಿ ಯಾವುದನ್ನು ತಾನೇ ವಿರೋಧ ಪಕ್ಷಗಳ ನೇತೃತ್ವದ ಸರಕಾರ ಅಂಗೀಕರಿಸುವುದು ?

ಇದೇ ರೀತಿ ಆಂತರಿಕ ಆರ್ಥಿಕ ಧೋರಣೆಗೆ ಸಂಬಂಧಿಸಿದ ಅಭಿಪ್ರಾಯ ಭಿನ್ನತೆಗಳೂ ಇವೆ. ರಾಜೀವ್ ಸರಕಾರ ಅನುಸರಿಸುತ್ತಿರುವ ಉದಾರವಾದಿ ನೀತಿಯನ್ನು ವಿದೇಶಿಗುತ್ತೇದಾರಿಗಳಿಗೆ ಇಚ್ಛಾನುಸಾರವಾಗಿ ಒಳನುಗ್ಗಲು ಅನುಕೂಲ ಕಲ್ಪಿಸುವ ಧೋರಣೆಯನ್ನು, ಸಾರ್ವಜನಿಕರ ವಲಯದ ಉದ್ಯಮಿಗಳು ನಷ್ಟದ ಉದ್ಯಮವೆಂದು ಹೇಳಿ ಅವುಗಳನ್ನು ಖಾಸಗಿ ವ್ಯಕ್ತಿಗಳಿಗೆ ನೀಡುವ ಪ್ರಯತ್ನವನ್ನು ವಿರೋಧಿಸುತ್ತವೆಯೋ, ಬೆಂಬಲಿಸುತ್ತವೆಯೋ ?

ಜವಹರಲಾಲ್ ನೆಹರೂರವರ ಮುಖಂಡತ್ವದಲ್ಲಿ 30 ವರ್ಷಗಳ ಹಿಂದೆ ಅನುಸರಿಸಿದ ಧೋರಣೆಗಳು ಹಿಡಿತವಿಲ್ಲದ ಧೋರಣೆಯಾಗಿತ್ತೆಂಬ ಬಲಪಂಥೀಯರ ವಿಮರ್ಶೆ, ಆ ನೀತಿ ಧೋರಣೆಯಲ್ಲಿ ಯಾವೊಂದು ತಪ್ಪು ಇಲ್ಲವೆಂದೂ ಹೇಳುತ್ತಲೇ ಅದರೊಳಗೆ ಹೇರಳ ನೀರು ತುಂಬಲು ರಾಜೀವ್ ಗಾಂಧಿ ಹಾಗು ಅವರ ಸಂಗಡಿಗರೂ ನಡೆಸುತ್ತಿರುವ ಪ್ರಯತ್ನ, ಆ ನೀತಿ ಧೋರಣೆಗಳಲ್ಲಿ ಬದಲಾವಣೆ ತರಲು ಎಡಪಂಥೀಯ ಪಕ್ಷಗಳು ನೀಡುವ ನಿರ್ದೇಶನಗಳು-ಇವುಗಳಲ್ಲಿ ಯಾವುದಕ್ಕೆ ಹೊಸ ವಿರೋಧಿ ಸರಕಾರ ಪುರಸ್ಕಾರ ನೀಡುವುದು ?

ಕಾರ್ಮಿಕ ರೈತರನ್ನೊಳಗೊಂಡ ಬಹುಜನವರ್ಗದ ಬೇಡಿಕೆ, ಹೋರಾಟಗಳ ಬಗ್ಗೆ ಹೊಸ ಸರಕಾರದ ನೀತಿ ಧೋರಣೆ ಏನಾಗಿರಬಹುದು ? ಈ ಜನ ವಿಭಾಗಗಳಿಗೆದುರಾಗಿ ದಬ್ಬಾಳಿಕೆ ನಡೆಸಿ ಅವರ ಜೀವನ ಮಟ್ಟ ತೀರಾ ಕೆಳಗಿಳಿಸಿದರೆ ಮಾತ್ರವೇ ತಮ್ಮ ಯೋಜನೆ ಜಾರಿಗೊಳಿಸಲು ಸಾಧ್ಯವೆನ್ನುವುದು ಬಲಪಂಥೀಯ ನೀತಿಯಾಗಿದೆ. ಶ್ರಮಜೀವಿಗಳಿಗೆ ಹೆಚ್ಚೆಚ್ಚು ಅವಕಾಶ ನೀಡಿ ಅವರವರ ಜೀವನ ಮಟ್ಟ ವೃದ್ಧಿಸಿ ಅವರನ್ನು ಉತ್ಪಾದನಾ ಪ್ರಕ್ರಿಯೆಯಲ್ಲಿ ಜೀವಂತ ಪಾಲುಗಾರರನ್ನಾಗಿಸುವುದರೊಂದಿಗೆ, ಭೂಸ್ವಾಮಿಗಳ ಅತುಳ ಲಾಭವನ್ನು ಸಾಧ್ಯವಿರುವಷ್ಟು ಕಡಿತ ಮಾಡಬೇಕೆಂಬ ಎಡಪಂಥೀಯ ಧೋರಣೆ ಇದರಲ್ಲಿ ಯಾವುದನ್ನು ಸಾಧ್ಯಗೊಳಿಸಿ ಕೇಂದ್ರದಲ್ಲಿ ರೂಪಿಸಲ್ಪಡುವ ಹೊಸ ಸರಕಾರ ಕೆಲಸ ನಿರ್ವಹಿಸಲಿದೆ ?

ನಿತ್ಯೋಪಯೋಗಿ ವಸ್ತುಗಳ ಬೆಲೆ ಏರಿಕೆ, ಕೃಷಿ ಉತ್ಪಾದನೆಗಳ ಬೆಲೆ ಕಡಿತ, ಹೆಚ್ಚುತ್ತಿರುವ ನಿರುದ್ಯೋಗ, ಏರುತ್ತಿರುವ ತೆರಿಗೆ ಮತ್ತು ಸಾಲದ ಹೊರೆ ಮೊದಲಾದವುಗಳಿಂದ ಜನಕೋಟಿ ಕಷ್ಟ ಪಡುತ್ತಿವೆ. ಅದೇ ರೀತಿಯಲ್ಲಿ ಸರಕಾರದ ವಿದ್ಯಾಭ್ಯಾಸ ನೀತಿ ಸಾಂಸ್ಕೃತಿಕ ಚಟುವಟಿಕೆಗಳ ರೀತಿ, ಜನ ಸಮುದಾಯದ ಆರೋಗ್ಯ ಮೊದಲಾದ ಒಟ್ಟಾರೆ ಪ್ರಶ್ನೆಗಳೂ ಇವೆ. ಅವುಗಳಲ್ಲಿ ಒಂದೊಂದರಲ್ಲೂ ಜನಕಲ್ಯಾಣ ಮತ್ತು ಜನದ್ರೋಹ ಎಂಬ ಎರಡೂ ಧೋರಣೆಗಳಿವೆ. ಶ್ರೀಮಂತರು, ಧನಿಕರ ಸೇವೆ ಶ್ರಮಜೀವಿವರ್ಗದ ಪರ ನಿಲುವೇ-ಇದರಲ್ಲಿ ಯಾವುದಾಗಿರಬಹುದು ಹೊಸ ಸರಕಾರದ ಧೋರಣೆ ?

ಇದರಲ್ಲಿ ಪ್ರಮುಖವಾದದ್ದರಲ್ಲಿ ಒಂದಾಗಿದೆ ದೇಶದ ಐಕ್ಯತೆ ಮತ್ತು ಛಿದ್ರಕಾರಿತ್ವದ ಪ್ರಶ್ನೆ, ಹಿಂದುಳಿದ ಜಾತಿ, ಅಲ್ಪಸಂಖ್ಯಾತ ವರ್ಗಗಳ ನ್ಯಾಯಯುತ ಬೇಡಿಕೆಗಳನ್ನು ಸಂರಕ್ಷಿಸುವಾಗಲೇ ಜಾತಿ ಮತಾದಿ ವ್ಯತ್ಯಾಸಗಳಿಲ್ಲದೆ ಜನರನ್ನು ಒಟ್ಟಾಗಿ ಸೇರಿಸುವ ಕಾರ್ಮಿಕ ವರ್ಗದ ಕ್ರಾಂತಿ ಯೋಜಿಸುವ ಮಾರ್ಗವೂ ಇದೆ. ಜಾತಿ-ಮತ ಮೊದಲಾದ ಪರಿಗಣನೆಗಳಿಗೆ ಅವಕಾಶ ನೀಡಿ ಜನರನ್ನು ಪರಸ್ಪರ ಎತ್ತಿ ಕಟ್ಟಿ ರಾಷ್ಟ್ರದ ಐಕ್ಯತೆ ಮುರಿಯುವ "ಹಿಂದುವಾದ" ವಿದೆ. ಇಸ್ಲಾಮಿ ಮೊದಲಾದ ಅಲ್ಪಸಂಖ್ಯಾತ ಮತವಿಭಾಗಗಳ ಕೋಮುವಾದವೂ ಇದೆ. ಹಿಂದುಗಳಲ್ಲೇ ಸವರ್ಣೀಯ-ಅವರ್ಣೀಯರನ್ನು ಪ್ರತಿನಿಧಿಸುವ ಜಾತಿ- ಸಂಘಟನೆಗಳೂ, ಪಕ್ಷಗಳೂ ಇವೆ. ಈ ಪ್ರಶ್ನೆಗಳ ಬಗ್ಗೆ ಯಾವ ನಿಲುವೆಯನ್ನು ವಿರೋಧ ಪಕ್ಷಗಳ ಸರಕಾರ ತಾಳಲಿವೆ ?

ಇಲ್ಲಿ ಒತ್ತಿ ಹೇಳಲಾದ ಪ್ರತಿಯೊಂದು ಪ್ರಶ್ನೆಗಳಿಗೂ ಬಿಜೆಪಿಯೂ-ಮುಸ್ಲಿಂ ಲೀಗ್ ಸೇರಿದಂತಹ ಜಾತೀಯ-ಕೋಮುವಾದಿ ಪಕ್ಷಗಳೆಲ್ಲವೂ ಬಲಪಂಥೀಯ ಧೋರಣೆಯನ್ನು ಅನುಸರಿಸುತ್ತಿವೆ.

ಎಡಪಂಥೀಯ ಪಕ್ಷಗಳು ಇವಕ್ಕೆ ವಿರುದ್ಧ ಧೋರಣೆ ತಾಳಲಿವೆ. ಈ ಎರಡೂ ಶಕ್ತಿಗಳ ನಡುವೆ ಆಟವಾಡುವ ಪಕ್ಷಗಳೂ ಇವೆ. ಚುನಾವಣಾ ರಾಜಕೀಯ ಮುಂದಿರಿಸಿಕೊಂಡು ಬಿಜೆಪಿ ಸೇರಿದಂತಹ ಬಲಪಂಥೀಯ ಪಕ್ಷಗಳನ್ನು ಒಂದೆಡೆ ಸೇರಿಸಲು ಅವರು ಪ್ರಯತ್ನಿಸುತ್ತಿದ್ದಾರೆ. ಇದೇ ಸಂದರ್ಭದಲ್ಲಿ ದುಡಿಯುವ ಜನರೂ ಸೇರಿದಂತೆ ಒಟ್ಟಾರೆ ಹತ್ತಿರದ ಸಂಬಂಧವಿರುವುದರಿಂದಾಗಿ-ಎಡ ಪಂಥೀಯರೊಂದಿಗೆ ಸಹಕರಿಸಲು ಅವರು ಶ್ರಮಿಸುತ್ತಿದ್ದಾರೆ. ಎಲ್ಲಾ ವಿರೋಧ ಪಕ್ಷಗಳೂ ಒಂದಾಗಿ ಸೇರಿ ಕಾಂಗ್ರೆಸ್ಸನ್ನು ಸೋಲಿಸಬಹುದೆಂಬ ತಂತ್ರವನ್ನು ಕೆಲವೊಮ್ಮೆ ಅವರು ಬೆಂಬಲಿಸುತ್ತಾರೆ. ಇನ್ನೂ ಕೆಲವೊಮ್ಮೆ ಎಡಪಂಥೀಯರೊಂದಿಗೆ ನಿಂತು ಜನಸಮುದಾಯದ ಪ್ರಶ್ನೆಗಳನ್ನು ಎತ್ತಿಕೊಳ್ಳಲು ಅವರು ಸಿದ್ಧರಾಗುತ್ತಾರೆ. ಜಾತಿ-ಮತ ಛಿದ್ರಕಾರಿ ಶಕ್ತಿಗಳನ್ನು ವಿರೋಧಿಸುವ ನಿಲುವಿಗೂ ಅವರು ಬರುತ್ತಾರೆ.

ಬಿಜೆಪಿ ಒಳಗೊಂಡಂತಹ ರಂಗವೆಂಬ ಆಶಯಕ್ಕೆ ಕೆಲವೊಮ್ಮೆ ಬೆಂಬಲ ನೀಡುವ ಈ ಪಕ್ಷಗಳು ಈ ಮಾರ್ಚ್ 15 ರಂದು ನಡೆದ ಭಾರತ್ ಬಂದ್ ಯಶಸ್ವಿಗೊಳಿಸುವಲ್ಲಿ ಎಡ ಪಕ್ಷಗಳೊಂದಿಗೆ ನಿಂತವು. ಈ ಚೆಂಡಾಟ ಕೊನೆಗೊಳಿಸಿ ಜಾತಿ-ಮತ ಇತ್ಯಾದಿ ಛಿದ್ರಕಾರಿ ಶಕ್ತಿಗಳಿಗೆ ದೂರಾಗಿಯೂ-ಎಡ ಪಕ್ಷಗಳೊಂದಿಗೆ ಸಹಕಾರಾತ್ಮಕವಾದ, ಗಟ್ಟಿಯಾದ ನಿಲುವು ಅವರೊಂದಿಗೆ ಅನುಸರಿಸುವಂತೆ ಮಾಡಲು ಎಡಪಂಥೀಯ ಪಕ್ಷಗಳು ಶ್ರಮಿಸುತ್ತಿರುವುದು.

(ಚಿಂತಾ ಕೃಪೆ)

—ಇ. ಕೆ. ಎನ್. ರಾಜನ್
—ಕುಮಾರ್ ಕುಂದಾಪುರ

ಸೆಪ್ಟೆಂಬರ್ ಚಳುವಳಿ-ದೇಶದ ಎಲ್ಲೆಡೆ

ವಿವಿಧ ರಾಜ್ಯಗಳಲ್ಲಿ ಹಂತ-ಹಂತವಾಗಿ ಎಡ ಪಕ್ಷಗಳ ನೇತೃತ್ವದ ರೈತ ಹಾಗೂ ಕೃಷಿ ಕೂಲಿಗಾರರ ಸಂಘಟನೆಗಳು ನಡೆಸುತ್ತಿರುವ ಚಳುವಳಿ ಆರಂಭಗೊಂಡಿರುವ ಸುದ್ದಿ ಬಂದಿದೆ.

ಸೆಪ್ಟೆಂಬರ್ 5ರಂದು ಕರ್ನಾಟಕವೂ ಸೇರಿದಂತೆ ಏಳು ರಾಜ್ಯಗಳಲ್ಲಿ ಪಿಕೆಟಿಂಗ್‌ನೊಂದಿಗೆ ಚಳುವಳಿ ಆರಂಭಗೊಂಡಿತು. ಇತರ ಆರು ರಾಜ್ಯಗಳೆಂದರೆ ಆಂಧ್ರ ಪ್ರದೇಶ, ಗುಜರಾತ, ಮಹಾರಾಷ್ಟ್ರ, ಒರಿಸ್ಸಾ, ಪಂಜಾಬ್ ಮತ್ತು ರಾಜಸ್ತಾನ.

ಆಂಧ್ರಪ್ರದೇಶದಲ್ಲಿ ಸುಮಾರು ಒಂದು ಲಕ್ಷ ಸ್ವಯಂಸೇವಕರು ಭಾಗವಹಿಸುವ ಕಾರ್ಯಕ್ರಮ ಸಂಘಟಿಸಲಾಯಿತು. ಇದಕ್ಕೆ ಮೊದಲು ಮೂರುದಿನ ಕಾನೂನು ಬಾಹಿರವಾಗಿ ಹಿಡಿದಿರುವ ಅಥವಾ ಬೇರೆ ರೀತಿಯಲ್ಲಿ ವಿತರಣೆ ಮಾಡಬಹುದಾಗಿದ್ದರೂ ಸರಕಾರ ಇನ್ನೂ ವಹಿಸಿಕೊಳ್ಳದಿರುವ ಜಮೀನನ್ನು ಗುರುತಿಸಿ ಅವನ್ನು ಆಕ್ರಮಿಸಿಕೊಳ್ಳುವ ಪ್ರಕ್ಷೋಭೆ ನಡೆಸಲಾಯಿತು. ಇಂತಹ ಜಮೀನನ್ನು ತಕ್ಷಣ ಭೂಹೀನರಿಗೆ ಹಂಚಬೇಕೆಂದು ಒತ್ತಾಯಿಸಲಾಯಿತು.

ಗುಜರಾತ್‌ನಲ್ಲಿ ಅರಣ್ಯಕ್ಕೆ ಸಂಬಂಧಪಟ್ಟ ಪ್ರಶ್ನೆಗಳ ಮೇಲೆ ಹೋರಾಟ ನಡೆಸಿದ್ದು ಮುಖ್ಯವಾಗಿ ಬುಡಕಟ್ಟು ರೈತರನ್ನು ಅಣಿನೆರೆಸಲಾಯಿತು.

ಮಹಾರಾಷ್ಟ್ರದಲ್ಲಿ ಹತ್ತು ದಿನಗಳ ಕಾರ್ಯಕ್ರಮ 'ಕೃಷಿ ಕಾರ್ಮಿಕರ ದಿನ'ವನ್ನು ಸೆಪ್ಟೆಂಬರ್ 5ರಂದು ಆಚರಿಸುವುದರೊಂದಿಗೆ ಆರಂಭವಾಯಿತು. ಕೇಂದ್ರೀಯ ಕನಿಷ್ಟ ಕೂಲಿ ಜಾರಿ, ಕೇಂದ್ರೀಯ ಶಾಸನ ರೂಪಿಸಬೇಕು ಹಾಗೂ ಹರಿಜನ-ಗಿರಿಜನರ ಮೇಲೆ ಅತ್ಯಾಚಾರ ನಿಲ್ಲಿಸಬೇಕೆಂಬ ಬೇಡಿಕೆಗಳ ಮೇಲೆ ಆ ದಿನ ವಿಶೇಷ ಗಮನ ಸೆಳೆಯಲಾಯಿತು.

ಒರಿಸ್ಸಾದಲ್ಲಿ 50 ಸಾವಿರ ಸ್ವಯಂಸೇವಕರು ಬಂಧನಕ್ಕೊಳಗಾಗುವುದರೊಂದಿಗೆ ಚಳುವಳಿ ಆರಂಭವಾಯಿತು.

ಪಂಜಾಬಿನಲ್ಲಿ ಕಪೂರ್ತಲಾ ಒಂದೆಡೆ ಬಿಟ್ಟು ಬೇರೆಲ್ಲಾ ಕಡೆ ಸುಮಾರು 10,000 ಕಾರ್ಯಕರ್ತರು ಪ್ರತಿ ಜಿಲ್ಲೆಯ ಆರಿಸಿದ ಒಂದು ತಹಸೀಲ್‌ನಲ್ಲಿ ಬಂಧನಕ್ಕೊಳಗಾಗಿ ಚಳುವಳಿ ಶುರುವಾಯಿತು.

ಸೆಪ್ಟೆಂಬರ್ ಚಳುವಳಿಯ ಎರಡನೇ ಘಟ್ಟದಲ್ಲಿ ಸೆಪ್ಟೆಂಬರ್ 9 ರಂದು ಕೇರಳ, ಅಸ್ಸಾಂ ಮತ್ತು ಬಿಹಾರ್‌ನಲ್ಲಿ ಚಳುವಳಿ ಆರಂಭವಾಯಿತು.

ಸೆಪ್ಟೆಂಬರ್ 12 ಮತ್ತು 13 ರಂದು ಉಳಿದ ರಾಜ್ಯಗಳಲ್ಲಿ ಚಳುವಳಿ ಆರಂಭವಾಯಿತು.

ಪಂಜಾಬಿನಲ್ಲಿ ಅಕಾಲಿದಳ(ಲೋಂಗೋವಾಲ) ಚಳುವಳಿಗೆ ಬೆಂಬಲ ಕೋರಿ ಈ ಚಳುವಳಿಯಲ್ಲಿ ಭಾಗವಹಿಸುವಂತೆ ರೈತರಿಗೆ ಕರೆ ನೀಡಿದರೆ, ಉತ್ತರ ಪ್ರದೇಶದಲ್ಲಿ ಲೋಕದಳ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದೆ.

ಮುಕ್ತತೆಗೊಂದು 'ಸಣ್ಣ' ಮಿತಿ!

ಸೆಪ್ಟೆಂಬರ್ 4 ರಂದು ರೂಪ ಕನ್ವರ್‌ಳನ್ನು ಸತಿಯ ಹೆಸರಲ್ಲಿ ಸುಟ್ಟ ಮೊದಲನೆ ವಾರ್ಷಿಕದ ಸಂದರ್ಭದಲ್ಲಿ ದೂರದರ್ಶನ 'ಸುಡುವ ಬೆಂಬೂದಿಯಿಂದ' ಎಂಬ ಕಾರ್ಯಕ್ರಮವನ್ನು ಪ್ರಸಾರ ಮಾಡಿತು. ಇದರಲ್ಲಿ ಸರಕಾರದ ತಪ್ಪುಗಳನ್ನು ತೋರಿಸಿಕೊಟ್ಟಿದ್ದು, ಇಂತಹ ಕಾರ್ಯಕ್ರಮ ಪ್ರಸಾರ ಮಾಡಲು ಅವಕಾಶ ನೀಡುವ ಮೂಲಕ ತನ್ನ ಮುಕ್ತ ನೀತಿಯ ಮೂಲಕ ಸರಕಾರ ತನ್ನ ಸಹಿಷ್ಣುತೆಯ ನಿದರ್ಶನ ನೀಡಲಾರಂಭಿಸಿದೆ ಎಂದು ಭಾವಿಸಲಾಗಿತ್ತು. ಆದರೆ ಈ ಮುಕ್ತ ನೀತಿ ಕೇವಲ ಡಂಭಾಚಾರವೆಂಬುದು ಶೀಘ್ರವೇ ತಿಳಿಯಿತು. ಈ ಟಿ. ವಿ. ಚಿತ್ರದಲ್ಲಿ ದೇವರಾಲಾ ಘಟನೆಯ ಬಗ್ಗೆ ಪ್ರಧಾನ ಮಂತ್ರಿಗಳ ಮೌನದ ಬಗ್ಗೆ ಮಾಡಲಾದ ಟೀಕೆಯನ್ನು ಕತ್ತರಿಸಲಾಗಿತ್ತು!

ಬಂಟ್ವಾಳದಲ್ಲಿ ಸಾವಿರ ಮಂದಿ ಬಂಧನ

ಬಂಟ್ವಾಳ ತಾಲ್ಲೂಕಿನ ತಹಸೀಲ್ದಾರರ ಆಫೀಸನ್ನು ಪಿಕೆಟಿಂಗ್ ಮಾಡಿದರು. ಸೆಪ್ಟೆಂಬರ್ 13 ರಂದು ಸಿಪಿಐ(ಎಂ) ಮತ್ತು ಸಿ.ಪಿ.ಐ. ಪಕ್ಷಗಳ ನೇತೃತ್ವದಲ್ಲಿರುವ ರೈತ ಸಂಘಗಳ 1000 ಮಂದಿ ಕಾರ್ಯಕರ್ತರು ಬಂಧನಕ್ಕೊಳಗಾದರು.

ತಂಡ ತಂಡವಾಗಿ ಪಿಕೆಟಿಂಗ್ ನಡೆಸಿದ ಕಾರ್ಯಕರ್ತರ ನೇತೃತ್ವವನ್ನು ಸರ್ವಶ್ರೀ ವಿಶ್ವನಾಥ ನಾಯ್ಕ, ವಿಠಲ ಬಂಗೇರ, ಹೆನ್ರಿ ಲೋಬೋ, ಇಬ್ರಾಹಿಂ, ಭೋಜ ಕರಂಬೇರ, ಭಾಸ್ಕರ, ಸಂಜೀವ, ಕೆ. ಆನಂದ, ಹಮೀದ್, ಪದ್ಮನಾಭ, ಕೆ. ವೀರಪ್ಪ, ಪಿ. ವಾಸು ಪೂಜಾರಿ, ಜಿ. ವಾಸುಗಟ್ಟಿ, ಜಿ. ನಾರಾಯಣ, ಸಂಜೀವ ಬಂಗೇರ, ರುಕ್ಮಯ ಪೂಜಾರಿ, ಚಂದ ನಾಯ್ಕ, ಹೂವಯ್ಯ ಬಂಗೇರ, ಟಿ. ರಾಮಣ್ಣ, ಶೀನ ಬಂಗೇರ ಇವರು ವಹಿಸಿದ್ದರು.

ನಂತರ ಬಿ. ಸಿ. ರೋಡಿನಲ್ಲಿ ನಡೆದ ಸಭೆಯನ್ನುದ್ದೇಶಿಸಿ ಮಾತನಾಡಿದ ಸಿಪಿಐ ನ ಕಾರ್ಯದರ್ಶಿ ಶ್ರೀ ಬಿ. ವಿಶ್ವನಾಥನಾಯ್ಕ ಸಿಪಿಐ (ಎಂ) ನ ಕಾರ್ಯದರ್ಶಿ ಶ್ರೀ ಟಿ. ವಾಸುಗಟ್ಟಿ, ರೈತ ಕೃಷಿ ಕೂಲಿಗಾರರು ತಮ್ಮ ಪ್ರಮುಖ ಬೇಡಿಕೆಗಳಿಗಾಗಿ ಹೋರಾಡುವುದರ ಮೂಲಕ 41 ವರ್ಷಗಳ ಬಂಡವಾಳಶಾಹೀ, ಭೂಮಾಲಕ ಪರ ಆಡಳಿತ ನಡೆಸಿದ ಕಾಂಗ್ರೆ ಪಕ್ಷಕ್ಕೆ ಪರ್ಯಾಯವಾಗಿ ಎಡ ಪ್ರಜಾಪ್ರಭುತ್ವ ಪಕ್ಷಗಳ ಸಂಘಟನೆಗೆ ಹೋರಾಡಬೇಕೆಂದು ವಿನಂತಿಸಿಕೊಂಡರು.

ಆರಂಭದಲ್ಲಿ ಪಿ ವಿಠಲ ಬಂಗೇರ ಸ್ವಾಗತಿಸಿ, ಕೊನೆಗೆ ಬಿ. ನಾರಾಯಣ ವಂದಿಸಿದರು.

ಹಾನಗಲ್ ತಾ॥ನಲ್ಲಿ ಯಶಸ್ವೀ ಚಳುವಳಿ

ಅಖಿಲ ಭಾರತ ಸೆಪ್ಟೆಂಬರ್ ಚಳುವಳಿ ಕರೆಯ ಪ್ರಕಾರ ಹಾನಗಲ್ ತಾಲ್ಲೂಕು ರೈತ ಕೂಲಿಕಾರರ ಸಂಘ (ಅಕ್ಕಿ ಆಲೂರ) ಮತ್ತು ರೈತ ಸಂಘ ಹಾಕಿಕೊಂಡ ರಸ್ತೆ ರೋಖೋ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿದೆ.

ಸೆಪ್ಟೆಂಬರ್ 10ರಂದು ಮಕರವಳ್ಳಿ ಸುತ್ತಲಿನ ಗ್ರಾಮಗಳ ರೈತರು, ಕೃಷಿ ಕೂಲಿಕಾರರು ನಾಲ್ಕು ಕಿಲೋಮೀಟರ್ ಜಾಥಾ ಬಂದರು. 10 ಗಂಟೆಗೆ ಸುಮಾರು 500 ರೈತ ಕೂಲಿಕಾರರು ಕೆಂಬಾವುಟ ಹಿಡಿದು ಬೇಡಿಕೆಗಳ ಘೋಷಣೆ ಕೂಗುತ್ತ ರಸ್ತೆ ರೋಖೋ ಮಾಡಿದರು. ಬಾಳ್ಳಂಬೀಡ ಹಾಗೂ ಯಲ್ಲಾಪುರ ಸುತ್ತಮುತ್ತಲಿನ 300 ರೈತ ಕೂಲಿಕಾರರು ಇದೇ ಹೊತ್ತಿನಲ್ಲಿ ಬಾಳ್ಳಂಬೀಡ ಗ್ರಾಮದಲ್ಲಿ ರಸ್ತೆ ರೋಖೋ ಮಾಡಿದರು. ಅಕ್ಕಿ ಆಲೂರಿನಲ್ಲೂ 400 ಜನ ರಸ್ತೆ ರೋಖೋದಲ್ಲಿ ಭಾಗವಹಿಸಿದರು. ಬಾಳ್ಳಂಬೀಡದಲ್ಲಿ ಕಾಂ. ಭಕೀರಪ್ಪ ಹೋತಗಹಳ್ಳಿ, ಕಾಂ. ಎಂ. ಜಿನ್ನಾ ಸೇರಿದಂತೆ 134 ಜನರನ್ನು ಬಂಧಿಸಲಾಯಿತು. ಅಕ್ಕಿ ಆಲೂರಿನಲ್ಲಿ ಕಾಂ. ವಿ. ಪಂಚಾಕ್ಷರಿ ಹಾಗೂ ಕಾಂ: ನಿತ್ಯಾನಂದಜೀ ಹಾನಗಲ್ ಅವರು ಸೇರಿದಂತೆ 165 ಜನರನ್ನು ಬಂಧಿಸಲಾಯಿತು.

ಸುಮಾರು ಎರಡು ವರ್ಷಗಳ ಕಾಲ ನಡೆದ ರಸ್ತೆ ರೋಖೋ ಕಾರ್ಯಕ್ರಮದಲ್ಲಿ ಚಳುವಳಿಯ ಘೋಷಣೆಗಳು ಸಾವಿರಾರು ಕೃಷಿಕೂಲಿಕಾರರನ್ನು, ಹೆಂಗಸರು ಮಕ್ಕಳನ್ನು ತಲುಪಿದವು.

ಕಾನಪುರದಲ್ಲಿ ಅಖಿಲ ಭಾರತ ಗಿರಣಿ ಕಾರ್ಮಿಕರ ಸಮಾವೇಶ

ಇದೇ ಸೆಪ್ಟೆಂಬರ್ 4 ರಂದು ಸಿ. ಐ. ಟಿ.ಯು., ಎ.ಐ.ಟಿ.ಯು.ಸಿ., ಹೆಚ್.ಎಂ.ಎಸ್. ಹಾಗೂ ಯು.ಟಿ.ಯು.ಸಿ.ಮುಖಂಡರು ಸಭೆ ಸೇರಿ 1985ರಲ್ಲಿ ಹೊಸ ಜವಳಿ ನೀತಿ ಪ್ರಾರಂಭವಾದ ನಂತರ ಜವಳಿ ಉದ್ದಿಮೆಯಲ್ಲಿನ, ಮುಖ್ಯವಾಗಿ ಸರ್ಕಾರಿ ಒಡೆತನದ ಎನ್.ಟಿ.ಸಿ. ಮಿಲ್ಲುಗಳಲ್ಲಿನ ಪರಿಸ್ಥಿತಿಯ ಬಗ್ಗೆ ಚರ್ಚಿಸಿತು. ಉದ್ದಿಮೆಯಲ್ಲಿನ ಬಿಕ್ಕಟ್ಟು ಮಿಲ್ಲುಗಳು, ಪವರ್ ಲೂಮ್ ಹಾಗೂ ಕೈಮಗ್ಗ ಈ ಮೂರೂ ವಲಯಗಳನ್ನು ಈಗ ವ್ಯಾಪಿಸಿದೆ. ಕಳೆದ ಮೂರು ವರ್ಷಗಳಲ್ಲಿ ಜವಳಿ ಮಂತ್ರಿಯ ಪ್ರಕಾರವೇ ನಿರುದ್ಯೋಗ 1.75 ಲಕ್ಷಕ್ಕೇರಿದೆ. ಬಹಳಷ್ಟು ಎನ್.ಟಿ.ಸಿ. ಗಿರಣಿಗಳು ರೋಗಗ್ರಸ್ತವಾಗಿದ್ದು, ಇವುಗಳ ವಿಲೀನದ ಹೆಸರಲ್ಲಿ ಅಪಾರ ಸಂಖ್ಯೆಯಲ್ಲಿ ಉದ್ಯೋಗಾವಕಾಶಗಳನ್ನು ನಿರ್ನಾಮಗೊಳಿಸಿ ನಿರುದ್ಯೋಗ ಹೆಚ್ಚಿಸಲಾಗುತ್ತದೆ. ಅತ್ತ ಕೆಲವೇ ಉದ್ಯಮಿಗಳಿಗೆ ಇದರಿಂದ ಪ್ರಯೋಜನವಾಗಿದೆ.

ಆದ್ದರಿಂದ ಕಾರ್ಮಿಕರಿಗೆ, ಹತ್ತಿ ಬೆಳೆಗಾರರಿಗೆ ಹಾಗೂ ಬಳಕೆದಾರರಿಗೆ ಅನುಕೂಲ ಒದಗಿಸುವ, ಕಾರ್ಮಿಕ ಸಂಘಗಳನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳುವ ಒಂದು ಹೊಸ ಜವಳಿ ನೀತಿಗಾಗಿ ಒತ್ತಾಯಿಸಬೇಕೆಂದು ಸಭೆಯಲ್ಲಿ ಒಮ್ಮತಾಭಿಪ್ರಾಯಪಟ್ಟು ಒಂದು ರಾಷ್ಟ್ರಮಟ್ಟದ ಸಮಾವೇಶ ನಡೆಸಲು ತೀರ್ಮಾನಿಸಲಾಯಿತು. ಈ ಸಂಘಟನೆಗಳ ಉತ್ತರ ಪ್ರದೇಶ ಘಟಕಗಳು ಇದನ್ನು ಸಂಘಟಿಸಲು ಮುಂದೆ ಬಂದಿದ್ದು ಅಕ್ಟೋಬರ್ 8 ಹಾಗೂ 9ರಂದು ಈ ಸಮಾವೇಶ ಕಾನಪುರದಲ್ಲಿ ನಡೆಯಲಿದೆ. ಪ್ರತಿಯೊಂದು ಗಿರಣಿಯಿಂದ ಕನಿಷ್ಟ ಒಬ್ಬ ಪ್ರತಿನಿಧಿ ಇರಬೇಕೆಂದು ನಿರ್ಧರಿಸಲಾಯಿತು.

ಮೇಲೆ ಹೇಳಿದ ಸಭೆಯಲ್ಲಿ ಸಿ.ಐ.ಟಿ.ಯು.ನಿಂದ ಪಿ. ಕೆ. ಗಂಗೂಲಿ ಮತ್ತು ರವಿ ಸಿನ್ಹಾ, ಎ.ಐ.ಟಿ.ಯು.ಸಿ.ಯಿಂದ ಹೋಮಿದಾಜಿ, ಬಿ.ಡಿ. ಜೋಶಿ, ಟಿ.ಎನ್. ಸಿದ್ಧಾಂತ, ಹೆಚ್. ಎಂ. ಎಸ್. ನ ಮಹೇಂದ್ರ ಶರ್ಮಾ ಹಾಗೂ ಯು.ಟಿ.ಯು.ಸಿ.ಯ ಪ್ರತುಲ್ ಚೌಧುರಿ ಭಾಗವಹಿಸಿದ್ದರು. ಇಂಟಕ್ ಹಾಗೂ ಎನ್.ಎಸ್.ಬಿ.ಗೂ ಈ ಬಗ್ಗೆ ಆಹ್ವಾನ ಕಳಿಸಿದ್ದರೂ ಅವರ ಪ್ರತಿನಿಧಿಗಳು ಹಾಜರಾಗಲಿಲ್ಲ.

ಹಾವೇರಿಯಲ್ಲಿ ಮೆರವಣಿಗೆ, ಸಭೆ

ಅಖಿಲ ಭಾರತ ಕಿಸಾನ್ ಸಭೆಯು ದೇಶಕ್ಕೆ ಕರೆಕೊಟ್ಟ ಸೆಪ್ಟೆಂಬರ್ ಹೋರಾಟದ ಅಂಗವಾಗಿ ದಿನಾಂಕ 7-9-88ರಂದು ಹಾವೇರಿಯಲ್ಲಿ ಕಾಂ॥ ರುದ್ರಪ್ಪ ಜಾಬಿನ ಅವರ ಮುಖಂಡತ್ವದಲ್ಲಿ ಹಾವೇರಿ ತಾಲ್ಲೂಕಿನ 300 ಜನರ ಭಾರೀ ಮೆರವಣಿಗೆಯೊಂದಿಗೆ ಹಾವೇರಿ ನಗರದಲ್ಲಿ ತಾಲ್ಲೂಕು ತಹಶೀಲ್ದಾರರಿಗೆ ಮನವಿಯೊಂದನ್ನು ಅರ್ಪಿಸಲಾಗಿದೆ.

ತಾಲ್ಲೂಕು ತಹಶೀಲ್ದಾರರಿಗೆ ಮನವಿ ಅರ್ಪಿಸುವ ಪೂರ್ವದಲ್ಲಿ ತಾಲ್ಲೂಕು ತಹಶೀಲ್ದಾರ ಕಚೇರಿ ಎದುರಿಗೆ ಬಹಿರಂಗ ಸಭೆ ನಡೆದು ಕಾಂ॥ ವಿ. ಪಂಚಾಕ್ಷರಿ ಅವರು ಮಾತನಾಡಿ, ದೇಶದ ಜನತೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ವಂಚನೆ ಮಾಡುತ್ತಾ, ದೇಶದ ಅದರಲ್ಲಿಯೂ ಬಡ ಜನತೆಗೆ ಹಳ್ಳಿ ಪಟ್ಟಣಗಳಲ್ಲಿ ಅವರು ವಾಸಿಸುತ್ತಿರುವ ಗುಡಿಸಲು ವಾಸಿಗಳಿಗೆ ಎಳ್ಳಷ್ಟೂ ಭೂಮಿಯನ್ನು ಕೊಡದೆ ಹಾಗೇ ಬಿಟ್ಟಿರುವುದನ್ನು ಖಂಡಿಸಿದರು. ಅದರಂತೆ ಕೃಷಿ ಕೂಲಿಕಾರರು ಸರಕಾರೀ ಜಮೀನಿನಲ್ಲಿ ಒತ್ತುವರಿ ಮಾಡಿ ತಮ್ಮ ಜೀವನ ಸಾಗಿಸುತ್ತಿರುವ ಜಮೀನಿಗೆ ಪಟ್ಟಾ ಕೊಡದಿರುವುದನ್ನು ಖಂಡಿಸಿದರು. ಈಗಲಾದರೂ ಸರ್ಕಾರ ಅವರಿಗೆ ಭೂಮಿ ಪಟ್ಟಾಗಳನ್ನು ಕೊಟ್ಟು ಅವರು ನೆಮ್ಮದಿಯಾಗಿ ಜೀವಿಸಲು ಅನುಕೂಲ ಮಾಡಿ ಕೊಡಬೇಕೆಂದು ಕೇಳಿಕೊಂಡರು.

ಈ ಮೆರವಣಿಗೆಯಲ್ಲಿ ಹಾನಗಲ್ ತಾ॥ ರೈತ ಸಂಘದ ಅಧ್ಯಕ್ಷ ಕಾಂ॥ ಫಕ್ಕೀರಪ್ಪ ಹೊಡನಹಳ್ಳಿ, ಹಾವೇರಿ ಭಾರತ ಕಮ್ಯೂನಿಸ್ಟ್ ಪಕ್ಷದ ಕಾಂ॥ ಇಮಾಮಸಾಬ್ ಬೂದಿಹಾಳ್ ಭಾಗವಹಿಸಿದ್ದರು.

ಸುಳ್ಯದಲ್ಲಿ ಬಂಧನ, ಬಿಡುಗಡೆ

ಸುಳ್ಯದಲ್ಲಿ ತಾ॥ 13-9-1988ರಂದು ತಾಲೂಕು ಆಫೀಸು ಪಿಕೆಟಿಂಗ್ ಕಾರ್ಯಕ್ರಮವನ್ನು ನಡೆಸಲಾಯಿತು. ತಾಲೂಕಿನಾದ್ಯಂತ ರೈತರು ಹಾಗೂ ಕೃಷಿ ಕೂಲಿ ಕಾರ್ಮಿಕರು ಈ ಜೈಲ್ ಭರೋ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

ರೈತರ, ಕೃಷಿ ಕೂಲಿ ಕಾರ್ಮಿಕರ ಮುಖ್ಯ ಬೇಡಿಕೆಗಳ ಬಗ್ಗೆ, ರಾಜ್ಯ ಹಾಗೂ ಕೇಂದ್ರ ಸರಕಾರವನ್ನು ಒತ್ತಾಯಿಸುವ ಘೋಷಣೆಗಳೊಂದಿಗೆ ರೈತ ಕೃಷಿ ಕೂಲಿ ಕಾರ್ಮಿಕರ ಮೆರವಣಿಗೆ ಸುಳ್ಯ ಗಾಂಧಿ ನಗರದಿಂದ, ಶ್ರೀ ರಾಮ ಪೇಟೆಯ ಮೂಲಕ ಹೋಗಿ ಬಿ.ಡಿ.ಒ. ರಸ್ತೆಯ ಮುಖಾಂತರ ಸುಳ್ಯ ತಾಲೂಕು ಆಫೀಸಿಗೆ ತೆರಳಿ ತಾಲೂಕು ಆಫೀಸು ಪಿಕೆಟಿಂಗ್ ಜರುಗಿಸಲಾಯಿತು.

ಕೆಂಬಾವುಟವನ್ನು ಹೊತ್ತ ಮೆರವಣಿಗೆಯನ್ನು ಬೀದಿಯ ಇಕ್ಕೆಡಗಳಲ್ಲಿಯೂ ನೆರೆದ ಜನತೆ ವೀಕ್ಷಿಸುವುದು ಮೆರವಣಿಗೆಯ ವೈಶಿಷ್ಟ್ಯತೆಯನ್ನು ತೋರಿಸುತ್ತಿತ್ತು.

ಮೆರವಣಿಗೆಯಲ್ಲಿ ಹೋಗಿ ತಾಲೂಕು ಆಫೀಸು ಪಿಕೆಟಿಂಗ್ ಮಾಡಿದ ಜನತೆಯನ್ನು ಪೊಲೀಸರು ಬಂಧಿಸಿ ಸ್ವಂತ ಜಾಮೀನಿನಲ್ಲಿಯೇ ಬಿಡುಗಡೆ ಮಾಡಿದರು.

ಪಿಕೆಟಿಂಗ್ ಹಾಗೂ ಮೆರವಣಿಗೆಯ ನೇತೃತ್ವವನ್ನು ಪಕ್ಷದ ತಾಲೂಕು ಸಮಿತಿ ಕಾರ್ಯದರ್ಶಿ ಶ್ರೀ ಕೆ. ಮೋನಪ್ಪಗೌಡ ಹಾಗೂ ತಾಲೂಕು ಸಮಿತಿ ಸದಸ್ಯ ಶ್ರೀ ಕೆ. ಸೂರ್ಯನಾರಾಯಣಭಟ್ ವಹಿಸಿದ್ದರು.

'ಹೆಣ್ಣು' ನಾಟಕ ಪ್ರದರ್ಶನ

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್.ಐ.) ಕೆಂಪೇಗೌಡನಗರ ಘಟಕದ ಆಶ್ರಯದಲ್ಲಿ ದಿನಾಂಕ 11-9-88ನೇ ಭಾನುವಾರ ಹೆಣ್ಣು ಎಂಬ ನಾಟಕವನ್ನು ಕೆಂಪೇಗೌಡ ನಗರ ಆಟದ ಮೈದಾನದಲ್ಲಿ ಶ್ರೀರಾಮಪುರದ ಸಮುದಾಯ ತಂಡದವರಿಂದ ಯಶಸ್ವಿಯಾಗಿ ಪ್ರದರ್ಶಿಸಲಾಯಿತು.

ನಾಟಕದ ಆರಂಭದಲ್ಲಿ ಸ್ವಾಗತವನ್ನು ಘಟಕದ ಸಂಚಾಲಕ ಕಾಂ॥ ಪ್ರಸನ್ನ ಕುಮಾರ್ ಮಾಡಿದರು. ಸಂಘಟನೆಯ ಸೂಕ್ಷ್ಮ ಪರಿಚಯವನ್ನು ಜಿಲ್ಲಾ ಕಾರ್ಯದರ್ಶಿ ಹಾಗೂ ರಾಜ್ಯ ಖಜಾಂಚಿ ಕಾಂ॥ ಟಿ. ಶಿವಶಂಕರ್ ಮಾಡಿಕೊಟ್ಟರು. ನಂತರ ಕ್ರಾಂತಿಗೀತೆಗಳೊಂದಿಗೆ ಯಶಸ್ವಿಯಾಗಿ ಪ್ರದರ್ಶಿಸಲ್ಪಟ್ಟಿತು. ವಿಶೇಷವಾಗಿ ನಂಜಪ್ಪ ಬ್ಲಾಕ್ ಬಡಾವಣೆಯಲ್ಲಿ ಅತಿ ಹೆಚ್ಚು ಜನ ನಾಟಕ ವೀಕ್ಷಿಸಲು ಹಾಜರಿದ್ದರು.

ಸಾರ್ವಜನಿಕ ಸಮಸ್ಯೆಗಳಿಗೆ ಒತ್ತಾಯಿಸಿ ಸಹಿ ಸಂಗ್ರಹ

ನಗರದಲ್ಲಿ ಇತ್ತೀಚೆಗೆ ಧಾರಾಕಾರವಾಗಿ ಬಿದ್ದ ಮಳೆಯಿಂದಾಗಿ ಶ್ರೀರಾಮಪುರದ ಆರ್. ಜಿ. ಕಾಲೋನಿಯಲ್ಲಿ ಹರಿಯುವ ದೊಡ್ಡ ಮೋರಿಯಿಂದಾಗಿ 8 ಮನೆಗಳು ಬಿದ್ದು ತುಂಬು ನಷ್ಟವಾಗಿದೆ. ನಗರಸಭೆಯ ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಮೋರಿಗಳ ಕಟ್ಟಡ ಸರಿಯಾಗಿ ನೋಡಿಕೊಳ್ಳದೇ ಇರುವ ಕಾರಣದಿಂದಾಗಿ ಈ ಅನಾಹುತವಾಗಿರುತ್ತದೆ.

ದಿನಾಂಕ 15-9-88ರಂದು ಆರ್. ಜಿ. ಕಾಲೋನಿ, ಶ್ರೀರಾಂಪುರ ಡಿ.ವೈ.ಎಫ್.ಐ. ಘಟಕವು ತ್ವರಿತವಾಗಿ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಬಡಾವಣೆಯಲ್ಲಿ ಸಹಿ ಸಂಗ್ರಹ ಮಾಡಿಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಪತ್ರ ಅರ್ಪಿಸಲಾಗಿತ್ತು. ಈ ಮನವಿಯಲ್ಲಿ 40 ಅಡಿ ದೊಡ್ಡ ಮೋರಿಯನ್ನು ನೆಲದಿಂದ 8 ಅಡಿ ಎತ್ತರಕ್ಕೆ ಕಟ್ಟಡವನ್ನು ಕಟ್ಟಿಸಬೇಕೆಂದು, ಹಾನಿಗೊಳಗಾದ 8 ಮನೆಯ ಕುಟುಂಬಗಳಿಗೆ ಪರಿಹಾರವನ್ನು ಕೊಡಬೇಕೆಂದು ಒತ್ತಾಯಿಸಲಾಗಿತ್ತು.

ನಗರಸಭೆಯ ಅಧಿಕಾರಿಗಳು ಮುಖತಃವಾಗಿ ಭೇಟಿಯಾಗಿ ವಿಚಾರಿಸಿ, ಈಗ ಪರಿಹಾರ ಕಾರ್ಯಕ್ರಮವು ನಡೆಯುತ್ತಿದೆ.

ಸಮಾಜವಾದದ ಸಾಧನೆಗಳನ್ನು ಅಲ್ಲಗಳೆಯಲು ಬಿಡೆವು

"ಸಾಮ್ರಾಜ್ಯಶಾಹಿಯನ್ನು ಎದುರಿಸಿದೆ ಎದುರಿಸಿದ್ದು ಮಾತ್ರವೆ ಅಲ್ಲ, ತನ್ನ ಅಂತರಾಷ್ಟ್ರೀಯ ಧ್ಯೇಯಗಳಿಗಾಗಿ ಸಾವಿರಾರು ಮಂದಿ ಸಿದ್ಧರಾದ, ಸಿಕರಾಗುವಾಕ್ಕೆ, 10 ಸಾವಿರ ಅಧ್ಯಾಪಕರು ಬೇಕೆಂದಾಗ 10 ಸಾವಿರ ಮಂದಿ ಹೊರಟುನಿಂತ, ಡಾಕ್ಟರುಗಳು ಬೇಕಾದಾಗ ಇಮ್ಮಡಿಯಷ್ಟು ಹೋರಾಟಗಾರರು ಉತ್ಸಾಹದಿಂದ ಮುಂದೆ ಬಂದ ನಮ್ಮ ದೇಶದ ಬಗ್ಗೆ, ನಮ್ಮ ಜನರ ಸೈದ್ಧಾಂತಿಕ ಶಕ್ತಿಯ ಬಗ್ಗೆ ನಮಗೆ ಹೆಮ್ಮೆಯಿದೆ" ಎಂದು ಫಿಡೆಲ್ ಕ್ಯಾಸ್ಟ್ರೊ ಹೇಳಿದ್ದಾರೆ. ಜುಲೈ 26 ರಂದು ಕ್ಯೂಬಾ ವಿಮೋಚನಾಹೋರಾಟದಲ್ಲಿಸಶಸ್ತ್ರ ಹೋರಾಟಕ್ಕೆ ನಾಂದಿ ಹಾಕಿದ ಮೊಂಕಾಡಾ ಐತಿಹಾಸಿಕ ಧಾಳಿಯ 35 ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಕ್ಯಾಸ್ಟ್ರೋ ಮಾತನಾಡುತ್ತಿದ್ದರು.

ಸೋವಿಯತ್ ಒಕ್ಕೂಟದಲ್ಲಿ ನಡೆಯುತ್ತಿರುವ ವಿಮರ್ಶೆ-ಆತ್ಮವಿಮರ್ಶೆಗಳ ದುರ್ಲಾಭ ಪಡೆಯಲು ಸಾಮ್ರಾಜ್ಯಶಾಹಿಗಳು ನಡೆಸುತ್ತಿರುವ ಅಪಪ್ರಚಾರದ ಬಗ್ಗೆ ಎಚ್ಚರಿಕೆ ನೀಡುತ್ತಾ 'ಸಮಾಜವಾದ ಅಭೂತಪೂರ್ವ ಯಶಸ್ಸನ್ನು ಸಾಧಿಸಿದೆ. ಇನ್ನಷ್ಟು ಸಾಧಿಸಬಹುದಾಗಿತ್ತು ಎಂಬುದೂ ನಿಜ. ಆದರೆ ಇದುವರೆಗಿನ ಸಾಧನೆಗಳು ಅಗಾಧ ಎಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಹಾಗೆ ಅಲ್ಲಗಳೆಯಲು ಯಾರಿಗೂ ನಾವು ಅವಕಾಶ ನೀಡುವುದಿಲ್ಲ' ಎಂದು ಕ್ಯಾಸ್ಟ್ರೋ ಹೇಳಿದರು.

ಸಾಮ್ರಾಜ್ಯಶಾಹಿಗಳು ಸಮಾಜವಾದಿ ದೇಶಗಳ ವಿಮರ್ಶೆ-ಆತ್ಮವಿಮರ್ಶೆ ಪ್ರಕ್ರಿಯೆಯ ದುರುಪಯೋಗ ಪಡೆದು ನಿರಾಶೆ ಹರಡಲು ಯತ್ನಿಸುತ್ತಿದ್ದಾರೆ. ತಮ್ಮ ವಿಧಾನಗಳನ್ನು, ಶೈಲಿಗಳನ್ನು ಮತ್ತು ಧ್ಯೇಯಗಳನ್ನು ಸಮಾಜವಾದವು ಅಂಗೀಕರಿಸದಿದ್ದರೆ ಅದಕ್ಕೆ ಉಳಿಗಾಲವಿಲ್ಲ ಎಂದು ಹಲವಾರು ಬಂಡವಾಳಶಾಹಿಗಳ ನಂಬಿಕೆ. ಇಂತಹವರು ಭ್ರಮಾಲೋಕದಲ್ಲಿ ವಿಹರಿಸುತ್ತಿದ್ದಾರಷ್ಟೇ ಎಂದು ಮುಂದುವರೆದು ಹೇಳಿದ ಫಿಡಲ್ ಕ್ಯಾಸ್ಟ್ರೋ 'ಸಾಮ್ರಾಜ್ಯಶಾಹಿಗಳಿಗೆ, ಸಾಮ್ರಾಜ್ಯಶಾಹಿಯ ಸಿದ್ಧಾಂತಗಾರರಿಗೆ ನಾನು ಹೇಳುತ್ತೇನೆ–ಕ್ಯೂಬಾ ಎಂದಿಗೂ ಬಂಡವಾಳಶಾಹಿಯ ವಿಧಾನಗಳನ್ನು, ಶೈಲಿಗಳನ್ನು, ತತ್ವಗಳನ್ನು ಅಂಗೀಕರಿಸುವುದಿಲ್ಲ. ಬಂಡವಾಳಶಾಹಿ ಕೆಲವು ತಾಂತ್ರಿಕ ಯಶಸ್ಸು ಪಡೆದಿದೆ. ಸಂಘಟನೆ ಸ್ವಲ್ಪ ಯಶಸ್ಸು ಪಡೆದಿದೆ. ಅದನ್ನು ನಾವು ಉಪಯೋಗಿಸಿಕೊಳ್ಳಬಹುದು. ಅಷ್ಟೇ ಅದಕ್ಕಿಂತ ಹೆಚ್ಚಿಲ್ಲ" ಎಂದು ಅವರು ಸ್ಪಷ್ಟವಾಗಿ ಸಮಾಜವಾದದ ಟೀಕಾಕಾರರಿಗೆ ಹೇಳಿದರು.

ಈ ಸಮಾರಂಭದಲ್ಲಿ ಸಿಪಿಐ(ಎಂ) ಪರವಾಗಿ ಕೇಂದ್ರ ಸಮಿತಿ ಸದಸ್ಯ ಕಾಂ. ಹೆಮೆನ್‌ದಾಸ್ ಭಾಗವಹಿಸಿದ್ದರು.

ಉಡುಪು ಆಮದಿನ ಮೇಲೆ ಅಮೇರಿಕನ್ ನಿರ್ಬಂಧ

ಭಾರತದಂತಹ ದೇಶಗಳು ವಿದೇಶೀ ಉತ್ಪಾದನೆಗಳ ಆಮದಿಗೆ ಮುಕ್ತ ಅವಕಾಶ ಕೊಟ್ಟು, ತಮ್ಮ ಉತ್ಪಾದನೆಗಳ ಸ್ಪರ್ಧಾತ್ಮಕತೆ, ಗುಣಮಟ್ಟ ಹೆಚ್ಚಿಸಬೇಕೆಂದು ಉಪದೇಶ ನೀಡುವ ಐ.ಎಂ. ಎಫ್., ವಿಶ್ವಬ್ಯಾಂಕುಗಳ ತವರೂರಾದ ಅಮೇರಿಕಾದಲ್ಲೇ ತನ್ನ ದೇಶದ ಬಟ್ಟೆ, ಉಡುಪು ಹಾಗೂ ಪಾದರಕ್ಷೆಗಳ ಉದ್ಯಮಗಳಿಗೆ ವಿದೇಶೀ ಸ್ಪರ್ಧೆಯಿಂದ ರಕ್ಷಣೆ ನೀಡಲು ಅಮೇರಿಕನ್ ಸೆನೆಟ್ ವಿದೇಶಗಳ ಉತ್ಪಾದನೆಗಳ ಹೊಸ ನಿರ್ಬಂಧ ಹೇರಲು ನಿರ್ಧರಿಸಿದೆ. ಇದರಿಂದ ಸಿಂಗಾಪುರ, ಹಾಂಗ್‌ಕಾಂಗ್, ತೈವಾನ್ ಮತ್ತು ದಕ್ಷಿಣ ಕೊರಿಯಾ ಮಾತ್ರವಲ್ಲ ಭಾರತದ ಉಡುಪು ರಫ್ತು ಉದ್ದಿಮೆಗೂ ಹೊಡೆತ ಬೀಳುವ ಸಂಭವವಿದೆ.

ಪ. ಜರ್ಮನಿಯಲ್ಲಿ ನಾಟೋ ವಿರೋಧಿ ಆಕ್ರೋಶ

ಪಶ್ಚಿಮ ಜರ್ಮನಿಯ ರಾಮ್‌ಸ್ಟೈನ್‌ನಲ್ಲಿರುವ ಅಮೇರಿಕಾದ ಸೈನಿಕ ನೆಲೆಯಲ್ಲಿ ತರಬೇತಿ ಹಾರಾಟ ಹಾಗೂ ವಿಮಾನಪ್ರದರ್ಶನಗಳಲ್ಲಿ ಯುದ್ಧವಿಮಾನಗಳಿಗಾಗುತ್ತಿರುವ ಮರಣಾಂತಿಕ ಅಪಘಾತಗಳಿಂದಾಗಿ ನಾಟೋ ಸೈನಿಕ ಕೂಟದ ವಿರುದ್ಧ ಇಲ್ಲಿ ಆಕ್ರೋಶ ಬೆಳೆಯುತ್ತಿದೆ ಎಂದು ವರದಿಯಾಗಿದೆ.

ಈ ವರ್ಷ ನಾಟೋ ಯುದ್ಧವಿಮಾನಗಳ ಸುಮಾರು 20 ಅಪಘಾತಗಳು ನಡೆದಿವೆ. ಸುಮಾರು 57 ಜನ ಸತ್ತಿದ್ದಾರೆ. ನೂರಾರು ಜನ ಗಾಯಗೊಂಡಿದ್ದಾರೆ. ಇವುಗಳಲ್ಲಿ ಹಲವು ಅಪಘಾತ ಜನನಿಬಿಡಪ್ರದೇಶಗಳ ಹತ್ತಿರ, ಪರಮಾಣು ಸ್ಥಾವರಗಳ ಸಮೀಪ ನಡೆದಿವೆ.

'ಎಲ್ಲಿಯವರೆಗೆ ಜರ್ಮನಿಯ ಸಾರ್ವಭೌಮತ್ವ ಇದೆ ? ನಮ್ಮ ಪ್ರದೇಶದಲ್ಲಾಗುತ್ತಿರುವ ಬಗ್ಗೆ ಕೊನೆಯ ಮಾತು ಹೇಳುವ ಹಕ್ಕು ನಮಗೆಷ್ಟಿದೆ ? ಎಂದು ಜನ ಪ್ರಶ್ನಿಸುತ್ತಿದ್ದಾರೆ.

ಕೇರಳ : ಕಾಂಗ್ರೆಸ್ (ಐ)ನ ದುಷ್ಟ ರಾಜಕೀಯ

ಕಾಂಗ್ರೆಸ್ (ಐ) ನೇತೃತ್ವದ ರಂಗ ಕೇರಳದಲ್ಲಿ ಆಳುತ್ತಿದ್ದಾಗ ಬೆಲೆಯೇರಿಕೆ ಒಂದು ಜಾಗತಿಕ ವಿದ್ಯಮಾನವಾಗಿತ್ತು. ಎಲ್.ಡಿ.ಎಫ್. ಸರಕಾರ ಬಂದ ಮೇಲೆ ಅದು ಕೇರಳಕ್ಕಷ್ಟೇ ಸೀಮಿತವಾದ ವಿದ್ಯಮಾನ. ಇದು ಕೇರಳದ ಕಾಂಗ್ರೆಸ್ (ಐ) ಮುಖಂಡರ ಸಿದ್ಧಾಂತ. ಅವರದೇ ಕೇಂದ್ರ ಸರ್ಕಾರದ ಕಾರ್ಮಿಕ ಇಲಾಖೆ ಪ್ರಕಾರ ಜೀವನಾವಶ್ಯಕ ಆಹಾರ ಸಾಮಗ್ರಿಗಳ ಬೆಲೆಯೇರಿಕೆ ನವದೆಹಲಿಯಲ್ಲಿ ಶೇ. 14 ವಾದರೆ ಕೇರಳದಲ್ಲಿ ಶೇ. 25. ಸತ್ಯಸಂಗತಿಯನ್ನು ಒಪ್ಪಿಕೊಳ್ಳುವುದು ಕಾಂಗ್ರೆಸ್(ಐ) ಜಾಯಮಾನಕ್ಕೆ ವಿರೋಧ ತಾನೇ ?

ಈ ಬಾರಿ ಓಣಂ ಕಾಲದಲ್ಲಿ ಇ. ಕೆ. ನಾಯನಾರ್ ಸೃಷ್ಟಿಸಿದ ಬೆಲೆಯೇರಿಕೆಯಿಂದ ಜನತೆ ಬಳಲುತ್ತಿದ್ದಾರೆಂದು ರಾಜ್ಯಾದ್ಯಂತ ಕಾಂಗ್ರೆಸ್(ಐ) ಮತ್ತವರ ಚುನಾವಣಾ ಗೆಳೆಯರು ಹುಯಿಲೆಬ್ಬಿಸಿದರು.

ಕೇರಳದ ಅಭಾವ ತಿಂಗಳುಗಳಾದ ಜುಲೈ ಮತ್ತು ಅಗಸ್ಟ್ ತಿಂಗಳಲ್ಲಿ 1986 ತಿಂಗಳಿಗೆ 1.5 ಲಕ್ಷ ಟನ್ ಅಕ್ಕಿಯನ್ನು ರಾಜ್ಯಕ್ಕೆ ಕೊಡಲಾಗುತ್ತಿತ್ತು. 1987 ರಲ್ಲಿ ಇದು 1.45 ಲಕ್ಷಕ್ಕಿಳಿಯಿತು. 1988 ರಲ್ಲಿ ಇದು 1.25 ಲಕ್ಷಕ್ಕಿಳಿಯಿತು. ಇದಲ್ಲದೆ ಓಣಂ ಹಬ್ಬದ ಸಮಯದಲ್ಲಿ ಕಾಂಗ್ರೆಸ್ (ಐ) ರಂಗ ಅಧಿಕಾರದಲ್ಲಿದ್ದಾಗ 20 ಸಾವಿರ ಟನ್ ಹೆಚ್ಚುವರಿ ಕೋಟಾ ಪೂರೈಸುತ್ತಿದ್ದ ಕೇಂದ್ರ ಸರ್ಕಾರ ಈ ಬಾರಿ ವಿಶೇಷ ಕೋಟಾ ಪೂರೈಸಲು ಸಾಧ್ಯವಿಲ್ಲವೆಂದಿದೆ. ಸ್ಟಾಕ್ ಇಲ್ಲ ಎಂದು ಅವರ ನೆಪ. ಆದರೆ ರಾಜ್ಯದಲ್ಲಿರುವ ಆಹಾರ ನಿಗಮದ ಗೋದಾಮುಗಳಲ್ಲಿ ಎರಡು ತಿಂಗಳಿಗಾಗುವಷ್ಟು ಅಕ್ಕಿ ದಾಸ್ತಾನಿದೆ. ಒಂದು ವೇಳೆ ದಾಸ್ತಾನು ಇಲ್ಲ ಎಂಬ ಕಾರಣ ಸರಿಯೆಂದು ಇಟ್ಟುಕೊಂಡರೂ ಸಾರ್ವಜನಿಕ ವಿತರಣಾ ವ್ಯವಸ್ಥೆ ಮುರಿದು ಬೀಳದಂತೆ ಮಾಡಲು ಆಮದು ಮಾಡಿಕೊಳ್ಳುವುದು ಕೇಂದ್ರ ಸರ್ಕಾರದ ಕರ್ತವ್ಯವಾಗಿತ್ತು. ದೊಡ್ಡ ಬಂಡವಾಳಿಗರಿಗಾಗಿ ರಬ್ಬರ್, ತೆಂಗಿನಕಾಯಿ(?) ಪಲ್ಪ್ ಮೊದಲಾದವುಗಳ ಬೆಲೆ ಇಳಿಸಲು ಆಮದು ಮಾಡಲು ಹಿಂದೆ-ಮುಂದೆ ನೋಡದ ಸರ್ಕಾರ ಜನರನ್ನು ಹಸಿವಿನಿಂದ ರಕ್ಷಿಸುವ ಪ್ರಶ್ನೆಯಲ್ಲಿ ಹಿಂದೆ-ಮುಂದೆ ನೋಡುತ್ತಿದೆ.

ಜನತೆಯ ಆಹಾರದೊಂದಿಗೆ ರಾಜಕೀಯ ಚೆನ್ನಾಟದ ಕಾಂಗ್ರೆಸ್ ತಂತ್ರವನ್ನು ಗುರುತಿಸಲು ಕೇರಳದ ಜನತೆಗೆ ಯಾರೂ ಕಲಿಸಿಕೊಡಬೇಕಾಗಿಲ್ಲ ಎಂಬುದು ಕರುಣಾಕರನ್ ಕಂಪನಿಗೆ ಇನ್ನೂ ಅರ್ಥವಾದಂತಿಲ್ಲ.

ದೆಹಲಿ : ಬಸ್ಸುಗಳಲ್ಲಿ ಮಹಿಳೆಯರನ್ನು ಛೇಡಿಸುವ ವಿರುದ್ಧ ಮತ ಪ್ರದರ್ಶನ

ಅಗಸ್ಟ್ 18 ರಂದು ಜನವಾದಿ ಮಹಿಳಾ ಸಮಿತಿ (ಎ.ಐ.ಡಿ.ಡಬ್ಲ್ಯು.ಎ) ಹಾಗೂ ಎಸ್.ಎಫ್.ಐ.ಡಬ್ಲ್ಯುನ ಸುಮಾರು ನೂರು ಮಂದಿ ಮಹಿಳೆಯರು ದೆಹಲಿ ಸಾರಿಗೆ ನಿಗಮ (ಡಿ. ಟಿ. ಸಿ.)ಯ ಮುಖ್ಯ ಕಛೇರಿಯೆದುರು ಧರಣಿ ನಡೆಸಿ ಡಿಟಿಸಿ ಬಸ್ಸುಗಳಲ್ಲಿ ಹುಡುಗಿಯರನ್ನು ಮಹಿಳೆಯರನ್ನು ಛೇಡಿಸುವುದರ ವಿರುದ್ಧ ವಿಶೇಷವಾಗಿ, ಮೋನಿಷಾವರ್ಮ ಎಂಬ ಹುಡುಗಿಯ ಮೇಲೆ ಬರ್ಬರ ಹಲ್ಲೆಯನ್ನು ವಿರೋಧಿಸಿ ಪ್ರತಿಭಟನೆ ನಡೆಸಿದರು.

ಜನವಾದಿ ಮಹಿಳಾ ಸಮಿತಿಯ ಕಛೇರಿಯಿಂದ ಆರಂಭವಾಗಬೇಕಿದ್ದ ಈ ಕಾರ್ಯಕ್ರಮವನ್ನು ತಡೆಗಟ್ಟಲು ಸುಮಾರು ನೂರು ಮಂದಿ ಪೋಲೀಸರು ಕಛೇರಿಯನ್ನು ಸುತ್ತುವರಿದಿದ್ದರೂ ಮಹಿಳೆಯರು ಪೋಲೀಸರ ಈ ಕ್ರಮದ ವಿರುದ್ಧವೂ ಬಲವಾದ ಪ್ರತಿಭಟನೆ ಮಾಡಿ ಅದನ್ನು ವಿಫಲಗೊಳಿಸಿದರು.

ಡಿ.ಟಿ.ಸಿ. ಪ್ರಾದೇಶಿಕ ಮ್ಯಾನೇಜರನ್ನು ಈ ಎರಡು ಸಂಘಟನೆಗಳ ನಿಯೋಗ ಭೇಟಿಯಾದಾಗ ಐವರಲ್ಲಿ ಇಬ್ಬರನ್ನು ಬಂಧಿಸಿ ಸಸ್ಪೆಂಡ್ ಮಾಡಲಾಗಿದೆ ಎಂದು ತಿಳಿಸಲಾಯಿತು. ಒಂದು ಮುಷ್ಕರದಲ್ಲಿ ಭಾಗವಹಿಸಿದ್ದಕ್ಕೆ 3 ಸಾವಿರ ನೌಕರರನ್ನು ಸಾರಾಸಗಟು ಕೆಲಸದಿಂದ ತೆಗೆದುಹಾಕಿದ ಆಡಳಿತ ಈಗ ಇಂತಹ ಬರ್ಬರ ಘಟನೆ ನಡೆದಾಗ ಕೇವಲ ಇಬ್ಬರ ಸಸ್ಪೆಂಡ್ ಮಾಡುವುದು ಕೇವಲ ನಾಟಕ ಎಂದು ನಿಯೋಗ ಹೇಳಿದಾಗ ನಿರುತ್ತರವಾದ. ಪ್ರಾದೇಶಿಕ ಮ್ಯಾನೇಜರ್ ಮಹಿಳೆಯರ ಬೇಡಿಕೆಗಳನ್ನು ಚರ್ಚಿಸುವುದಾಗಿ ಹೇಳಬೇಕಾಯಿತು.

2.6 ಲಕ್ಷ ಘಟಕಗಳಲ್ಲಿ 5.7 ಸಾವಿರ ಕೋಟಿ ರೂ. ಮುಳುಗಡೆ

ರಿಝರ್ವ್ ಬ್ಯಾಂಕಿನ ಜುಲೈ 1987 ರಿಂದ ಜೂನ್ 88 ರವರೆಗಿನ ಅವಧಿಯ ವಾರ್ಷಿಕ ವರದಿಯ ಪ್ರಕಾರ ದೇಶದ 1.6 ಲಕ್ಷ ಕೈಗಾರಿಕಾ ಘಟಕಗಳು ರೋಗಗ್ರಸ್ತವಾಗಿವೆ. ಇದರಿಂದಾಗಿ ಇವುಗಳಲ್ಲಿ ತೊಡಗಿಸಿರುವ 5737.88 ಕೋಟಿ ರೂ. ಗಳಷ್ಟು ಬ್ಯಾಂಕ್ ಹಣ ಮುಳುಗಡೆಯಾದಂತಾಗಿದೆ.

ರೋಗಗ್ರಸ್ತವಾದ ಘಟಕಗಳಲ್ಲಿ ದೊಡ್ಡ ಹಾಗೂ ಮಧ್ಯಮ ಘಟಕಗಳ ಸಂಖ್ಯೆ ಕೇವಲ 1.1 ರಷ್ಟು ಆದರೆ ಈ 1.1 ರಷ್ಟು ಘಟಕಗಳಲ್ಲಿ ಸಿಲುಕಿಕೊಂಡಿರುವ ಹಣ 73.12 ಕಿಂತಲೂ ಹೆಚ್ಚು !

ಬಿಹಾರ : ನಿರುದ್ಯೋಗದ ವಿರುದ್ಧ ವ್ಯಾಪಕ ಆಂದೋಲನ

ಪಾಟ್ನಾದ ಶಹೀದ್ ಸ್ತಂಭದಲ್ಲಿ 10 ಸಾವಿರ ಯುವಜನರು ಮತ್ತು ವಿದ್ಯಾರ್ಥಿಗಳು ಆಗಸ್ಟ್ 4 ರಂದು ಸೇರಿ ನಿರುದ್ಯೋಗ, ಶೈಕ್ಷಣಿಕ ಸಂಸ್ಥೆಗಳಲ್ಲಿ ಅರಾಜಕತೆ, ದೇಶದಲ್ಲಿ ಪ್ರಜಾಪ್ರಭುತ್ವದ ಮೇಲೆ ಹಲ್ಲೆ ಬಗ್ಗೆ ತಮ್ಮ ತೀವ್ರ ಆಕ್ರೋಶವನ್ನು ವ್ಯಕ್ತಪಡಿಸಿದರು. ಎಸ್.ಎಫ್.ಐ., ಡಿ.ವೈ.ಎಫ್.ಐ., ಎ.ಐ.ಎಸ್.ಎಫ್., ಎ.ಐ.ವೈ.ಎಫ್., ಯುವ ಜನತಾ, ಛಾತ್ರ ಜನತಾ, ಯುವಲೋಕದಳ, ಛಾತ್ರಸಭಾ ಈ ಎಂಟು ಸಂಘಟನೆಗಳು ಈ ಮತಪ್ರದರ್ಶನವನ್ನು ಸಂಘಟಿಸಿದ್ದವು.

16 ಬೇಡಿಕೆಗಳನ್ನು ಅಂಗೀಕರಿಸಿದ್ದ ಜುಲೈ 20ರ ಸಮಾವೇಶದಲ್ಲಿ ಈ ಮತಪ್ರದರ್ಶನವನ್ನು ಯಶಸ್ವಿಯಾಗಿ ನಿರ್ಧರಿಸಲಾಗಿತ್ತು. ಇದಕ್ಕೆ ಮೊದಲು ರಾಜ್ಯಾದ್ಯಂತ ಜೂನ್ 9 ರಂದು ಧರಣಿ, ರಾಜ್ಯಪಾಲರಿಗೆ 16 ಬೇಡಿಕೆಗಳ ಮನವಿ ಪತ್ರ, ಜುಲೈ 7 ರಂದು 150 ಬ್ಲಾಕುಗಳಲ್ಲಿ ಮತಪ್ರದರ್ಶನ, ಘೇರಾವೋ. ಜುಲೈ 22 ರಿಂದ 28 ರವರೆಗೆ ಜಿಲ್ಲಾ ಮುಖ್ಯಾಲಯಗಳಲ್ಲಿ ಉದ್ಯೋಗ ವಿನಿಮಯ ಕಛೇರಿಗಳೆದುರು ಮತಪ್ರದರ್ಶನ ನಡೆಸಿ ಅಲ್ಲಿ ಕೆಲಸ ಸ್ತಬ್ಧಗೊಳಿಸುವಂತೆ ಮಾಡಲಾಗಿತ್ತು.

ಪಕ್ಷದ ಸಮ್ಮೇಳನ

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಬಿಜಾಪುರ ಸಿಂದಗಿ ತಾಲ್ಲೂಕು ಘಟಕದ ಸಮ್ಮೇಳನವು ದಿನಾಂಕ 7.8.88 ರಂದು ನಡೆಯಿತು. ಈ ಸಮ್ಮೇಳನದಲ್ಲಿ ಕಾಂ|| ಅಣ್ಣಾರಾಯ ಇಳಗೇರಾರವರನ್ನು ಘಟಕದ ಕಾರ್ಯದರ್ಶಿಗಳನ್ನಾಗಿ ಆರಿಸಲಾಯಿತು. ಸಮ್ಮೇಳನವು ಅಕ್ಟೋಬರ್ 1 ಮತ್ತು 2 ರಂದು ಧಾರವಾಡದಲ್ಲಿ ನಡೆಯಲಿರುವ ವಲಯ ಸಮ್ಮೇಳನಕ್ಕೆ 5 ಜನ ಪ್ರತಿನಿಧಿಗಳನ್ನು ಆರಿಸಲಾಯಿತು. ಸಮ್ಮೇಳನವು ಕೃಷಿ ಮೇಲ್ದಂಡೆ ಯೋಜನೆ ಬೇಗನೆ ಮುಗಿಸುವಂತೆ, ಮುಳವಾಡ ಏತ ನೀರಾವರಿ ಯೋಜನೆ ಪ್ರಾರಂಭ, ಸೆಪ್ಟೆಂಬರ್ ರೈತ ಚಳುವಳಿಗೆ ಸಂಪೂರ್ಣ ಬೆಂಬಲ ಸೂಚಿಸಲಾಯಿತು.

ಕಾ|| ಭೀಮಸಿ ಕಲಾದಗಿ ಹಾಗೂ ನಿತ್ಯಾನಂದಸ್ವಾಮಿಯವರು ಹಾಜರಿದ್ದು ಮಾರ್ಗದರ್ಶನ ನೀಡಿದರು. ಈ ಸಮ್ಮೇಳನಕ್ಕೆ ಪೂರ್ಣಭಾವಿಯಾಗಿ ಗ್ರಾಮಶಾಖೆಗಳ ಸಮ್ಮೇಳನ ನಡೆಸಿ ಕಾರ್ಯದರ್ಶಿಯವರುಗಳನ್ನು ಆರಿಸಲಾಯಿತು.

ಮಾನವ ಹಕ್ಕು : ರೇಗನ್ ಹೇಳಿದ ಕಥೆ

ಅಧ್ಯಕ್ಷ ರೇಗನ್ ಮಾಸ್ಕೋಗೆ ಹೋಗಿದ್ದಾಗ ಅಲ್ಲೊಂದು ಪತ್ರಿಕಾ ಗೋಷ್ಠಿಯಲ್ಲಿ ಅಮೇರಿಕಾದಲ್ಲಿ ಮಾನವ ಹಕ್ಕುಗಳ ಬಗ್ಗೆ ಒಂದು ಪ್ರಶ್ನೆ ಕೇಳಲಾಯಿತು. ಉತ್ತರವಾಗಿ ರೇಗನ್ ಒಂದು ಕಥೆ ಹೇಳಿದರು. ನ್ಯೂಯಾರ್ಕ್‌ನಲ್ಲಿ ಒಬ್ಬ ಯುವತಿಯಿದ್ದಾಳೆ. ಆಕೆ ವರ್ಷವಿಡೀ ಫುಟ್‌ಪಾತ್‌ನಲ್ಲಿ ವಾಸಿಸುತ್ತಾಳೆ. ಆಕೆಯ ಒಳಿತಿಗಾಗಿಯೇ ಪೋಲೀಸರು ಅವಳಿಗೆ ಒಂದ ನೈತಿಕ ನೆಲೆ ಕಲ್ಪಿಸಲು ಯತ್ನಿಸಿದರು. ಆಕೆ ಅದರ ವಿರುದ್ಧ ಕೋರ್ಟಿಗೆ ಹೋಗಿ ಗೆದ್ದಳು. ಆಕೆ ರಸ್ತೆಯ ಬದಿಯಲ್ಲೇ ಇರಬಯಸುವುದಾದರೆ ಹಾಗೇ ಇರಲು ಆಕೆಗೆ ಸ್ವಾತಂತ್ರ್ಯವಿದೆ ಎಂದು ಕೋರ್ಟು ತೀರ್ಪಿತ್ತಿತಂತೆ. ಒಂದು ಸ್ವತಂತ್ರ ದೇಶದಲ್ಲಿ ವ್ಯಕ್ತಿ ಸ್ವಾತಂತ್ರ್ಯವೆಂಬುದು ಯಾವ ಉನ್ನತ ಮಟ್ಟದವರೆಗೆ ಹೋಗಬಹುದು ಎನ್ನುವುದಕ್ಕೆ ಇದೊಂದು ಉದಾಹರಣೆಯೆಂದು ಹೆಮ್ಮೆಯಿಂದ ಹೇಳಿಕೊಂಡರು ಅಧ್ಯಕ್ಷ ರೇಗನ್ !

ಪತ್ರಕರ್ತರು ತಕ್ಷಣ ಈ ಕಥೆಯ ನಿಜಾಂಶ ತಿಳಿಯಲು ಪ್ರಯತ್ನಿಸಿ ಯಶಸ್ವಿಯಾದರು ಕೂಡಾ. ನ್ಯೂಯಾರ್ಕಿನಲ್ಲಿ ಜಾಯ್ಸ್ ಬ್ರ್ಯಾನ್ ಎಂಬ ನಿರಾಶ್ರಿತ ಕರಿಯ ಮಹಿಳೆಯನ್ನು 'ಉದಾರ ಹೃದಯಿ'ದ ಪೋಲೀಸರು ಮಾನಸಿಕ ಆಸ್ಪತ್ರೆಗೆ ಸೇರಿಸಲು ಯತ್ನಿಸಿದರು. ಆಕೆ ಅದಕ್ಕೆ ತಕರಾರು ಎತ್ತಿದಳು. ಅಧ್ಯಕ್ಷ ರೇಗನ್‌ಗೆ ಕೊಟ್ಟ ಉತ್ತರ–'ನನಗೆ ಸ್ವಾತಂತ್ರ್ಯವಿದ್ದರೂ ವಾಸಕ್ಕೆ ನೆಲೆಯಿಲ್ಲ. ನನ್ನ ಬಗ್ಗೆ ಮಾತನಾಡುವ ಬದಲು ಅಧ್ಯಕ್ಷರು ನನಗೊಂದು ಶಾಶ್ವತ ವಾಸಸ್ಥಳ ಒದಗಿಸಲು ಏಕೆ ನೆರವಾಗಬಾರದು?' ಹೀಗಿದೆ ಸಿರಿವಂತ ಬಂಡವಾಳಶಾಹಿ ದೇಶದ ಮಾನವ ಹಕ್ಕು !

ನೂತನ ಶಿಕ್ಷಣ ನೀತಿ ವಿರೋಧಿಸಿ 'ಶಿಕ್ಷಣ ಉಳಿಸಿ' ಯಶಸ್ವಿ ರಾಜ್ಯ ಸಮಾವೇಶ

(ಒಂದನೇ ಪುಟದಿಂದ)

ಲಕ್ಷಾಂತರ ಕಾರ್ಖಾನೆಗಳು ಮುಚ್ಚುತ್ತಿವೆ. ನಿರುದ್ಯೋಗ ಅನಕ್ಷರತೆ ಭೀಕರವಾಗಿ ತಾಂಡವವಾಡುತ್ತಿದೆ. ಈ ಹಿನ್ನಲೆಯಲ್ಲಿ ಹೊಸ ಶಿಕ್ಷಣ ನೀತಿ ತರಲಾಗುತ್ತಿದೆ. ಸಣ್ಣ ಮತ್ತು ಮಧ್ಯಮ ಉದ್ದಿಮೆಗಳನ್ನು ಕಡೆಗಣಿಸಿ ದೊಡ್ಡ ಪ್ರಮಾಣದ ಕೈಗಾರಿಕೆಗೆ ಪ್ರೋತ್ಸಾಹಿಸುವುದು ಮತ್ತು ಭೂಮಾಲೀಕ ಹಿತ ಕಾಪಾಡಲು ಭೂಸುಧಾರಣೆ ಜಾರಿಗೆ ತರದೇ ಇರುವ ಹಿತಗಳನ್ನು ರಕ್ಷಿಸುವ ಹಿನ್ನೆಲೆಯು ಈ ನೀತಿಗೆ ಇದೆಯೆಂದರು.

ಹೀಗಾಗಿ ಶಿಕ್ಷಣವನ್ನು ಅನುತ್ಪಾದಕ ರಂಗವೆಂದು ಕೇಂದ್ರ ಸರ್ಕಾರ ಪರಿಗಣಿಸಿದೆ. ಆದ್ದರಿಂದ ರಾಷ್ಟ್ರಾದಾಯದಲ್ಲಿ ಕೇವಲ 2.2 ಮಾತ್ರ ವಿನಿಯೋಗಿಸಲಾಗುತ್ತಿದೆ. ವಿಶ್ವದಲ್ಲೇ ಅತ್ಯಂತ ಕಡಿಮೆ ಹಣ ಖರ್ಚು ಮಾಡುವ ಸರ್ಕಾರವಿದು. ಶಿಕ್ಷಣದ ಖಾಸಗೀಕರಣಕ್ಕೆ ಪ್ರೋತ್ಸಾಹ ಹೆಚ್ಚುತ್ತಿದ್ದು ಮುಂದಿನ ದಿನಗಳಲ್ಲಿ ಬೋಧನಾ ಶುಲ್ಕ ರೂ.800 ರೂ 1500 ವರೆಗೂ ತೆರಬೇಕಾಗುತ್ತದೆಂದರು.

ನವೋದಯ ಶಾಲೆಗಳು, ಕಾಲೇಜುಗಳ ಸ್ವಾಯತ್ತತೆ ಪಂಚವಾರ್ಷಿಕ ಯೋಜನೆಗಳು, ಶಿಕ್ಷಣ ಮತ್ತು ಉತ್ಪಾದನಾ ವ್ಯವಸ್ಥೆಯೊಂದಿಗಿನ ಸಂಬಂಧವನ್ನು ವಿಶದೀಕರಿಸಿ ಮಾತನಾಡಿದ ಅವರು ಕರ್ನಾಟಕದ ಶಿಕ್ಷಣ ರಂಗದತ್ತ ಗಮನ ಹರಿಸಿದರು. ಕ್ಯಾಪಿಟೇಶನ್-ಡೊನೇಶನ್ ನಂತಹ ಶುಲ್ಕಗಳ ವಸೂಲಿಯನ್ನು ರಾಜ್ಯ ಸರ್ಕಾರ ಉತ್ತೇಜಿಸುತ್ತಿದೆ. ಇಂತಹ 'ಅಪವಿತ್ರ ದಂಧೆ'ಯಲ್ಲಿ ತೊಡಗಲು 'ಶೈಲಾಕ್'ಗಳಿಗೆ ಸರ್ಕಾರ ಮುಕ್ತ ವಾತಾವರಣ ಕಲ್ಪಿಸಿರುವುದು ನಾಚಿಕೆಗೇಡಿನ ಸಂಗತಿ ಎಂದರು. 'ನಾನು ಇಡೀ ದೇಶದಲ್ಲೇ ಅತಿಹೆಚ್ಚು ಅವಧಿಯ ಶಿಕ್ಷಣ ಸಚಿವನಾಗಿದ್ದೇನೆ. ಪ. ಬಂಗಾಳದಲ್ಲಿ ಕ್ಯಾಪಿಟೇಶನ್, ಡೊನೇಶನ್ ಎಂದರೆ ಏನೆಂದು ಕೇಳುತ್ತಾರೆ. ಕರ್ನಾಟಕದ ವಿದ್ಯಾರ್ಥಿಗಳು ಈ ಪಿಡುಗಿನ ವಿರುದ್ಧ ಸಮರ ಸಾರದಿದ್ದರೆ ದೇಶಕ್ಕೆ ಹರಡುವ ಅಪಾಯವಿದೆ'ಯೆಂದು ಎಚ್ಚರಿಸಿದರು. ಪ್ರಜಾಸತ್ತಾತ್ಮಕ ಕ್ರಮಗಳನ್ನೊಳಗೊಂಡಿರುವ ಪ. ಬಂಗಾಳ ಸರ್ಕಾರದ 'ಯೂನಿವರ್ಸಿಟಿ ಆ್ಯಕ್ಟ್' ಮಂಡಿಸಿದ್ದು ಪುರಸ್ಕಾರಗಳಿಗಲ್ಲ. ಎಡರಂಗ ಸರ್ಕಾರದ ವಿರುದ್ಧ ಕ್ರಮ ಜರುಗಿ ಸೇಡಿನ ಕ್ರಮ ಅನುಸರಿಸುತ್ತಿದ್ದಾರೆ. ಈ ಸಮಾವೇಶಕ್ಕೆ ರಾಜ್ಯದ ವಿವಿಧ ಜಿಲ್ಲೆಗಳಿಂದ 2500 ಕ್ಕೂ ಅಧಿಕ ವಿದ್ಯಾರ್ಥಿ ಪ್ರತಿನಿಧಿಗಳು ಟೌನ್ ಹಾಲ್‌ನಲ್ಲಿ ಕಿಕ್ಕಿರಿದು ನೆರೆದಿದ್ದರು. ಬಿಸಿ ರಕ್ತದ ಯುವಕರು ನೀವು. 18 ಲಕ್ಷ ಸದಸ್ಯರುಗಳು ಎಸ್.ಎಫ್.ಐ. ಇತರರಿಗೂ ನೇತೃತ್ವ ನೀಡಿ ಹೋರಾಡಬೇಕೆಂದರು.

ಅತಿಥಿಗಳಾಗಿ ಆಗಮಿಸಿದ್ದ ಕೇರಳ ವಿ.ವಿ. ಯ ಉಪಕುಲಪತಿ ಡಾ|| ಜೆ. ಬಿ. ನೋಹನ್ ತಂಬಿಯವರು 'ಹೊಸ ಶಿಕ್ಷಣ ನೀತಿಯು ಅಗತ್ಯವಿರಲಿಲ್ಲ, ವಿದ್ಯಾರ್ಥಿ ಶಿಕ್ಷಕರ ಪ್ರಬಲ ವಿರೋಧವಿದ್ದಾಗ್ಯೂ ಇದನ್ನು ಜಾರಿಗೊಳಿಸತೊಡಗಿದ್ದಾರೆ. ವೈದ್ಯಕೀಯ- ಇಂಜಿನಿಯರಿಂಗ್- ಪಾಲಿಟೆಕ್ನಿಕ್ ಶಿಕ್ಷಣದ ಮೇಲೆ ಲಕ್ಷಾಂತರ ರೂ.ಗಳ ಜನತೆಯ ತೆರಿಗೆ ಹಣ ಖರ್ಚು ಮಾಡುವ ಸರ್ಕಾರ ಅದರ ಪಾಲು ಪಡೆಯದೇ ಭಾರೀ ಮುಂದುವರಿದ ರಾಷ್ಟ್ರಗಳಾದ ಅಮೇರಿಕಾ-ಬ್ರಿಟನ್‌ಗಳಿಗೆ ಪ್ರತಿಭೆ ರವಾನಿಸುವ ಅಪರಾಧ ಮಾಡತೊಡಗಿದೆ. ತಾನೇ ನೇಮಿಸಿದ ಆಯೋಗಗಳ ಉತ್ತಮ ಶಿಫಾರಸುಗಳನ್ನು ಜಾರಿಗೊಳಿಸದೇ ಕಣ್ಣಿಗೆ ಮಣ್ಣೆರಚುತ್ತಿದೆ. ಸಮಾಜದ ಆಮೂಲಾಗ್ರ ಬದಲಾವಣೆಯೊಂದಿಗೆ ಹೊಸ ಶಿಕ್ಷಣ ನೀತಿ ಅಗತ್ಯವಿರುತ್ತದೆಂದರು. ಇಂದು ಪ್ರಜಾಸತ್ತಾತ್ಮಕವಾಗಿ ಚುನಾಯಿತರಾದ ಪ್ರತಿನಿಧಿಗಳನ್ನು ಕಿತ್ತೆಸೆಯಲಾಗುತ್ತಿದೆ. ಈಗಾಗಲೇ ಏಳು ಉಪಕುಲಪತಿಗಳನ್ನು ವರ್ಗ ಮಾಡಿರುವುದಲ್ಲದೆ ಐದು ಜನರನ್ನು ವಜಾಗೊಳಿಸಲಾಗಿದೆ. ಶಿಕ್ಷಣ ರಂಗ ಭ್ರಷ್ಟಾಚಾರದಿಂದ ತುಂಬಿ ಕೊಳೆಕತೊಡಗಿದೆಯೆಂದರು. ಸಮಾಜವಾದವನ್ನು ಬಾಯಲ್ಲಿ ಹೇಳುತ್ತಲೇ ಜನರನ್ನು ಬಂಡವಾಳಶಾಹಿಯು ವಂಚಿಸುತ್ತದೆಂದು ತಿಳಿಸಿ ಇದನ್ನು ಹಿಮ್ಮೆಟ್ಟಿಸಬೇಕಿದೆಯೆಂದರು.

ಸಮಾವೇಶವನ್ನುದ್ದೇಶಿಸಿ ಮಾತನಾಡಿ ಇನ್ನೊಬ್ಬ ಅತಿಥಿ ಎಸ್.ಎಫ್.ಐ.ನ ಅಖಿಲ ಭಾರತ ಅಧ್ಯಕ್ಷ ಕಾ|| ಎ. ವಿಜಯರಾಘವನ್ ರವರು ರಾಜೀವ್ ನೂತನ ಶಿಕ್ಷಣ ನೀತಿಯ ವಿರುದ್ಧ ಎಸ್.ಎಫ್.ಐ. ಆರಂಭದಿಂದಲೂ ಹೋರಾಟ ನಡೆಸುತ್ತಾ ಬಂದಿದೆ. ಅದರ ಪರಿಣಾಮವಾಗಿ ನಮ್ಮ ಮೇಲೆ ವಿವಿಧ ರೀತಿಯ ಧಾಳಿ ಆರಂಭಗೊಂಡಿದೆ. ಆದರೂ ಎದೆಗುಂದದೇ ಹೋರಾಟ ನಡೆದಿದೆ. ಮಹಾರಾಷ್ಟ್ರದಲ್ಲಿ ಆಂಧ್ರದಲ್ಲಿ, ಹಿಮಾಚಲ ಪ್ರದೇಶ-ತಮಿಳುನಾಡು ಕೇರಳ-ಪ.ಬಂಗಾಳ ಮುಂತಾದೆಡೆ ಪ್ರಚಂಡ ಪ್ರತಿರೋಧ ಒಡ್ಡಲಾಗುತ್ತಿದೆ. ಹೋರಾಟ ವ್ಯಾಪಿಸುತ್ತಿದೆ. ಭಾರತ ಭವಿಷ್ಯತ್ತು ಹೇಗಿರುತ್ತದೆಂಬುದನ್ನು ಇದು ತೋರಿಸುತ್ತದೆಂದರು. ಕರ್ನಾಟಕ ವಿದ್ಯಾರ್ಥಿ ಸಮುದಾಯವನ್ನು ಸಹ ಈ ಹಾದಿಯಲ್ಲಿ ಮುನ್ನಡೆಯತೊಡಗಿರುವುದು ಅಭಿನಂದನೀಯವೆಂದರು.

ಈಗಿರುವ ಶಿಕ್ಷಣ ಅವಕಾಶಗಳೇ ಅತ್ಯಲ್ಪ, ಆದರೆ ಇದನ್ನು ಇಲ್ಲವಾಗಿಸುವ ನೀತಿಯ ವಿರುದ್ಧದ ಹೋರಾಟಕ್ಕಾಗಿ ಶಿಕ್ಷಣ ಉಳಿಸಿ ಸಮಾವೇಶವೇದು ಎಲ್ಲರಿಗೂ ಶಿಕ್ಷಣದ ಹಕ್ಕು ಒಂದು ಸವಾಲಾಗುತ್ತಿದೆ. ಎಲ್ಲಾ ಪ್ರಜಾಸತ್ತಾತ್ಮಕ-ಪ್ರಗತಿಪರ ಶಕ್ತಿಗಳ ಬೆಂಬಲದೊಂದಿಗೆ ಹಿಮ್ಮೆಟ್ಟಿಸುತ್ತೇವೆಂದು ಪ್ರಾಸ್ತಾವಿಕವಾಗಿ ಮಾತನಾಡಿದ ರಾಜ್ಯ ಸಮಿತಿ ಕಾರ್ಯದರ್ಶಿ ಎಸ್.ವೈ.ಗುರುಶಾಂತ್ ತಿಳಿಸಿದರು. ಸಿದ್ಧತಾ ಸಮಿತಿ ಅಧ್ಯಕ್ಷರಾದ ಕಾಂ|| ಸೂರ್ಯನಾರಾಯಣರಾವ್ ಅವರು ಎಲ್ಲರೂ ಸ್ವಾಗತಿಸಿದರು. ಸಮಾವೇಶದ ಅಧ್ಯಕ್ಷತೆಯನ್ನು ರಾಜ್ಯ ಸಮಿತಿ ಅಧ್ಯಕ್ಷ ಜಿ. ಸಿ. ಬಯ್ಯಾರೆಡ್ಡಿ ವಹಿಸಿದ್ದರು.

ಮಧ್ಯಾಹ್ನ ನಡೆದ ಕಲಾಪದಲ್ಲಿ 'ಕಾಲೇಜುಗಳ ಸ್ವಾಯತ್ತತೆ' ಕುರಿತು ಬೆಂಗಳೂರು ವಿ.ವಿ. ಸೆನೆಟ್ ಸದಸ್ಯ ಡಾ|| ನರೇಂದ್ರನಾಯಕ್ ಮಾತನಾಡಿ ಅದರ ಅಪಾಯಗಳನ್ನು ತಿಳಿಸಿ ಇದರ ವಿರುದ್ಧ ಹೋರಾಟ ನಡೆದಿರುವುದನ್ನು ವಿವರಿಸಿದರು. 'ಪ್ರಜಾಸತ್ತಾತ್ಮಕ ಹಕ್ಕುಗಳು' ಬಗ್ಗೆ ಪ್ರಸಿದ್ಧ ವಿಜ್ಞಾನಿ ಡಾ|| ರಮೇಶ್ ಕೌಲ್ ಮಾತನಾಡಿ 59 ನೆಯ ಸಂವಿಧಾನದ ತಿದ್ದುಪಡಿ, ಮಾನನಷ್ಟ ಮೊಕದ್ದಮೆ, ಎಸ್ಮಾಗಳಂತಹ ಕರಾಳ ಮಸೂದೆಗಳನ್ನು ತಂದಿರುವ ಕೇಂದ್ರ ಸರ್ಕಾರ ಶಿಕ್ಷಕರ-ನೌಕರರು ವಿದ್ಯಾರ್ಥಿಗಳ ಹಕ್ಕುಗಳನ್ನೇ ಮೊಟಕುಗೊಳಿಸಲು ತೊಡಗಿದೆ. ಈ ಕರಾಳ ಕ್ರಮಗಳನ್ನು ಎದುರಿಸಬೇಕೆಂದರು.

'ಸೈದ್ಧಾಂತಿಕ ಭೂಮಿಕೆ ಕುರಿತು ಡಾ|| ಬಿ.ಎನ್. ದೇಶಪಾಂಡೆಯವರು ಮಾತನಾಡಿದರು.

ಶುಭಾಶಯ ಕೋರಿ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ಪಿ. ರಾಮಚಂದ್ರರಾವ್ ಮಾತನಾಡಿದರು.

ಬೆಂಗಳೂರು ವಿ.ವಿ. ಉಪಕುಲಪತಿ ಡಾ|| ಡಿ.ಎಂ. ನಂಜುಂಡಪ್ಪ, ಹಾಗೂ ಧಾರವಾಡ ವಿ.ವಿ. ಉಪಕುಲಪತಿ ಡಾ|| ಜಿ.ಕೆ. ನಾರಾಯಣರೆಡ್ಡಿಯವರು ಶುಭಾಶಯಗಳನ್ನು ಕಳಿಸಿದ್ದರು.

ಕರ್ನಾಟಕ ರಾಜ್ಯದ ಸಿ.ಪಿ.ಐ(ಎಂ) ಸಮ್ಮೇಳನದ ಸ್ವಾಗತ ಸಮಿತಿ

ತಾ|| 17.9.88 ರಂದು ಸೇರಿದ ಮಹಾಸಭೆಯಲ್ಲಿ ಆರಿಸಲಾಗಿದೆ.

ಕಾಂ|| ಎಸ್. ಸೂರ್ಯನಾರಾಯಣರಾವ್ - ಅಧ್ಯಕ್ಷ

ಕಾಂ|| ಎಚ್.ಎನ್.ನಾಗಮೋಹನ್‌ದಾಸ್-ಪ್ರಧಾನ ಕಾರ್ಯದರ್ಶಿ

ಕಾಂ|| ರೇವಣ್ಣ-ಖಜಾಂಚಿ.

ತ್ರಿಪುರಾದಲ್ಲೊಂದು 'ಶರಣಾಗತಿ' ನಾಟಕ

ಸೆಪ್ಟೆಂಬರ್ 10ರಂದು ತ್ರಿಪುರಾದ ಗೋವಿಂದಬಾರಿ ಎಂಬಲ್ಲಿ ಟಿ.ಎನ್.ವಿ. ಉಗ್ರಗಾಮಿಗಳ ಶರಣಾಗತಿ ಸಮಾರಂಭ ನಡೆದಿದ್ದು ಆ ಸಮಾರಂಭದಲ್ಲಿ ಶರಣಾಗತರಾದ ಉಗ್ರಗಾಮಿಗಳ ಪೈಕಿ ಅರ್ಧದಷ್ಟು ಮಂದಿ ಖೋಟಾ ಉಗ್ರಗಾಮಿಗಳೆಂಬುದಾಗಿ ಸುಳಿವು ಸಿಕ್ಕಿದೆ.

ಕಳೆದ ಐದು ವರ್ಷಗಳಲ್ಲಿ ಟಿ.ಎನ್.ವಿ. ಸದಸ್ಯರ ಸಂಖ್ಯೆ 250ಅನ್ನು ಮೀರಿಲ್ಲ ಎಂಬುದಾಗಿ ವಿವಿಧ ಗುಪ್ತಚಾರ ದಳಗಳು ತಿಳಿಸಿವೆ. ಇತ್ತೀಚೆಗೆ ಶರಣಾದ ಟಿ.ಎನ್.ವಿ. ಸದಸ್ಯರುಗಳೇ ತಮ್ಮ ಸಂಘಟನೆಯಲ್ಲಿ ಕೇವಲ 200 ಸದಸ್ಯರಿರುವುದಾಗಿ ದೃಢಪಡಿಸಿದ್ದಾರೆ.

ಕಳೆದ ತಿಂಗಳು ಸರ್ಕಾರ ಮತ್ತು ಟಿ.ಎನ್.ವಿ. ನಡುವೆ ಒಪ್ಪಂದವೇರ್ಪಟ್ಟ ನಂತರ ಹೆಚ್ಚೆಚ್ಚು ಜನರನ್ನು ಟಿ.ಎನ್.ವಿ.ಗೆ ಸೇರಿಸಿಕೊಳ್ಳುವ ಪ್ರಯತ್ನ ನಡೆಯುತ್ತಿರುವುದು ಚೆನ್ನಾಗಿ ತಿಳಿದುಬಂದಿದೆ. ಇದರ ಹಿಂದಿರುವ ಪ್ರಮುಖ ಆಕರ್ಷಣೆಯೆಂದರೆ ಪ್ರತಿಯೊಬ್ಬ ಟಿ.ಎನ್.ವಿ. ಸದಸ್ಯನಿಗೂ ಪುನರ್ವಸತಿಗಾಗಿ 20,000 ರೂಪಾಯಿ ಮತ್ತು ಮನೆ ಕಟ್ಟಿಕೊಳ್ಳಲು 5,000 ರೂಪಾಯಿ ನೀಡಲಾಗುತ್ತದೆ. ಟಿ.ಎನ್.ವಿ. ಮುಖಂಡ ಮತ್ತವರ ಸಹೋದ್ಯೋಗಿಗಳು ಶರಣಾಗತಿ ಸಮಾರಂಭದಲ್ಲಿ 427 ಸದಸ್ಯರನ್ನು ಹಾಜರುಪಡಿಸಿದ್ದಾರೆ.

ಸಮಾರಂಭದಲ್ಲಿ ಶರಣಾಗತರಾದವರಲ್ಲಿ ಏಳನೇ ತರಗತಿಯಲ್ಲಿ ಓದುತ್ತಿರುವ ಒಬ್ಬ ಬಾಲಕನೂ ಸೇರಿದ್ದಾನೆ ! ಅವನ ಶಾಲೆಯ ಇತರ ಇಬ್ಬರೂ ಸೇರಿದ್ದಾರೆ !

ಶರಣಾಗತರಾದವರಲ್ಲಿ ಗಣನೀಯ ಸಂಖ್ಯೆಯಲ್ಲಿ ಆಳುವ ರಂಗದ ಘಟಕ ಪಕ್ಷವಾದ ಟಿ.ಯು.ಜೆ.ಎಸ್.ನ ಸದಸ್ಯರಿದ್ದಾರೆ. ಟಿ.ಯು.ಜೆ.ಎಸ್ ಮುಖಂಡ ನಿರಂಜನ್ ತ್ರಿಪುರರವರ ನೇತೃತ್ವದಲ್ಲಿ 16 ಜನರ ಗುಂಪು ಟಿ.ಎನ್.ವಿ. ಸದಸ್ಯರೆಂದು ಹೇಳಿಕೊಂಡು ಶರಣಾಗಿದ್ದಾರೆ. ಮತ್ತೊಬ್ಬ ಟಿ.ಯು.ಜೆ.ಎಸ್.ನ ಪ್ರಾಥಮಿಕ ಸದಸ್ಯ ರಬೀಂದ್ರ ರಿಯಾಂಗ್ ಕಾಲ್‌ಚೇರ ಎಂಬಲ್ಲಿ ರೇಷನ್ ಅಂಗಡಿ ನಡೆಸುತ್ತಿದ್ದು ಆತನೂ ಸಹ ಅಧಿಕಾರಿಗಳ ಮುಂದೆ ಶರಣಾಗಿದ್ದಾನೆ. ರಾಜ್ಯ ಆರೋಗ್ಯ ಇಲಾಖೆಯಲ್ಲಿ ಉದ್ಯೋಗಿಯಾಗಿರುವ ಉತ್ತಮ್ ದೇಬ್ ಬರ್ಮ ಎಂಬಾತ ಕೂಡ ಶರಣಾಗಿದ್ದಾನೆ.

ಟಿ.ಎನ್.ವಿ. ಉಗ್ರಗಾಮಿಗಳು ಒಪ್ಪಿಸಿರುವ ಶಸ್ತ್ರಾಸ್ತ್ರಗಳ ಬಗ್ಗೆ ಸಹ ಜನತೆಯಲ್ಲಿ ಅನುಮಾನಗಳು ಹುಟ್ಟಿವೆ. ಕೇವಲ 65 ಆಯುಧಗಳನ್ನು ಮಾತ್ರ ಸಮಾರಂಭದಲ್ಲಿ ಒಪ್ಪಿಸಲಾಯಿತು. ಇಡೀ ಸಮಾರಂಭ ನಡೆದ ರೀತಿಯ ಬಗ್ಗೆ ಗುಮಾನಿಗಳು ಶುರುವಾಗಿದ್ದು ಸಮಾರಂಭದಲಿ ಒಪ್ಪಿಸಲಾಗಿರುವ ಶಸ್ತ್ರಾಸ್ತ್ರಗಳು ಭದ್ರತಾ ಪಡೆಗಳಿಂದ ಟಿ.ಎನ್.ವಿ. ಉಗ್ರಗಾಮಿಗಳು ಕಸಿದುಕೊಂಡವುಗಳು ಮಾತ್ರವೇ ಎಂಬ ಅನುಮಾನ ಉಂಟಾಗಿದೆ.

ತ್ರಿಪುರಾದ ನಾಗರೀಕ ಆಡಳಿತ ಮತ್ತು ಸೇನಾ ಪಡೆಗಳು ಏರ್ಪಡಿಸಿದ್ದ ಈ ಸಮಾರಂಭಕ್ಕೆ ಪತ್ರಕರ್ತರನ್ನು ಉದ್ದೇಶಪೂರ್ವಕವಾಗಿ ನಿಷೇಧಿಸಲಾಗಿತ್ತು.

ನಾಗರೀಕ ಆಡಳಿತ ಮತ್ತು ಸೇನಾಪಡೆಗಳು ಈ ಘಟನೆಯ ಯಶಸ್ಸಿನ ಗೌರವವನ್ನು ಪಡೆದುಕೊಳ್ಳಲು ಪರಸ್ಪರ ಗುದ್ದಾಡುತ್ತಿದ್ದಾಗ ರಾಜ್ಯದ ರಾಜಕೀಯ ನಾಯಕತ್ವ ಮಾತ್ರ ಮೌನ ಪ್ರೇಕ್ಷಕನಾಗಿತ್ತು.

ಅಗರ್ತಲದಿಂದ 200 ಕಿ.ಮೀ. ದೂರದಲ್ಲಿ ನಡೆದ ಸಮಾರಂಭದಲ್ಲಿ ವರದಿ ಮಾಡಲು ದೂರದರ್ಶನಕ್ಕೆ ಮಾತ್ರ ಅವಕಾಶ ನೀಡಲಾಗಿತ್ತು.

— ಆಧಾರ : ಇಂಡಿಯನ್ ಎಕ್ಸ್‌ಪ್ರೆಸ್
ಸೆಪ್ಟೆಂಬರ್ 14, 1988

ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ನಡೆಯುವ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸಮ್ಮೇಳನಗಳ ವಿವರಗಳು

ಜಿಲ್ಲೆ	ದಿನಾಂಕ	ಹಾಜರಾಗುವ ರಾಜ್ಯದ ಸೆಕ್ರೆಟ್ರಾರಿಯೆಟ್ ಸದಸ್ಯರು
ಶಿವಮೊಗ್ಗ	17.9.88	ಸಿ. ನಂಜುಂಡಪ್ಪ
		ಕೆ. ಆರ್. ಶ್ರೀಯಾನ್
ಗುಲ್ಬರ್ಗ	24.9.88	ಪಿ. ರಾಮಚಂದ್ರರಾವ್
	25.9.88	ಎನ್. ಕೆ. ಉಪಾಧ್ಯಾಯ
ಬಳ್ಳಾರಿ	26.9.88	ಪಿ. ರಾಮಚಂದ್ರರಾವ್
	27.9.88	ಎನ್. ಕೆ. ಉಪಾಧ್ಯಾಯ
ಬೆಂಗಳೂರು	10.10.88	ಪಿ. ರಾಮಚಂದ್ರರಾವ್
	11.10.88	ಸಿ. ನಂಜುಂಡಪ್ಪ
	12.10.88	ಕೆ. ಆರ್. ಶ್ರೀಯಾನ್
		ವಿ. ಜೆ. ಕೆ. ನಾಯರ್
		ಎನ್. ಕೆ. ಉಪಾಧ್ಯಾಯ
ರಾಯಚೂರು	13.10.88	ಎನ್.ಕೆ ಉಪಾಧ್ಯಾಯ,
	14.10.88	ವಿ.ಜೆ.ಕೆ. ನಾಯರ್
	15.10.88	
ಕೋಲಾರ	14.10.88	ಪಿ. ರಾಮಚಂದ್ರರಾವ್
	15.10.88	ಸಿ. ನಂಜುಂಡಪ್ಪ
	16.10.88	ಎಸ್. ಸೂರ್ಯನಾರಾಯಣರಾವ್
ತುಮಕೂರು	22.10.88	ಪಿ. ರಾಮಚಂದ್ರರಾವ್
	23.10.88	ಎನ್. ಕೆ. ಉಪಾಧ್ಯಾಯ
ದಕ್ಷಿಣ ಕನ್ನಡ	23.10.89	ಪಿ. ರಾಮಚಂದ್ರರಾವ್
	24.10.88	ಸಿ. ನಂಜುಂಡಪ್ಪ
	25.10.88	ಎಸ್. ಸೂರ್ಯನಾರಾಯಣರಾವ್
ಧಾರವಾಡ	26.10.88	ಎನ್. ಕೆ. ಉಪಾಧ್ಯಾಯ
	27.10.88	ಸಿ. ನಂಜುಂಡಪ್ಪ
ಮೈಸೂರು	—	ಎಸ್. ಸೂರ್ಯನಾರಾಯಣರಾವ್
		ಎನ್. ಕೆ. ಉಪಾಧ್ಯಾಯ
ಹಾಸನ	—	ಸಿ. ನಂಜುಂಡಪ್ಪ
ಚಿಕ್ಕಮಗಳೂರು	—	ಸಿ. ನಂಜುಂಡಪ್ಪ
ಕೊಡಗು	—	—

Printed & Published by P. Ramachandra Rao on behalf of the Communist Party of India (Marxist) Karnataka State Committee, K. V. Temple Street Sulthanpet, Bangalore-560053. Editorial and Managerial Office : L-56, K. V. Temple Street, Sulthanpet, B-53, Phone : 75331.
Editor : P. Ramachadra Rao, Managing Editor : N. K. Upadhayaya. Janagere Mudrana, Bangalore-21.